FINANCIAL BUSINESS

Dicussion and voting of demands for grants for the year 1980-81

Demand No.s 9, 10, 13.

SRI G.B. SHANKAR RAO (Minister for Education).—Madam Deputy Speaker, on the recommendation of the Governor I beg to move :

"That a sum not exceeding Rs. 6,27,00,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1981 in respect of Demand No. 9".

"That a sum not exceeding Rs. 28,69,20,000 on Revenue Account and Rs. 52,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1981 in respect of Demand No. 10".

"That a sum not exceeding Rs. 1,24,18,87,000 on Revenue Account and Rs. 53,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1981 in respect of Demand No. 13."

The question was proposed

12-NOON

ಶ್ರೀ ಮಳ್ಳೂರ್ ಆನಂದರಾವ್ (ರಾಜಾಜಿನಗರ).—ಮಾನ್ಯ ಸಭಾಧ್ಯಕ್ಷಿಣಿಯವರೇ ಮಾನ್ಯ ವಿದ್ಯಾ ಸಚಿವರು ಶಿಕ್ಷಣದ ಬೇಡಿಕೆಗಳ ಬಗ್ಗೆ ಒಪ್ಪಿಗೆ ಕೊಡಬೇಕೆಂದು ಹೇಳಿ ಈ ಸಭೆಯ ಮುಂದೆ ಮಂಡಿಸಿದ್ದಾರೆ ಅವರು ಈ ಬೇಡಿಕೆಯನ್ನು ರಾಹು ಕಾಲದಲ್ಲಿ ಮಂಡಿಸಿದ್ದಾರೆ. ಅವರು ೧೬೦ ಕೋಟಿ ರೂಪಾಯಿ ಗಳನ್ನು ಈ ವಿದ್ಯಾ ಇಲಾಖೆಯ ಬೇಡಿಕೆಗೆ ಕೇಳಿದ್ದಾರೆ. ೧೯೭೯-೮೦ರ ಒಂದು ವಾರ್ಷಿಕ ವರದಿಯನ್ನು ನಮಗೆ ಕೊಟ್ಟಿದ್ದಾರೆ. ಅದರ ಜೊತೆಗೆ ಬಜೆಟ್ಟನ್ನು ಕೂಡ ಕೊಟ್ಟಿದ್ದಾರೆ. ಇದರಲ್ಲಿ ಅಂಕಿಅಂಶಗಳು ತುಂಬಿವೆ. ಕಳೆದವರ್ಷ ಎಷ್ಟು ಶಾಲೆಗಳು ಇದ್ದವು, ಈ ವರ್ಷ ಎಷ್ಟು ಶಾಲೆಗಳಾಗಿವೆ ಎಷ್ಟು ಶಾಲೆ ಗಳಿಗೆ ಸರ್ಕಾರದವರು ಅನುಮತಿಯನ್ನು ಕೊಟ್ಟಿದ್ದಾರೆ, ಎಷ್ಟು ಶಾಲೆಗಳಿಗೆ ಅನುಮತಿಯನ್ನು ಕೊಟ್ಟಿಲ್ಲ ಇದನ್ನೆಲ್ಲಾ ಕೊಟ್ಟಿದ್ದಾರೆ. ಇದರ ಜೊತೆಗೆ ವಿದ್ಯಾ ಇಲಾಖೆಯ ಆಡಳಿತದ ಬಗ್ಗೆ ಸಾಕಷ್ಟು ವಿವರಗಳು ಈ ವರದಿಯಲ್ಲಿವೆ. ಕಳೆದವರ್ಷ ಯಾವ ಬಣ್ಣದ ವಾರ್ಷಿಕ ವರದಿಯನ್ನು ಕೊಟ್ಟಿದ್ದಾರೋ ಈ ವರ್ಷ ಕೂಡ ಕೊಟ್ಟಿರುವ ವರದಿ ಅದೇ ಬಣ್ಣ ಇದೆ. ಒಳಗಡೆ ಇರುವ ಕಂಟೆಂಟ್ಸ್ ನೋಡಿದರೆ ಅಂಕಿಗಳು ಬಹಳ ಇವೆ. ಶ್ರೀಮಾನ್ ಸುಬ್ಬಯ್ಯಶೆಟ್ಟರು ವಿದ್ಯಾಮಂತ್ರಿಗಳಾಗಿದ್ದಾಗ ವರದಿಯಲ್ಲಿ ಏನು ವಿಚಾರ ವನ್ನು ಕೊಟ್ಟಿದ್ದರೋ ಅದೇ ಕೆಲವು ವಿವರಗಳು ಇದರಲ್ಲಿದೆ. ನಾನು ರಿಪೋರ್ಟ್ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ ? ಅಂಕಿಅಂಶಗಳು ಇವೆ. ಸಹಸ್ರಾರು ಜನ ವಿದ್ಯಾರ್ಥಿಗಳಿದ್ದಾರೆ ಅಧಿಕಾರಿ ಗಳಿದ್ದಾರೆ ಅನೇಕ ಶಾಲೆಗಳಿವೆ. ಅನೇಕ ಜನ ಅಧ್ಯಾಪಕರು ಇದ್ದಾರೆ. ಕೋಟ್ಯಾಂತರ ರೂಪಾಯಿ ಈ ಖಾತೆಗೆ ಖರ್ಚಾಗುತ್ತಿದೆ, ಲಕ್ಷಾಂತರ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಪ್ರತಿವರ್ಷ ಎಷ್ಟೆಷ್ಟು ಮಕ್ಕಳು ಪರೀಕ್ಷೆಗಳಲ್ಲಿ ಉತ್ತೀರ್ಣರಾಗುತ್ತಾರೆ ಎನ್ನುವ ಅಂಕಿಅಂಶಗಳನ್ನು ಕೂಡ ಇದರಲ್ಲಿ ಕೊಟ್ಟಿದ್ದಾರೆ ನಾನು ವಿಧಾನಪರಿಷತ್ ಸದಸ್ಯನಾಗಿ ವಿಧಾನಪರಿಷತನ್ನು ಪ್ರವೇಶಮಾಡಿದಾಗ ೧೯೭೦ನೇ ಇಸವಿಯಲ್ಲಿ

ಶಿಕ್ಷಣ ಬೇಡಿಕೆಗೆ ೫೦ ಕೋಟಿ ರೂಪಾಯಿಗಳನ್ನು ಒದಗಿಸುತ್ತಿದ್ದರು ಆ ಮೇಲೆ ೫೫ ಕೋಟಿ ರೂಪಾಯಿಗಳಾಯಿತು. ಹೀಗೆ ಬರುಬರುತ್ತಾ ಹೆಚ್ಚಾಗಿ ೧೯೮೦-೮೧ನೇ ಸಾಲಿಗೆ ೧೬೦ ಕೋಟಿ ರೂಪಾಯಿಗಳನ್ನು ಈ ಬೇಡಿಕೆಗೆ ಈ ಸಭೆಯ ಮುಂದೆ ಇಟ್ಟಿದ್ದಾರೆ. ನಮ್ಮ ಒಟ್ಟು ಬಡ್ಜೆಟ್ಟನ್ನು ತೆಗೆದುಕೊಂಡರೆ ಸ್ವಲ್ಪ ಹೆಚ್ಚು ಕಡಿಮೆ ೧/೩ ಭಾಗದಷ್ಟು ಹಣವನ್ನು ಶಿಕ್ಷಣ ಬೇಡಿಕೆಗೆ ಕೊಡುತ್ತಿದ್ದಾರೆ. ಈ ಬಾಬಿಗೆ ಹಣವನ್ನೇನೋ ಹೆಚ್ಚಾಗಿ ಒದಗಿಸಲಾಗುತ್ತಿದೆ ಆದರೆ, ಶಿಕ್ಷಣ ಕೆಲಸಕಾರ್ಯಗಳನ್ನು ಮಾಡುವುದರಲ್ಲಿ ಹೆಚ್ಚಿಸಿದಂತೆ ಕಾಣುವುದಿಲ್ಲ ೧೦ ವರ್ಷಗಳ ಹಿಂದೆ ಈ ಶಿಕ್ಷಣ ಬಾಬಿಗೆ ೫೦ ಕೋಟಿ ರೂಪಾಯಿ ಇದ್ದಂಥಾದ್ದು ಇವತ್ತು ೧೬೦ ಕೋಟಿ ರೂಪಾಯಿಗಳಿಗೆ ಏರಿದೆ. ಆದರೆ ನಾನು ಸರ್ಕಾರಕ್ಕೆ ಮತ್ತು ಸಭೆಗೆ ಒಂದು ಪ್ರಶ್ನೆ ಕೇಳುತ್ತೇನೆ, ಈ ಪ್ರಶ್ನೆಯನ್ನು ೭-೮ ವರ್ಷಗಳಿಂದಲೂ ಕೇಳುತ್ತಿದ್ದೇನೆ ನನ್ನ ಪ್ರಶ್ನೆಗೆ ತೃಪ್ತಿಯಾಗುವಂತಹ ಉತ್ತರ ಬರುತ್ತಿಲ್ಲ. ನಾನು ಕೇಳುತ್ತೇನೆ ಈ ವಿದ್ಯಾ ಖಾತೆಯ ಬಾಬಿಗೆ ಇಷ್ಟೊಂದು ಹಣವನ್ನು ಕೊಡುತ್ತಿದ್ದಾರೆ ಅದು ಏನಾಗುತ್ತದೆ ? ಇಷ್ಟೊಂದು ಹಣ ಎಲ್ಲಿಗೆ ಹೋಗಿ ಮುಟ್ಟುತ್ತದೆ ? ಅನುದಾನ ರೂಪದಲ್ಲಿ ಶಾಲಾಕಾಲೇಜುಗಳಿಗೆ ಕೊಡತಕ್ಕಂಥಹ ಹಣ ಅಂತಿಮವಾಗಿ ಎಲ್ಲಿ ಹೋಗುತ್ತದೆ ? ನಿಜವಾಗಿ ಮಕ್ಕಳಿಗೆ ಶಿಕ್ಷಣ ಕೊಡತಕ್ಕ ಕಾರ್ಯದಲ್ಲಿ ಉಪಯೋಗವಾಗುತ್ತಿದೆಯೋ ? ಇಲ್ಲ ಹುಚ್ಚು ಹೊಳೆಯಾಗಿ ಎಲ್ಲಿ ಹರಿದು ಹೋಗುತ್ತದೆಯೋ ಗೊತ್ತಿಲ್ಲ ಈ ವಾರ್ಷಿಕ ವರದಿಯಲ್ಲಿ ಡೆಪ್ಯೂಟಿ ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್, ಅಧ್ಯಾಪಕರು ಎಷ್ಟು ಜನ ಇದ್ದಾರೆಯೆಂದು ಕೊಟ್ಟಿದ್ದಾರೆ, ಶಾಲಾ ಕಾಲೇಜುಗಳನ್ನು ಹೊಸದಾಗಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಾನು ಒಂದು ಪ್ರಶ್ನೆ ಕೇಳುತ್ತೇನೆ ? ೧೬೦ ಕೋಟಿ ರೂಪಾಯಿಗಳನು ಶಿಕ್ಷಣ ಕ್ಷೇತ್ರಕ್ಕೆ ಕೊಡುವಾಗ ಯಾರು ಯಾವ ಹಂತದಲ್ಲಿಯಾದರೂ ಅದರ ಪ್ರತಿಫಲ ಬಂದಿದೆಯೋ ? ಅದರಿಂದ ಸದುಪಯೋಗವಾಗಿದೆಯೋ ಎಂಬುದನ್ನು ಯಾರಾದರೂ ಕುಳಿತುಕೊಂಡು ಯೋಚನೆ ಮಾಡುತ್ತಿದ್ದಾರೆಯೋ ? ಈಗ ಅನೇಕ ಅಭಿವೃದ್ಧಿ ಕಾರ್ಯಗಳಿಗೆ ಪ್ರಾಜೆಕ್ಟ್‌ಗಳಿಗೆ ರಸ್ತೆಗಳ ನಿರ್ಮಾಣಕ್ಕೆ ಈ ರೀತಿ ಸರ್ಕಾರದವರು ಹಣವನ್ನು ಕೊಡುತ್ತಿದ್ದಾರೆ. ಈ ರೀತಿ ಕೊಟ್ಟ ಹಣ ಯಾವರೀತಿ ಉಪಯೋಗವಾಗುತ್ತಿದೆ ಅದರಿಂದ ಏನಾದರೂ ಪ್ರತಿಫಲ ಬಂದಿದೆಯೋ ಎಂಬುದನ್ನು ಅಸೆಸ್ ಮಾಡುವುದಕ್ಕೆ ಏನಾದರೂ ಅಳತೆಗೋಲು ಇದೆಯೋ ? ಶಿಕ್ಷಣ ಇಲಾಖೆಯಲ್ಲಿ ಬೇಕಾದಷ್ಟು ಸಿಬ್ಬಂದಿ ಇದೆ ಈ ರೀತಿ ಕೊಟ್ಟಂತಹ ಹಣವನ್ನು ಅದು ಎಷ್ಟರಮಟ್ಟಿಗೆ ಸದುಪಯೋಗವಾಗಿದೆ ಎನ್ನುವುದನ್ನು ಯಾರಾದರೂ ಕೇಳುತ್ತಿದ್ದಾರೆಯೋ ? ಇದನ್ನು ಯೋಚನೆ ಮಾಡುವುದಾದರೆ ಬಹಳ ದುಃಖವಾಗುತ್ತದೆ. ಇದು ಬಹಳ ದುರ್ದೈವದ ಸಂಗತಿ ಇದರ ಬಗ್ಗೆ ಯಾರೂ ಕೂಡ ಯೋಚನೆ ಮಾಡುತ್ತಿಲ್ಲ. ಮಾನ್ಯ ಶಿಕ್ಷಣ ಮಂತ್ರಿಗಳನ್ನು ನಾನು ಪ್ರಶ್ನೆ ಕೇಳುತ್ತೇನೆ ಅವರು ಇಷ್ಟು ಶಾಲಾಕಾಲೇಜುಗಳನ್ನು ಮಂಜೂರುಮಾಡಿದ್ದಾರೆ ಇಷ್ಟು ಕೋಟಿರೂಪಾಯಿ ಹಣವನ್ನು ಖರ್ಚು ಮಾಡುತ್ತಾರೆ ಇದೆಲ್ಲದರ ಜವಾಬ್ದಾರಿ ಅವರ ಮೇಲೆ ಇದೆ. ಇದರಿಂದ ಪ್ರತಿಫಲ ಬಂದಿದೆಯೋ ಏನಾದರೂ ಸದುಪಯೋಗವಾಗಿದೆಯೋ ಎಂಬುದನ್ನು ಮೇಜರ್ ಮಾಡುವುದಕ್ಕೆ ಅಳತೆಗೋಲು ಇದೆಯೋ ಎನ್ನುವುದನ್ನು ನಾನು ಕೇಳುತ್ತೇನೆ. ಇದನ್ನು ಮಾಡಬೇಕಾದರೆ ಈ ಒಂದು ಹಿನ್ನೆಲೆಯಲ್ಲಿ ಮೇಜರ್ ರಾಡ್ ಬೇಕು. ಈಗ ಸರ್ಕಾರದವರು ಒಂದು ಇರಿಗೇಷನ್ ಪ್ರಾಜೆಕ್ಟ್‌ಗೆ ಹಣವನ್ನು ಖರ್ಚುಮಾಡಿ ಕಟ್ಟಿಸುತ್ತಾರೆ ಆಮೇಲೆ ಅದರಿಂದ ಏನು ಪ್ರತಿಫಲ ಬಂತು ಎನ್ನುವುದನ್ನು ನಾವು ಲೆಕ್ಕ ಹಾಕುತ್ತೇವೆ. ಅದೇ ರೀತಿ ವಿದ್ಯಾ ಖಾತೆಗೆ ಇಷ್ಟೊಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡುವಾಗ ಅದರಿಂದ ಸದುಪಯೋಗ ಆಗಿದೆಯೋ ಅದರಿಂದ ಏನು ಪ್ರತಿಫಲ ಬಂತು ಎನ್ನುವಂತಹ ಲೆಕ್ಕವನ್ನು ಹಾಕಬೇಕಾಗುತ್ತದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿ ಇದೆ ಅವರಾದರೂ ಇದನ್ನು ಚೆಕ್ ಮಾಡಿದ್ದಾರೆಯೋ ? ಇಷ್ಟೊಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡುವಾಗ ಇದರಿಂದ ಏನು ಪ್ರತಿಫಲ ಬರಬೇಕೆಂದು ಕಲ್ಪನೆ ಇದೆಯೋ ಅದನ್ನು ಅಸೆಸ್ ಮಾಡಿ ಬ್ಯಾಲೆನ್ಸ್ ಷೀಟನ್ನು ಹಾಕಬೇಕು. ಅದಕ್ಕಾಗಿ ನಾನು ಸರ್ಕಾರವನ್ನು ಕೇಳುತ್ತೇನೆ ನೀವು ಇದರಲ್ಲಿ ಏನು ಅಪೇಕ್ಷೆ ಮಾಡುತ್ತೀರಿ ? ನಿಮ್ಮ ಪಾಲಿಸಿ ಯಾವುದು ನಾನು ೯ ವರ್ಷಗಳಿಂದಲೂ ಈ ಬಗ್ಗೆ ಕೇಳುತ್ತಿದ್ದೇನೆ ಯಾವ ಮಂತ್ರಿಗಳು ಕೂಡ ಸರಿಯಾಗಿ ಉತ್ತರ ಕೊಟ್ಟಿಲ್ಲ. ನನ್ನ ಪ್ರಕಾರ ಹೇಳುವುದಾದರೆ ಶಿಕ್ಷಣ ಪಾಲಿಸಿಯು ಸರಿಯಾಗಿ ಆಗಿಲ್ಲ. ೧೬೦ ಕೋಟಿಗಳನ್ನು ಈ ಸಭೆಯಿಂದ ಮಂಜೂರು ಮಾಡಿಸಿಕೊಂಡು ವ್ಯರ್ಥ ವೆಚ್ಚ ಮಾಡುತ್ತಿದ್ದಾರೆ. ಸರ್ಕಾರದವರು ಈ ಬಾಬಿಗೆ ಏನು ಹಣವನ್ನು ಖರ್ಚುಮಾಡುತ್ತಿದ್ದಾರೆ ಅದಕ್ಕೆ ಏನು ಪ್ರತಿಫಲ ಬರಬೇಕು ಎನ್ನುವ ಕಲ್ಪನೆ ಅವರಿಗಿಲ್ಲ. ನಾನು ಯಾವುದೇ ಒಂದು ಶಿಕ್ಷಣ ಸಂಸ್ಥೆಯ ಬಗ್ಗೆ ಮಾತನಾಡುತ್ತಿಲ್ಲ. ಇಡೀ ರಾಷ್ಟ್ರದ ರಾಜ್ಯದ ಶಿಕ್ಷಣದ ಬಗ್ಗೆ ಮಾತನಾಡುತ್ತಿದ್ದೇನೆ. ಪ್ರೈಮರಿ ಶಾಲೆಗಳನ್ನು ನೋಡಿಕೊಳ್ಳುವುದಕ್ಕೆ ಡೆಪ್ಯೂಟಿ ಡೈರೆಕ್ಟರ್‌ಗಳು ಇದ್ದಾರೆ. ಸೆಕೆಂಡರಿಶಾಲೆಗಳನ್ನು ನೋಡಿಕೊಳ್ಳುವುದಕ್ಕೆ ಜಾಯಿಂಟ್ ಡೈರೆಕ್ಟರ್‌ಗಳು ಡೈರೆಕ್ಟರ್

ಇದ್ದಾರೆ ಕಾಲೇಜು ಶಿಕ್ಷಣ ನೋಡಿಕೊಳ್ಳುವುದಕ್ಕೆ ಡೈರೆಕ್ಟರ್ ಆಫ್ ಕೊಲಿಜಿಯೇಟ್ ಎಜುಕೇಶನ್ ಇದ್ದಾರೆ, ಟೆಕ್ನಿಕಲ್ ಶಿಕ್ಷಣ ನೋಡಿಕೊಳ್ಳುವುದಕ್ಕೆ ಡೈರೆಕ್ಟರ್ ಆಫ್ ಟೆಕ್ನಿಕಲ್ ಇದ್ದಾರೆ. ಇಷ್ಟೆಲ್ಲಾ ಅಧಿಕಾರಿಗಳು ಇದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಇವರೆಲ್ಲ ಇದ್ದಮೇಲೆ ಇದರಿಂದ ಎಷ್ಟರ ಮಟ್ಟಿಗೆ ಮಕ್ಕಳಿಗೆ ವಿದ್ಯಾಭ್ಯಾಸ ದೊರೆತಿದೆ ಯಾವರೀತಿ ಅನುಕೂಲವಾಗಿದೆ ಎಂಬುದನ್ನು ಯಾರು ಕೇಳಿಲ್ಲ ಮಕ್ಕಳು ಮತ್ತು ಯುವಕರು ಶಾಲಾಕಾಲೇಜುಗಳಿಗೆ ಸೇರಿ ಶಿಕ್ಷಣವನ್ನು ಪಡೆದು ಹೊರಗಡೆ ಬಂದಮೇಲೆ ಆ ಶಿಕ್ಷಣದಿಂದ ಸಫಲವಾಗಿದೆಯೋ ವಿಫಲವಾಗಿದೆಯೋ ಎನ್ನುವುದನ್ನು ಪರೀಕ್ಷೆ ಮಾಡ ತಕ್ಕಂತಹ ಅಳತೆಗೋಲನ್ನು ಇಟ್ಟಿಲ್ಲ. ಈ ದೃಷ್ಟಿಯಿಂದ ಅಳೆದು ನೋಡಿದರೆ ೧೬೦ ಕೋಟಿರೂಪಾಯಿ ಗಳನ್ನು ಸರ್ಕಾರದವರು ಏನು ವಿದ್ಯಾ ಖಾತೆಗೆ ಖರ್ಚುಮಾಡುತ್ತಿದ್ದಾರೆ ಅದು ವ್ಯಥಾ ಖರ್ಚಾಗಿದೆಯೆಂದು ನನ್ನ ಅಭಿಪ್ರಾಯ. ನಾವು ಈ ಬಾಬಿಗಾಗಿ ಖರ್ಚುಮಾಡತಕ್ಕಂಥಹ ಹಣಕ್ಕೆ ಸರಿಯಾದಂತಹ ಪ್ರತಿಫಲ ಬಂದಿಲ್ಲವೆಂದು ನನ್ನ ಅಭಿಪ್ರಾಯ. ನಾನು ಸುಮಾರು ೨೫ ವರ್ಷ ಗಳ ಕಾಲ ಈ ಶಿಕ್ಷಣಕ್ಷೇತ್ರದಲ್ಲಿ ದುಡಿದಿದ್ದೇನೆ ನನಗೂ ಅಲ್ಪಸ್ವಲ್ಪ ಅನುಭವ ಇದೆ. ನನ್ನ ಅನುಭವದ ಪ್ರಕಾರ ಹೇಳುವುದಾದರೆ, ಆದಷ್ಟು ಬೇಗನೆ ಇಡೀ ಶಿಕ್ಷಣ ಸಂಸ್ಥೆಗಳನ್ನು ಕ್ಲೋಸ್ ಮಾಡಿದರೆ ಉಳಿದು ಕೊಳ್ಳುತ್ತದೆ ಎಂದು ಹೇಳುತ್ತೇನೆ. ನಾನು ಈ ಮಾತನ್ನು ಆಡಬೇಕಾದರೆ ಸುಮ್ಮನೆ ಆಡುತ್ತಿಲ್ಲ. ಮಹಾತ್ಮ ಗಾಂಧೀಜಿಯವರೇ ಸ್ವತಃ ಹೇಳಿದ್ದನ್ನು ಹೇಳಿದ್ದೇನೇ ವಿನಾ ಇದು ನನ್ನ ಸ್ವಂತ ಮಾತಲ್ಲ. ಇದನ್ನು ಯಾವ ಸಂದರ್ಭದಲ್ಲಿ ಅವರು ಹೇಳಿದರು ಎಂದರೆ, ಒಬ್ಬ ಪತ್ರಿಕಾಕರ್ತ ಅವರನ್ನು ಸಂದರ್ಶಿಸಿ ದಾಗ ಆತನು ಈ ಶಿಕ್ಷಣದ ಪದ್ಧತಿ ಬಗ್ಗೆ ನಿಮ್ಮ ನೀತಿ ಏನು ಎಂದು ಕೇಳಿದಾಗ ಅವರು ಹೇಳಿದರು, ಈ ಶಿಕ್ಷಣದ ಬಗ್ಗೆ ನನಗೇನಾದರೂ ಅಧಿಕಾರ ಕೊಟ್ಟರೆ ಪ್ರಪಂಚದಲ್ಲಿರತಕ್ಕಂಥಾ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನೂ ಕೂಡ ಮುಚ್ಚಿಬಿಡುತ್ತೇನೆಂದು ಹೇಳಿದರು ಅವರು ಈ ಮಾತನ್ನು ಹುಚ್ಚುಹುಚ್ಚಾಗಿ ಹೇಳಲಿಲ್ಲಾ. ಅವರು ಹೇಳಿದಂಥಾ ಮಾತನ್ನೇ ನಾನು ಹೇಳುತ್ತೇನೆ. ಅವರು ನ್ಯಾಯವಾದುದನ್ನೇ ಹೇಳಿದ್ದಾರೆ. ಅವರು ಈ ಮಾತನ್ನು ಏತಕ್ಕೆ ಹೇಳಿದರು ಎಂದರೆ, ಈ ಶಿಕ್ಷಣ ಪದ್ಧತಿಯನ್ನು ನಾವು ಹೀಗೇ ಮುಂದು ವರೆಸಿಕೊಂಡು ಹೋದರೆ ಇದು ಸಮಾಜಕ್ಕೆ ಪೂರಕವಾಗುವ ಬದಲು ಸಮಾಜಕ್ಕೆ ಹಾನಿಯಾಗುತ್ತದೆ ಅನ್ನುವ ಅಭಿಪ್ರಾಯ ಇಟ್ಟುಕೊಂಡು ಹೇಳಿದರು. ಆದುದರಿಂದ ನಾನೂ ಕೂಡ ಹೇಳುವುದು ಹಾಗೆ. ಈಗ ಇರತಕ್ಕಂಥಾ ಶಿಕ್ಷಣ ಪದ್ಧತಿಯನ್ನು ರದ್ದು ಮಾಡಿದರೆ ಆದರಿಂದ ಸಮಾಜಕ್ಕೆ ಹಾನಿಯಾಗುವುದಾ ದರೂ ತಪ್ಪುತ್ತದೆ ಎಂದು ಹೇಳುತ್ತೇನೆ. I prefer Chaos rather than the present system of education. These are the words used by Mahatma Gandhi. ಈವೊತ್ತಿನ ದಿವಸ ಎಲ್ಲಿ ಹೋಗಿ ನೋಡಲಿ ಎಲ್ಲಾ ಕಡೆಯೂ ಹೀಗೆ ಇದೆ. ಏನೂ ವ್ಯತ್ಯಾಸ ಇಲ್ಲ. ಇದನ್ನು ನಾವು ಲೆಕ್ಕ ಹಾಕಿದಾಗ, The output of education is nothing but chaos. ನಾನು ಇದರ ಬಗ್ಗೆ ಇನ್ನು ವಿವರಿಸುವುದಕ್ಕೆ ಹೋಗುವುದಿಲ್ಲ. ಈ ವಿಷಯವನ್ನು ನಾನು ತಾತ್ವಿಕವಾದ ದೃಷ್ಟಿ ಯಿಂದ ತೆಗೆದುಕೊಂಡು ಹೇಳುತ್ತಿದ್ದೇನೆ. ಇದು ಹೊಗಳಿಕೆಯ ಮಾತಲ್ಲ. ಈ ಶಿಕ್ಷಣದ ಬಗ್ಗೆ ಇಷ್ಟು ಮಾತ್ರ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ನಾವು ಶಿಕ್ಷಣ ಕೊಡುವ ಉದ್ದೇಶ ಏನು? ಒಬ್ಬ ವಿದ್ಯಾರ್ಥಿ ತನ್ನ ಶಿಕ್ಷಣವನ್ನು ಮುಗಿಸಿಕೊಂಡು ಹೊರಗೆ ಬಂದಮೇಲೆ ಆತನು ತನ್ನ ಕಾಲಮೇಲೆ ನಿಂತುಕೊಂಡು ಸ್ವಾವಲಂಬಿಯಾಗಿ ಜೀವನ ಮಾಡಬೇಕೆನ್ನುವುದೇ ನಮ್ಮ ಉದ್ದೇಶ. ಆದರೆ ಈವೊತ್ತು ಆಗುತ್ತಾ ಇರು ವುದು ಏನು ? ಅವನು ಸ್ವಾವಲಂಬಿಯಾಗಿರುವುದಿಲ್ಲ, ಪರಾವಲಂಬಿಯಾಗಿರುತ್ತಾನೆ. ಅವನು ಬಿ.ಎ., ಬಿ.ಎಸ್‌ಸಿ., ಪಾಸು ಮಾಡಿಕೊಂಡು ಬಂದಮೇಲೆ ಅವನು ಸ್ವಾವಲಂಬಿಯಾಗಿರುವುದಿಲ್ಲ. ಕೈಯಲ್ಲಿ ಒಂದು ಅಪ್ಲಿಕೇಷನ್ ಹಿಡಿದುಕೊಂಡು ಬಂದು ಬೀದಿಬೀದಿಯಲ್ಲಿ ಕೆಲಸ ಹುಡುಕಿಕೊಂಡು ಇಲ್ಲವೇ ಯಾರನ್ನಾದರೂ ಎಂ.ಎಲ್.ಎ. ಹುಡುಕಿಕೊಂಡು ಬಂದು ನನಗೆ ಕೆಲಸ ಕೊಡಿಸಿ ಎಂದು ಕೇಳುತ್ತಾನೆ. ಆದುದರಿಂದ ನಾನು ಹೇಳುವುದೇನೆಂದರೆ ಇದು ಸ್ವಾವಲಂಬಿಯಾದ ಶಿಕ್ಷಣ ಅಲ್ಲ ಎಂದು. ಈ ಬಗ್ಗೆ ನಮ್ಮ ಶಿಕ್ಷಣದ ಗುರಿ ಏನು ? ಆತನು ಸ್ವಾವಲಂಬಿಯಾಗಿ ತನ್ನ ಜೀವನ ನಡೆಸಬೇಕೆನ್ನುವುದೇ ನಮ್ಮ ಒಂದು ಗುರಿ, ಅದಕ್ಕೋ ಸ್ಕರವಾಗಿ ಈ ಒಂದು ಶಿಕ್ಷಣ ಕೊಡುತ್ತೇವೆ. This is the Basic minimum *that is* expected of any educational system. ಈಗ ತಾವು ಅಮೇರಿಕಾ ದೇಶದ ಒಂದು ಶಿಕ್ಷಣ ಪದ್ಧತಿ ತೆಗೆದುಕೊಳ್ಳಿ, ಅಥವಾ ಬ್ರಿಟನ್ ದೇಶದ ಒಂದು ಶಿಕ್ಷಣದ ಪದ್ಧತಿಯನ್ನೇ ತೆಗೆದುಕೊಳ್ಳಿ, ಅಥವಾ ಜಪಾನ್ ದೇಶದ ಒಂದು ಶಿಕ್ಷಣದ ಪದ್ಧತಿಯನ್ನೇ ತೆಗೆದುಕೊಳ್ಳಿ. ಅಲ್ಲಿ ಹುಡುಗರು ಶಾಲಾಕಾಲೇಜು ಗಳಿಂದ ಹೊರಬಂದಾಗ ಯಾರೂ ಕೂಡ ಇಲ್ಲಿಯ ಹಾಗೆ ನನಗೆ ಕೆಲಸಕೊಡಿ ಎಂದು ಅಪ್ಲಿಕೇಷನ್ ತೆಗೆದು

ಕೊಂಡು ಹೋಗುವುದಿಲ್ಲ. ಅಲ್ಲಿ ಒಂದು ಶಿಕ್ಷಣದ ಪದ್ಧತಿ ಹಾಗೆ ಇದೆ. ಅವರು ಅಂಥಾ ಶಿಕ್ಷಣವನ್ನು ಕೊಡುತ್ತಾರೆ. ಇದರಿಂದ ಅವನು ಸಮಾಜದಲ್ಲಿ ಪೂರಕವಾಗಿರುತ್ತಾನೆ. ಆ ಪದ್ಧತಿ ನಮ್ಮಲ್ಲಿ ಇಲ್ಲ. ನಾವು ೩೦ ವರ್ಷದಿಂದಲೂ ಕೂಡ ನೋಡುತ್ತಾ ಇದ್ದೇವೆ, ಈ ಶಿಕ್ಷಣ ಪದ್ಧತಿ ಮೊದಲಿನಿಂದ ಹೇಗೆ ಇದೆಯೋ ಹಾಗೇ ಇದೆ. ಅದನ್ನೇ ರೂಪಿಸಿಕೊಂಡು ಬಂದಿದ್ದಾರೆ. ಇದನ್ನು ಬದಲಾವಣೆ ಮಾಡುವುದಕ್ಕೆ ಇನ್ನೂ ಆಗಿಲ್ಲಾ. ಈ ಶಿಕ್ಷಣಕ್ಕೆ ನಾವು ಲಕ್ಷ ಲಕ್ಷಗಟ್ಟಲೆ ಹಣ ಖರ್ಚು ಮಾಡುತ್ತೇವೆ, ಶಾಲಾಕಾಲೇಜು ಗಳಿಂದ ಕೋಟಿಗಟ್ಟಲೆ ವಿದ್ಯಾರ್ಥಿಗಳು ಹೊರಗೆ ಬರುತ್ತಿದ್ದಾರೆ, ಆದರೆ ಇದರಿಂದ ಏನಾದರೂ ಪ್ರಯೋಜನವಾಗುತ್ತಿದೆಯೇ ಅಂತ ನೋಡಿದರೆ ಏನೂ ಇಲ್ಲ. ಇದರಲ್ಲಿ ಇನ್ನೊಂದು ಪ್ರಶ್ನೆ ಎದ್ದು ಬರುತ್ತದೆ. ಅದೇನೆಂದರೆ ನಾವು ಹುಡುಗರನ್ನು ಒಳಗೆ ಕಳುಹಿಸುವಾಗ ಗುಣವಂತರಾಗಿರುತ್ತಾರೆ, ಸುಸಂಸ್ಕೃತರಾಗಿರುತ್ತಾರೆ, ಹೊರಗೆ ಬಂದಾಗ ನೋಡಿದರೆ ಅದೆಲ್ಲಾ ಹೊರಟುಹೋಗಿರುತ್ತದೆ. ಈ ಒಂದು ಪರಿಣಾಮವಾಗಿ ಎಜುಕೇಷನಲ್ ಅಬ್ಜೆಕ್ಟೀವೇ ಹೊರಟುಹೋಗಿದೆ. ಒಳಗೆ ಹೋದಂಥಾ ವಿದ್ಯಾರ್ಥಿ ಹೊರಗೆಬರುವುದರೊಳಗೆ ಗುಣಗಳೆಲ್ಲಾ ಹೋಗಿ ವಿರೋಧವಾಗಿ ಬರುತ್ತಾನೆ. ಇಂಥಾ ಒಂದು ಶಿಕ್ಷಣ ಪದ್ಧತಿಯನ್ನು ನಾವು ರೂಪಿಸಿದ್ದೇವೆ. ಈವೊತ್ತು ನಾವು ಅವರನ್ನೇನೂ ರಾಮಕೃಷ್ಣ ಪರಮ ಹಂಸರನ್ನಾಗಿ ಮಾಡಬೇಕು ಅಂತಲ್ಲ, ವಿವೇಕಾನಂದರಾಗಿ ಮಾಡಬೇಕು ಅಂತಲ್ಲ, ಲೋಕಮಾನ್ಯ ತಿಲಕರ ಹಾಗೆ ಮಾಡಬೇಕು ಅಂತಲ್ಲ. ಮಹಾತ್ಮಾಗಾಂಧೀಜಿಯವರ ಹಾಗೆ ಇರಬೇಕು ಅಂತಲ್ಲ, ನಾವು ಅವರನ್ನು ಒಳಗೆ ಕಳುಹಿಸುವಾಗ ಯಾವ ಒಂದು ಗುಣಗಳು ಇರುತ್ತದೋ ಹಾಗೆ ಇರುವುದಿಲ್ಲ, ತದ್ವಿರುದ್ಧವಾಗಿ ಇರುತ್ತದೆ. ಅವನು ಕಾಲೇಜಿಗೆ ಹೋಗುವ ಮುಂಚೆ ಚೆನ್ನಾಗಿರುತ್ತಾನೆ, ಹೊರಗೆ ಬಂದ ಮೇಲೆ ಮೊದಲಿನ ಹಾಗೆ ಇರುವುದಿಲ್ಲ. ತಮಗೆ ಈ ಸಂದರ್ಭದಲ್ಲಿ ಒಂದು ಉದಾಹರಣೆ ಹೇಳುತ್ತೇನೆ. ನಾನು ಈ ಬಗ್ಗೆ ಒಂದು ಫ್ಯಾಕ್ಟರಿಯನ್ನೇ ಉದಾಹರಣೆ ಕೊಡುತ್ತೇನೆ. ಒಂದು ಫ್ಯಾಕ್ಟರಿ ಮಾಡಿದರೆ ಅದರಲ್ಲಿ ರಾ ಮೆಟೀರಿಯಲ್ಸ್ ಫೀಡ್ ಮಾಡುತ್ತಾರೆ. ನಂತರ ರಾ ಮೆಟೀರಿಯಲ್ ಪ್ರೊಸೆಸ್ ಆಗುವಾಗ ಸೂಪರ್ ವೈಸ್ ಮಾಡುತ್ತಾರೆ. ಸೂಪರ್‌ವೈಸ್ ಮಾಡಿದ ಮೇಲೆ ಅದು ಫಿನಿಷಿಂಗ್ ಪ್ರಾಡಕ್ಟ್ ಆಗಿ ಹೊರಗೆ ಬರುತ್ತದೆ. ಆವಾಗ ಟೆಕ್ನಿಷಿಯನ್ಸ್ ಇರುತ್ತಾರೆ, ಸೂಪರ್‌ವಿಷನ್ ಸ್ಟ್ಯಾಫ್ ಇರುತ್ತಾರೆ ಇವರೆಲ್ಲಾ ನೋಡಿದ ಮೇಲೆ ಆ ಫಿನಿಷಿಂಗ್ ಪ್ರಾಡಕ್ಟ್ಸ್‌ಗೆ ಅಡ್ವರ್ಟೈಸ್ ಮಾಡುತ್ತಾರೆ. ಆವಾಗ ಹೆಚ್.ಎಂ.ಟಿ. ವಾಚಸ್‌ಗೆ ಹೇಗೆ ಡಿಮ್ಯಾಂಡ್ ಇದೆಯೋ ಹಾಗೆ ಡಿಮ್ಯಾಂಡ್ ಬರುತ್ತದೆ. ಹಂತಹಂತವಾಗಿ ಹೀಗೆ ಹೊರಗೆ ಬರುತ್ತವೆ. ನಮ್ಮ ಎಜುಕೇಷನ್ ಸಿಸ್ಟಂ ಕೂಡ ಹಾಗೆಯೇ ಆಗಬೇಕು. ನಾವು ಈಗ ಈ ಶಿಕ್ಷಣಕ್ಕಾಗಿ ೧೬೦ ಕೋಟಿ ರೂಪಾಯಿ ಖರ್ಚುಮಾಡುತ್ತೇವೆ. ಇದಕ್ಕೆ ರಾ ಮೆಟೀರಿಯಲ್ಸ್ ಯಾರು ನಮ್ಮ ದೇಶದ ಮಕ್ಕಳು, ಯುವಕರು, ಯುವತಿಯರು. ಈ ರೀತಿಯಾಗಿ ಪ್ರತಿಯೊಂದು ಸ್ಟೇಜಿನಲ್ಲೂ ಕೂಡ ನಮ್ಮ ಎಜುಕೇಷನ್‌ನಲ್ಲಿ ಪ್ರೊಸೆಸ್ ನಡೆಯುತ್ತಾ ಇದೆ. ಈ ಪ್ರೊಸೆಸಿಂಗ್ ಮಾಡುವುದಕ್ಕೇನೇ ನಮ್ಮ ವಿದ್ಯಾ ಇಲಾಖೆಯಲ್ಲಿ Director, Deputy Directors A.E.Os, Army Officers, Educational Experts ಇವರೆಲ್ಲಾ ಇದ್ದಾರೆ. ಇವರೆಲ್ಲ ಇದ್ದರೂ ಕೂಡ ಏನು ಪ್ರೋಗ್ರೆಸ್ ಆಗುತ್ತಾ ಇದೆ ಅನ್ನುವುದನ್ನು ನೋಡಿದರೆ. ನರ್ಸರಿಯಿಂದ ಹಿಡಿದು ಕಾಲೇಜಿನವರೆಗೆ ನೋಡಿದರೆ, ೩ ವರ್ಷದಿಂದ ಹಿಡಿದು ೧೫ ವರ್ಷದವರೆಗೆ ನೋಡಿದರೆ ಲಕ್ಷಗಟ್ಟಲೆ ವಿದ್ಯಾರ್ಥಿಗಳು ಗ್ರಾಜುಯೇಟ್ ಆಗಿ ಬರುತ್ತಾರೆ. ಅವರು ಬರೇ ಗ್ರಾಜುಯೇಟ್ ಹೊರಗೆ ಬರುತ್ತಾರೇ ವಿನಾ ಸಮಾಜದಲ್ಲಿ ಏನು ಒಂದು ಗುಣಗಳು ಇರಬೇಕೋ, ಏನು ಒಂದು ಸುಸಂಸ್ಕೃತ ಇರಬೇಕೋ ಅದು ಇರುವುದಿಲ್ಲ ತಮಗೆ ಹೇಳಬೇಕಾದರೆ ನಾವು ಮಕ್ಕಳನ್ನು ದೇವರು ಎಂದು ಕರೆಯುತ್ತೇವೆ, ದೇವರ ಹಾಗೆ ನೋಡಿಕೊಳ್ಳುತ್ತೇವೆ. ಅಂಥಾ ಮಕ್ಕಳನ್ನು ಶಾಲೆಯ ಒಳಗೆ ದೇವರ ಹಾಗೆ ಕಳುಹಿಸುತ್ತೇವೆ. ನಂತರ ಅವರು ಸೆಕೆಂಡರಿ ಸ್ಕೂಲ್ ಕಾಲೇಜು ಇವೆಲ್ಲಾ ಕಡೆ ಪ್ರೊಸೆಸ್ ಆಗಿ ಹೊರಗೆ ಬಂದ ಮೇಲೆ ನೋಡಿದರೆ ದೆವ್ವದ ಹಾಗೆ ಬರುತ್ತಾರೆ, ಭೂತವಾಗಿ ಬರುತ್ತಾರೆ. ರಾ ಮೆಟೀರಿಯಲ್ಸನ್ನು ಇವರು ಫೀಡ್ ಮಾಡುವ ತರ ಹೀಗೆ. ಅವರು ಶಾಲೆಯ ಒಳಗೆ ನಾವು ಹೇಗೆ ಕಳುಹಿಸುತ್ತೇವೋ ಹಾಗೆಯೇ ಹೊರಗೆ ಬಂದರೆ ಸಂತೋಷಪಡೋಣ. ಆದರೆ ಅವರು ಹಾಗೆ ಬರುವುದಿಲ್ಲ, ರಾ ಮೆಟೀರಿಯಲ್ಸ್ ಹಾಗೆ ಬರುತ್ತಾರೆ. ಈ ತಪ್ಪನ್ನು ವಿದ್ಯಾರ್ಥಿಗಳ ಮೇಲೆ ಹೊರಿಸುವುದಿಲ್ಲ. ನಿಮ್ಮ ಪ್ರೊಸೆಸ್‌ನಲ್ಲಿ ಏನೋ ದೋಷ ಇರಬೇಕು ಎಂದು ಹೇಳುತ್ತೇನೆ. ಈ ವಿದ್ಯಾಭ್ಯಾಸದ ಪದ್ಧತಿ ಏನು ಇದೆ, ಇದರ ಮೂಲದಲ್ಲೇ ಏನೋ ದೋಷ ಇದೆ ಅದನ್ನು ಕಂಡು ಹಿಡಿದು ಬದಲಾವಣೆ ಮಾಡಬೇಕು. ಲಕ್ಷಾಂತರ ಹುಡುಗರು ಈ ರೀತಿಯಾಗಿ ಕಾಲೇಜಿನಿಂದ ಬರುವಾಗ ರಾಟನ್ ಮೆಟೀರಿಯಲ್ಸ್ ಆಗಿ ಬಂದರೆ ಅವರ ಸ್ಥಿತಿ ಏನು ? ಈ ಒಂದು ವಿದ್ಯಾಭ್ಯಾಸದ ಸ್ಟ್ಯಾಂಡರ್ಡ್ ಏನು ಅನ್ನುವುದನ್ನು ನೋಡಿದರೆ ಈ ಒಂದು ಸಮಾಜ ಇನ್ಯಾವ ರೀತಿಯಲ್ಲಿ ಮುಂದುವರೆಯಬೇಕು

ಅನ್ನುವುದನ್ನು ಆಲೋಚನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಸಮಾಜದ ಚಿಂತಕರು ಕೂತುಕೊಂಡು ಯೋಚನೆ ಮಾಡಬೇಕಾದ ವಿಷಯ. ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡದೇ ಹೋದರೆ ಎಕ್ಸ್‌ಪ್ಲೋಸಿವ್ ಸಿಚುಯೇಷನ್ ಆಗುತ್ತದೆ, ಧೂಳೀಪಟ ಆಗುವ ಸಂದರ್ಭ ಬರುತ್ತದೆ. ೩೦ ವರ್ಷಗಳಿಂದ ಸತತವಾಗಿ ಇಂಥಾ ಒಂದು ಶಿಕ್ಷಣ ಪದ್ಧತಿಯನು ರೂಪಿಸಿಕೊಂಡು ಬಂದು ವರ್ಷ ವರ್ಷ ಕಾಲೇಜಿನಲ್ಲಿ ಓದುತ್ತಾ ಇರುವ ಹುಡುಗರನ್ನು ರಾಟನ್ ಮೆಟೀರಿಯಲ್ಸ್ ಆಗಿ ತಯಾರು ಮಾಡಿದರೆ ಮುಂದಿನ ಜನರೇಷನ್ ಏನಾಗಬಹುದು ಅನ್ನುವುದನ್ನು ಯೋಚನೆ ಮಾಡಬೇಕು. ರಾಷ್ಟ್ರದ ಸಂಪತ್ತು ಮತ್ತು ಅರಣ್ಯ ಸಂಪತ್ತು ನಮ್ಮ ದೇಶದಲ್ಲಿ ಹೇಗೋ ಹಾಗೆ ನಮ್ಮ ಸಮಾಜದ ಆಧಾರದ ಮೇಲೆ ನಿಂತಿರುವ ಈ ಮಕ್ಕಳು ಏನು ಇದ್ದಾರೆ ಇವರನ್ನು ನಾವು ಚೆನ್ನಾಗಿ ತಯಾರು ಮಾಡದೇ ಹೋದರೆ ನಾಳೆ ದಿವಸ ಇದರಿಂದ ನಮ್ಮ ದೇಶಕ್ಕೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಈ ಶಿಕ್ಷಣ ಪದ್ಧತಿಯನ್ನು ಬದಲಾಯಿಸುವುದಕ್ಕೆ ವಿಚಾರ ಮಾಡಬೇಕು. ತಮಗೆ ಹೇಳಬೇಕಾದರೆ ಈವೊತ್ತಿನ ಒಂದು ಶಿಕ್ಷಣ ಪದ್ಧತಿಯಿಂದ ದೇಶದಲ್ಲಿ ಅನ್‌ಎಂಪ್ಲಾಯ್‌ಮೆಂಟ್ ಯಾವರೀತಿ ಇದೆ ಎಂದು ನೋಡಿದರೆ ಅದು ಮುಂದೆ ಇನ್ನೂ ಸ್ಫೋಟಗೊಳ್ಳಬಹುದೇನೋ ಗೊತ್ತಿಲ್ಲ. ಆದುದರಿಂದ ರಾಷ್ಟ್ರದ ಸಂಪತ್ತನ್ನು ಕ್ರೋಢೀಕರಿಸಬೇಕಾದರೆ, ಸಂಸ್ಕರಿಸಬೇಕಾದರೆ ನಮ್ಮ ದೇಶದ ರಾ ಮೆಟೀರಿಯಲ್ಸ್ ಆಗಿರತಕ್ಕಂಥಾ ನಮ್ಮ ಮಕ್ಕಳನ್ನು ಒಳ್ಳೆಯ ದಾರಿಯಲ್ಲಿ ತೆಗೆದುಕೊಂಡು ಹೋಗಬೇಕು. ಅವರು ಕಾಲೇಜಿನಿಂದ ಹೊರಗೆ ಬಂದ ಮೇಲೆ ತಮ್ಮ ಕಾಲ ಮೇಲೆ ತಾವು ನಿಲ್ಲುವ ಹಾಗೆ, ತಮ್ಮ ಜೀವನದಲ್ಲಿ ಸ್ವತಂತ್ರ್ಯವಾಗಿ ಇರುವಂತೆ ಮಾಡಬೇಕು. ಹಾಗಾದರೆ ಮುಂದೆ ಸಮಾಜವನ್ನು ಒಂದು ಒಳ್ಳೆಯ ದಾರಿಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯ. ಅಂಥಾ ಒಂದು ಶಿಕ್ಷಣ ನಮಗೆ ಬೇಕು. ಇದೇ ರೀತಿ ದೋಷ ಮಾಡುತ್ತಾ ಬಂದರೆ ಅದು ಸಮಾಜದಲ್ಲಿ ದುರ್ಗಂಧವಾಗಿ ಹೊರಬರುತ್ತದೆ ವಿನಾ ಒಳ್ಳೆಯ ಸುವಾಸನೆ ಬರುವುದಿಲ್ಲ. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ಈ ಶಿಕ್ಷಣ ಪದ್ಧತಿಯನ್ನು ಸರಿಯಾಗಿ ರೂಪಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು. ಇದುವರೆಗೂ ಯಾರೂ ಸಹ ಆ ಬಗ್ಗೆ ಪ್ರಯತ್ನ ಮಾಡಿಲ್ಲಾ. ಹಿಂದೆ ಯಾರೂ ಮಾಡಿಲ್ಲಾ ಅನ್ನುವುದನ್ನು ಹೇಳಬೇಡಿ. ನಾನು ಮತ್ತೊಂದು ಸಾರಿ ತಮಗೆ ಜ್ಞಾಪಕಕ್ಕೆ ತಂದುಕೊಡುತ್ತೇನೆ. ಹೋದಸಾರಿ ಈ ಶಿಕ್ಷಣಕ್ಕೆ ೧೬೦ ಕೋಟಿ ರೂಪಾಯಿ ಖರ್ಚಾಗಿದೆ. ಈ ಸಾರಿಯೂ ೧೬೦ ಕೋಟಿ ರೂಪಾಯಿ ಸ್ಯಾಂಕ್ಷನ್ ಮಾಡಿಕೊಡುತ್ತಿದ್ದೇವೆ. ಈ ದೇಶದಲ್ಲಿ ಎಲ್ಲರೂ ಸಹ ಅಸಹಾಯಕರೇ. ಆದುದರಿಂದ ನಾನು ತಮಗೆ ಹೇಳುತ್ತೇನೆ. ನಮ್ಮ ಶಿಕ್ಷಣ ಇಲಾಖೆಯಲ್ಲಿ ಫೌಂಟೇನ್ ಹೆಡ್ ಇದ್ದಾರೆ, ಶಿಕ್ಷಣ ತಜ್ಞರು ಇದ್ದಾರೆ, ಅವರೊಂದಿಗೆ ಆಳವಾಗಿ ಆಲೋಚನೆ ಮಾಡಿ. ಇದನ್ನು ಯಾವ ರೀತಿ ರೂಪಿಸಬೇಕೆನ್ನುವುದಕ್ಕೆ ಪ್ರಯತ್ನಮಾಡಿ. ಯಾರೂ ಕೂಡ ಫೌಂಟೇನ್ ಹೆಡ್ ಇಲ್ಲ ಎಂದು ಭಾವಿಸಬೇಡಿ, ಇದ್ದಾರೆ. ಅಂತಹವರ ಸಂಖ್ಯೆ ಕಡಿಮೆ ಇರಬಹುದು. ಇವರೂ ಸಹ ಸರ್ಕಾರದ ಅಧಿಕಾರಿಗಳು. ಇವರು ಕೊಡತಕ್ಕಂಥ ಸಲಹೆಗಳನ್ನು ಕಾರ್ಯಗತ ಮಾಡುವವರು ಯಾರು ? ಈ ಬಗ್ಗೆ ಮಾನ್ಯ ಮಂತ್ರಿಗಳೇ ಒಂದು ನೀತಿಯನ್ನು ರೂಪಿಸಬೇಕು. ತಾವೇ ಈ ಕೆಲಸ ಮಾಡದಿದ್ದರೆ, ಇನ್ನು ಯಾರೂ ಸಹ ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮಲ್ಲಿ ಶಿಕ್ಷಣದ ನೀತಿಗಳನ್ನು ರೂಪಿಸುವವರಿಗೆ ಅಭಾವ ಏನೂ ಇಲ್ಲ. ಅಂತಹ ವ್ಯಕ್ತಿಗಳಿದ್ದಾರೆ. ಆದರೆ ಅದನ್ನು ಆಚರಣೆಯಲ್ಲಿ ತರುವವರಿಲ್ಲ. ಅದೇ ಜಪಾನ್, ಅಮೇರಿಕಾ, ಜರ್ಮನಿ, ಇಂಗ್ಲೆಂಡ್, ಇಸ್ರೇಲ್ ಮುಂತಾದ ದೇಶಗಳಲ್ಲಿ ಆ ದೇಶಗಳಿಗೆ ಹೊಂದುವಂತಹ ಶಿಕ್ಷಣವನ್ನು ಕೊಡುತ್ತಿದ್ದಾರೆ. ಅದೇ ನಮ್ಮಲ್ಲಿ ಯಾವ ಸರ್ಕಾರವೇ ಅಧಿಕಾರಕ್ಕೆ ಬರಲಿ, ಒಳ್ಳೆಯ ಶಿಕ್ಷಣವನ್ನು ಕೊಡುತ್ತೇವೆ, ಮಕ್ಕಳ ಜ್ಞಾನಸಂಪತ್ತು ವಿಕಾಸಗೊಳ್ಳುವಂತಹ ಶಿಕ್ಷಣ ಕೊಡುತ್ತೇವೆ ಹಾಗೂ ದೇಶಕ್ಕೆ ಕಲ್ಯಾಣವಾಗುವಂತಹ ಕಾರ್ಯ ಮಾಡುತ್ತೇವೆಂದು ಪಣತೊಟ್ಟು ಅಧಿಕಾರ ಸ್ವೀಕಾರ ಮಾಡಿ ಈ ಸಭೆಯನ್ನು ಪ್ರವೇಶ ಮಾಡುತ್ತಾರೆ. ಆದರೆ ಅದು ಕಾರ್ಯರೂಪದಲ್ಲಿ ಬರುತ್ತಿಲ್ಲ. ಅದೇ ಹಿಂದುಳಿದಂಥ ಆಫ್ರಿಕನ್ ದೇಶಗಳಲ್ಲಿಯೂ ಸಹ ಒಳ್ಳೆಯ ಶಿಕ್ಷಣವನ್ನು, ಅಂದರೆ ಓದಿದ ನಂತರ ಸ್ವಾವಲಂಬಿಯಾಗುವಂತಹ ಶಿಕ್ಷಣವನ್ನು ಕೊಡುತ್ತಿದ್ದಾರೆ. ಆದರೆ ನಮ್ಮಲ್ಲಿ ಮಾತ್ರ ಇನ್ನೂ ಆ ಪದ್ಧತಿ ಬಂದಿಲ್ಲ. ಕಳೆದ ೩೦ ವರ್ಷಗಳಿಂದಲೂ ಸಹ ಇದೇರೀತಿ ಮುಂದುವರೆದುಕೊಂಡು ಬಂದಿದೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರದವರು ಕೇಂದ್ರದ ಮೇಲೆ ಭಾರ ಹಾಕುವುದು ಸರಿಯಲ್ಲ. ಇದರಲ್ಲಿ ರಾಜ್ಯ ಸರ್ಕಾರದ ಜವಾಬ್ದಾರಿಯೂ ಇದೆ. ಆದಕಾರಣ ನಾವುಗಳು ಮತ್ತು ಶಿಕ್ಷಣ ತಜ್ಞರುಗಳು ಒಂದೆಡೆ ಕೂತು ಈಗಿನ ಶಿಕ್ಷಣದ ರೂಪುರೇಷೆಗಳನ್ನು ನಮ್ಮಗಳ ಒಂದು ಅನುಭವದ ಆಧಾರದ ಮೇಲೆ ಮಾರ್ಪಾಡು ಮಾಡಬೇಕು. ಇಲ್ಲದಿದ್ದರೆ ಇದಕ್ಕೆ ಖರ್ಚು ಮಾಡುವಂತಹ ಹಣವೆಲ್ಲಾ ವ್ಯರ್ಥವಾಗುತ್ತದೆಂದು ಹೇಳುತ್ತೇನೆ. ಈಗಿನ ಶಿಕ್ಷಣದ ಕ್ರಮ, ಶಾಲಾ ಕಟ್ಟಡಗಳು, ಶಾಲೆಗಳು ಯಾವ

ರೀತಿ ಇವೆ ಎಂದರೆ, ಈಗ ಒಂದು ಹೆಣ್ಣು ಮಗುವಿಗೆ ಹೂವು ಮುಡಿಸಿ, ಒಡವೆಗಳನ್ನು ಇಟ್ಟು, ರೇಷ್ಮೆ ಸೀರೆಯನ್ನು ಉಡಿಸಿದರೆ ನೋಡಲು ಶೃಂಗಾರವಾಗಿ ಕಾಣುತ್ತದೆ........

MADAM DEPUTY SPEAKER.—Are you discussing about Women or Education ?

ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ಸದಸ್ಯರು ಇನ್ನೂ ಅವಿವಾಹಿತರು ; ಆದರೂ ಅವರು ಹೆಣ್ಣು ಮಕ್ಕಳ ಶೃಂಗಾರದ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್.—ನನಗೆ ಮೂರು ಮಕ್ಕಳಿವೆ. ಆದಕಾರಣ ನನಗೆ ಮದುವೆ ಆಗಿಲ್ಲವೆಂದರೆ she will take serious action against me. Please do not come to that conclusion. ಈಗ ಗಂಡಸರೇ ಆಗಲಿ, ಹೆಂಗಸರೇ ಆಗಲಿ,ಶೃಂಗಾರ ಮಾಡಬೇಕಾದರೆ ಒಳಗೆ ಪ್ರಾಣ ಇರಬೇಕು. ಆಗನೋಡಲು ಚೆನ್ನಾಗಿ ಕಾಣುತ್ತಾರೆ. ಇಲ್ಲದಿದ್ದರೆ ಅದು ಶವಶೃಂಗಾರವಾಗುತ್ತದೆ. ಮತ್ತುನಾವು ಹೆಣಕ್ಕೆ ಎಷ್ಟೇ ಶೃಂಗಾರ ಮಾಡಿದರೂ ಸಹ ಅದು ಅಸಹ್ಯವಾಗಿ ಕಾಣುತ್ತದೆ. ಅದೇ ರೀತಿಯಲ್ಲಿ ಈ ವಿದ್ಯಾ ಇಲಾಖೆಗೆ ಎಲ್ಲ ರೀತಿಯಿಂದಲೂ ಶೃಂಗಾರ ಮಾಡಲಾಗುತ್ತಿದೆ.ಆದರೆ ಅದಕ್ಕೆ ಪ್ರಾಣವೇ ಇಲ್ಲ. ಈ ಒಂದು ಶವ ಶೃಂಗಾರ ಕಳೆದ ೩೦ ವರ್ಷಗಳಿಂದಲೂ ನಡೆದುಕೊಂಡು ಬಂದಿದೆ. ಈ ಶೃಂಗಾರಕ್ಕೆ ೧೫೦ ಕೋಟಿರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ.

ಶ್ರೀ ಜಿ. ಬಿ. ಶಂಕರರಾವ್.—ಇದಕ್ಕೆ ನೀವೂ ಹೆಗಲು ಕೊಟ್ಟಿದ್ದೀರಿ ಅಲ್ಲವೇ ?

ಶ್ರೀ ಮಳ್ಳೂರು ಆನಂದರಾವ್.—ನಾವೂ ನೀವೂ ಹೆಗಲು ಕೊಟ್ಟು ಈ ಒಂದು ಪುಣ್ಯದ ಕೆಲಸವನ್ನು ಬಹಳ ಚೆನ್ನಾಗಿ ಮಾಡಿಕೊಂಡು ಬಂದಿದ್ದೇವೆ. ಈ ಮಾತನ್ನು ನಾನು ಅತ್ಯಂತ ದುಃಖದಿಂದ ಹೇಳುತ್ತಿದ್ದೇನೆ. ಈ ಶವಶೃಂಗಾರದಿಂದ ಆದಂಥ ಲಾಭವಾದರೂ ಏನು ? 'ಸಮಾದಿ'. ಈಗ ನಾವು ಏನು ೧೬೦ ಕೋಟಿ ರೂಪಾಯಿಗಳನ್ನು ಈ ಶಿಕ್ಷಣ ಇಲಾಖೆಗೆ ಖರ್ಚು ಮಾಡುತ್ತಿದ್ದೇವೆ, ಈ ಹಣದಿಂದ ಮಕ್ಕಳನ್ನು ಜೀವಂತವಾಗಿ ತೆಗೆದುಕೊಂಡು ಹೋಗಿ ಸಮಾಧಿ ಮಾಡುತ್ತಿದ್ದೇವೆ. ಏಕೆಂದರೆ, ಶಿಕ್ಷಣವನ್ನು ಮುಗಿಸಿದವರಿಗೆ ಕೆಲಸ ಇಲ್ಲ; ಎಲ್ಲರೂ ನಿರುದ್ಯೋಗಿಗಳಾಗಿದ್ದಾರೆ. That is what we have produced and we are producing. We never apply our mind. That has come to an optimum stage. The Youth will revolt against us. They will kill us and beat us on roads. ನಮ್ಮ ರಾಜ್ಯದಲ್ಲಿ ಅಪರಾಧಗಳು ಏನು ನಡೆಯುತ್ತಿವೆ, ಆ ಬಗ್ಗೆ ಪೋಲೀಸ್ ಇಲಾಖೆಯಿಂದ ವಿವರಗಳನ್ನು ತರಿಸಿ ನೋಡಿ ; ವಿದ್ಯಾವಂತ ಯುವಕರಿಂದಲೇ ಈ ಅಪರಾಧಗಳು ನಡೆಯುತ್ತಿವೆ. All educated and intelligent youth are indulging in all these things. ಇದು ಅವರ ತಪ್ಪಲ್ಲ ; ನಾವು ಕೊಡುತ್ತಿರುವ ವಿದ್ಯಾಭ್ಯಾಸದ ಪದ್ಧತಿಯಲ್ಲಿ ತಪ್ಪಿದೆ. ಅವರ ಕಾಲಮೇಲೆ ಅವರು ನಿಲ್ಲುವಂತಹ ವಿದ್ಯಾಭ್ಯಾಸ ಕೊಡದ ಕಾರಣ, ಅವರು ನಿರುದ್ಯೋಗಿಗಳಾಗಿ ಇಂತಹ ಕೆಲಸಗಳನ್ನು ಮಾಡಲು ಪ್ರಾರಂಭ ಮಾಡುತ್ತಾರೆ.

ಶ್ರೀ ವಿ. ವಿ. ಪತ್ತಾರ್.—ಮಾನ್ಯ ಸದಸ್ಯರು ಶಿಕ್ಷಣದ ಪದ್ಧತಿ ಬದಲಾವಣೆಯಾಗಬೇಕೆಂದು ಹೇಳಿದ್ದಾರೆ. ಮತ್ತು ಅವರು ಅಮೇರಿಕಾ, ಇಂಗ್ಲೆಂಡ್, ಜರ್ಮನಿ ದೇಶಗಳ ಉದಾಹರಣೆ ಕೊಟ್ಟರು. ಆದರೆ ಅಮೇರಿಕಾದಲ್ಲಿಯೂ ಸಹ ಶೇಕಡಾ ೮ರಷ್ಟು ನಿರುದ್ಯೋಗಿಗಳಿದ್ದಾರೆ ; ಅನ್ನುವುದನ್ನು ತಿಳಿಯಬೇಕು.

ಶ್ರೀ ಮಳ್ಳೂರು ಆನಂದರಾವ್.—ಅಲ್ಲಿ ಶೇಕಡಾ ೯೨ ರಷ್ಟು ಉದ್ಯೋಗ ಸಿಕ್ಕಿದರೆ ನಮ್ಮಲ್ಲಿ ಶೇಕಡಾ ನೂರರಷ್ಟು ನಿರುದ್ಯೋಗಿಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಬೆಂಗಳೂರು ನಗರವೊಂದರಲ್ಲಿಯೇ ೫ ಲಕ್ಷ ಪದವೀಧರರು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಕಛೇರಿಯಲ್ಲಿ ತಮ್ಮ ಹೆಸರುಗಳನ್ನು ನೊಂದಾಯಿಸಿದ್ದಾರೆ. ಒಂದು ಕಡೆ ನಿರುದ್ಯೋಗದ ಸಮಸ್ಯೆ ಇದ್ದರೆ, ಮತ್ತೊಂದು ಕಡೆ ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯ ಇಲ್ಲದಂತೆ ಆಗಿದೆ. ಇವೊತ್ತಿನ ದಿವಸ ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಕಾಲೇಜ್‌ಗಳ ಹಾಸ್ಟೆಲ್‌ಗಳಲ್ಲಿ ರ್‍ಯಾಗಿಂಗ್ ನಡೆಯುತ್ತಿದೆ. ಈ ಬಗ್ಗೆ ಕನ್ನಡಪ್ರಭಾ ಪತ್ರಿಕೆಯಲ್ಲಿ ವರದಿ ಬಂದಿದೆ.

ವಿದ್ಯಾರ್ಥಿಗಳ ಮೈಮೇಲಿರುವಂತಹ ಬಟ್ಟೆಗಳನ್ನು ಕಳಚಿ ತಪಾಸೆ ಮಾಡುವಂತಹ ಪ್ರಕರಣಗಳು ಅಲ್ಲಿ ನಡೆಯುತ್ತಿದೆ. ಅದೇ ಒಬ್ಬ ಮೆಡಿಕಲ್ ಕಾಲೇಜಿನಲ್ಲಿ ಓದಿ ಹೊರಗೆ ಬರಲು ಸರ್ಕಾರ ೮೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಈ ಹಣವನ್ನು ಬಡ ರೈತ ಕೊಡುವ ತೆರಿಗೆಯಿಂದ ಸರ್ಕಾರ ಖರ್ಚು ಮಾಡುತ್ತಿದೆ, ಆದರೆ ಅಲ್ಲಿ ರ್‍ಯಾಗಿಂಗ್ ನಡೆಯುತ್ತಿದೆ. This is going on in our educational institutions. ಇದರ ಬಗ್ಗೆ ಯಾರಿಗಾದರೂ ಪ್ರೋಬ್ ಮಾಡಬೇಕೆಂಬ ಮನಸ್ಸು ಇದ್ದರೆ, ಅವರು ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾಡಲಿ. ಈಗಿನ ಪದ್ಧತಿಯನ್ನು ಬದಲಾವಣೆ ಮಾಡಲೇ ಬೇಕು. ಇಲ್ಲದಿದ್ದರೆ ಇವೊತ್ತಿನ ಮಕ್ಕಳು ಮುಂದೆ ನಮ್ಮ ಸಮಾಜದ ಸೂತ್ರಗಳನ್ನು ಹೊತ್ತುಕೊಂಡು ನಡೆಸುತ್ತಾರೆಂದರೆ, ಅದು ಸಾಧ್ಯವಿಲ್ಲ. ಇದಕ್ಕೆ ಅವರು ಕಾರಣರಲ್ಲ. ನಮ್ಮ ಈಗಿನ ಪದ್ಧತಿಯಲ್ಲಿರುವ ದೋಷವೇ ಕಾರಣ. ಯಾವ ಒಂದು ಆದರ್ಶವೂ ಇಲ್ಲದಂಥ ಶಿಕ್ಷಣ ಪದ್ಧತಿಯನ್ನು ಮೊದಲು ಬದಲಾವಣೆ ಮಾಡಬೇಕೆಂದು ನಾನು ಅತ್ಯಂತ ಕಳಕಳಿಯಿಂದ ಮಾನ ವಿದ್ಯಾಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ವಿನಾಶದ ಕಡೆಗೆ ಹೋಗುತ್ತಿರುವ ಪ್ರವಾಹವನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರ ಅಲ್ಲಿದೆ, ಇಲ್ಲಿ ನಿಮ್ಮ ಸರ್ಕಾರ ಇದೆ. ಈ ಇಲಾಖೆಗೆ ೧೬೦ ಕೋಟಿರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ. ಆದಕಾರಣ ತಮ್ಮ ಕಾಲದಲ್ಲಿಯಾದರೂ ಒಂದು ಹೆಜ್ಜೆ ಮುಂದೆ ಇಡುವಂತಹ ಸೂಚನೆಯನ್ನು ತಾವು ತೋರಿಸಬೇಕು. ಆಗ ಬೇಕಾದರೆ ನಾವು ೧೬೦ ಕೋಟಿ ಅಲ್ಲ, ೨೦೦ ಕೋಟಿ ರೂಪಾಯಿಗಳನ್ನಾದರೂ ಕೊಡುತ್ತೇವೆ.

ಶ್ರೀ ಅಜೀಜ್‌ಸೇಟ್.—ಇನ್ನು ಒಂದು ಡೀಕೇಡ್ ಆದರೂ ಆಗುವುದಿಲ್ಲ.

ಶ್ರೀ ಮಳ್ಳೂರು ಆನಂದರಾವ್.—ಮಾಜಿ ಮಂತ್ರಿಗಳ ಮಾತನ್ನು ನಾನು ಒಪ್ಪುವುದಿಲ್ಲ. ಇಚ್ಛಾಶಕ್ತಿ ಒಂದು ಇದ್ದರೆ ಏನನ್ನು ಬೇಕಾದರೂ ಮಾಡಬಹುದು. Will you make a beginning? It is possible. So many countries have achieved. But only thing is that we should have the will. ಆದಕಾರಣ ಸರ್ಕಾರಕ್ಕೆ ಮನಸ್ಸು ಇದ್ದರೆ, ನಾವೆಲ್ಲರೂ ಹೆಗಲು ಕೊಡುತ್ತೇವೆ. ಮುಖ್ಯವಾಗಿ ಶಿಕ್ಷಣವನ್ನು ಸರಿಯಾದ ದಾರಿಯಲ್ಲಿ ನಡೆಸಿ. ಈಗ ಕೊಟ್ಟಿರುವ ವರದಿಗೆ ಯಾವ ಬೆಲೆಯೂ ಇಲ್ಲ. ಇದು ಮಾಮೂಲಿನಂತೆಯೇ ಇದೆ. ಮುಖ್ಯವಾಗಿ ನಮ್ಮ ಶಿಕ್ಷಣ ಪದ್ಧತಿಯನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡಬೇಕು.

೧೨-೩೦ ಪಿ.ಎಂ.

ಇನ್ನು ನಾನು ಈ ಬಗ್ಗೆ ಹೆಚ್ಚಿಗೆ ಮುಂದುವರಿಸುವುದಕ್ಕೆ ಹೋಗುವುದಿಲ್ಲ. ಇವತ್ತು ಸಮಾಜ ಅತ್ಯಂತ ವೇಗದಿಂದ ಬದಲಾವಣೆಯಾಗುತ್ತಿದೆ, ಮೌಲ್ಯಗಳು ಬದಲಾವಣೆಯಾಗುತ್ತಿವೆ. Values of life are changing. ಬದಲಾವಣೆಯಾಗುತ್ತಾ ಇರತಕ್ಕ ಸಮಾಜ, ಜೀವನ ಮೌಲ್ಯಗಳು, ಜೀವನ ನಡೆವಳಿಕೆಗಳು, ಇದರ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಎಜುಕೇಷನಿಸ್ಟ್, ಸೋಸಿಯಾಲಜಿಸ್ ಕೂತು ಬರತಕ್ಕಂಥ ಮುಂದಿನ ಪೀಳಿಗೆಯನ್ನು ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ತಯಾರು ಮಾಡ ತಕ್ಕಂಥ ಚಿಂತನೆ ನಡೆಯಬೇಕಲ್ಲ, ನಡೆದಿದೆಯೇ, ಇಲ್ಲದೇ ಹೋದರೆ. There will be disharmony in the society. ನೀವು ಶಿಕ್ಷಣ ಕೊಡುವುದು ಒಂದು ದಿಕ್ಕಿನಲ್ಲಿ, ಸಮಾಜ ಬೇರೆ ಒಂದು ದಿಕ್ಕಿನಲ್ಲಿ ಹೋಗುತ್ತಾ ಇರುವುದರಿಂದ ಸಮಾಜದ ಯುವ ಪೀಳಿಗೆ ಇದಕ್ಕೆ ಹೊಂದಿಕೊಳ್ಳುವುದಿಲ್ಲ. There will be disharmony, disruption and chaos in the society, not only in the field of education. ಆದಕ್ಕೋಸ್ಕರ ನಾನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಇದನ್ನು ದೊಡ್ಡ ಆದರ್ಶ, ಸಿದ್ಧಾಂತ ಎಂದು ತಿಳಿದುಕೊಳ್ಳಬಾರದು. ಹಿಂದಿನ ಕಾಲದಲ್ಲಿ ಗುರುಕುಲ ಇತ್ತು. ಗುರುಕುಲಗಳು ಜವಾಬ್ದಾರಿಯಿಂದ ಇದ್ದುವು. ಇವತ್ತು ಆ ಸಿಸ್ಟಂ ಹೋಗಿ ಬಿಟ್ಟಿದೆ.

ಶ್ರೀ ಅಜೀಜ್ ಸೇಠ್.—ಮಾನ್ಯ ಮಳ್ಳೂರು ಆನಂದರಾಯರು ಮಾತನಾಡುತ್ತಾ ಇದ್ದಾರೆ. ಅದಕ್ಕೆ ಸಾರಾಂಶವಾಗಿ ಒಂದೇ ಒಂದು ಮಾತು ಹೇಳಬೇಕಾದರೆ, Eversince we attained independence, we have given a good bye to all of our moral ethics, moral education. ಅವರು ಎಷ್ಟೇ ಮಾತನಾಡಲಿ, ಮಿನಿಸ್ಟರ್ ಮಾರಲ್ ಎಜುಕೇಷನ್ ಇಂಟ್ರ

ಡ್ಯೂಸ್ ಮಾಡಿ ದಿಟ್ಟತನದಿಂದ ಪ್ರಾರಂಭ ಮಾಡುವುದಾದರೆ ನಮ್ಮ ಮಕ್ಕಳನ್ನು ಸಮಾಜದ ದಾರಿಗೆ ತೆಗೆದುಕೊಂಡು ಬರಬಹುದು. ಇಲ್ಲದೇ ಹೋದರೆ, ಅವರು ಬೇರೆದಾರಿ ಹಿಡಿಯುತ್ತಾರೆ. Girls, boys, principals, teachers, lecturers, professors all are hand in hand. ನೀವು ಎಷ್ಟು ತಲೆ ಹೊಡೆದುಕೊಂಡರೂ ಏನೂ ಆಗುವುದಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಹಿಂದಿನ ಕಾಲದಲ್ಲಿ ಗುರುಕುಲ ಇತ್ತು, ಆ ಸ್ಟ್ರಕ್ಚರ್ ಬದಲಾಗಿದೆ ಯೆಂದು ಹೇಳಿದಿರಿ. ಗುರುಕುಲ ಇದ್ದಾಗ ಯಾವ ಯಾವ ಜನರಿಗೆ ಅಡ್ಮಿಷನ್ ಇತ್ತು ಎನ್ನುವುದು ತಮಗೆ ಗೊತ್ತಿದೆಯೋ ? ಜಾತ್ಯಾತೀತ ಶಿಕ್ಷಣ ಮೂಲ ಆಧಾರ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಅರಕೇರಿಯವರಿಗೆ ನನ್ನ ಇಡೀ ಭಾಷಣ ಕೇಳಿದರೆ ತೃಪ್ತಿಯಾಗಬಹುದು. ಹಿಂದಿನ ಕಾಲದಲ್ಲಿ ಏಕಲವ್ಯನಿಗೆ ಶಿಕ್ಷಣ ಕೊಡದೆ ಇರಬಹುದು, ಕರ್ಣನಿಗೆ ಹೊರ ಗಡೆ ಹಾಕಿರಬಹುದು, ಅದು ದೋಷ, ತಪ್ಪು. ಆದರೆ ಗುರುಕುಲದಲ್ಲಿ ವ್ಯಕ್ತಿಯನ್ನು ಪರಿಶುದ್ಧಮಾಡಿ ಸಮಾಜಕ್ಕೆ ಕೊಡತಕ್ಕಂಥ ಒಂದು ವ್ಯವಸ್ಥೆ ಇತ್ತು. ಆ ಸೋಷಿಯಲ್ ಸ್ಟ್ರಕ್ಚರ್ It is out-dated now. It has gone. ಸಮಾಜ ಬದಲಾಗಿದೆ. ಗುರುಕುಲಗಳಿದ್ದಾಗ ಆವತ್ತು ಜವಾಬ್ದಾರಿ ಸರ್ಕಾರ ಇರಲಿಲ್ಲ, ಗುರುಕುಲಗಳನ್ನು ನಡೆಸುತ್ತಾ ಇದ್ದದ್ದು ಸರ್ಕಾರ ಅಲ್ಲ, ಋಷಿಗಳು, ಮುನಿಗಳು ಗುರುಕುಲಗಳನ್ನು ನಡೆಸುತ್ತಿದ್ದರು. ಅವರು ಕೇವಲ ಆಧ್ಯಾತ್ಮಿಕ ವಿದ್ಯೆಯನ್ನು ಮಾತ್ರ ಹೇಳಿಕೊಡು ತ್ತಿರಲಿಲ್ಲ. ದ್ರೋಣಾಚಾರ್ಯರು ರಾಜ್ಯವಿದ್ಯೆಯನ್ನೂ ಕೂಡ ಹೇಳಿಕೊಟ್ಟರು.

ಶ್ರೀ ಎಸ್. ಎಸ್. ಅರಕೇರಿ.—ಆಗ ಗ್ರಾಂಟ್ ಇರಲಿಲ್ಲ.

ಶ್ರೀ ಮಳ್ಳೂರು ಆನಂದರಾವ್.—ಆಗ ರಾಜಾಶ್ರಯ ಇತ್ತು. ರಾಜ ಸೊಂಟಕ್ಕೆ ಬಟ್ಟೆ ಕಟ್ಟಿ ಕೊಂಡು ತನ್ನ ಮಕ್ಕಳನ್ನು ಬಿಡುತ್ತಿದ್ದ. ಶ್ರೀಕೃಷ್ಣ ಸಂದೀಪನಿ ಮುನಿಗಳ ಹತ್ತಿರ ಇದ್ದ, ಕಟ್ಟಿಗೆ ಹೊಡೆದುಕೊಂಡು ಜೀವನ ಮಾಡುತ್ತಿದ್ದರು, ಕೃಷ್ಣನೂ ಗುರುಕುಲಕ್ಕೆ ಹೋಗಬೇಕಾಯಿತು, ಶ್ರೀರಾಮನೂ ಆಶ್ರಮಕ್ಕೆ ಹೋಗಬೇಕಾಗಿತ್ತು. You just understand the spirit behind my talk. Grant-in aid not at the mercy of the raja, Grant-in-aid ಇತ್ತು.

ಶ್ರೀ ಎಸ್. ವಿ. ನಾಯಕ್.—ಇಂದಿನ ಶಿಕ್ಷಣ ಸಾಕ್ಷರತೆ ಬಗ್ಗೆ ಪ್ರಚಾರಮಾಡಿದೆ ಎನ್ನುವುದನ್ನು ಒಪ್ಪುತ್ತೀರಾ ?

ಶ್ರೀ ಮಳ್ಳೂರು ಆನಂದರಾವ್.—ಸಾಕ್ಷರತೆ ಬಗ್ಗೆ ಹೇಳುತ್ತೇನೆ. ಸಾಕ್ಷರತೆ ಹಳ್ಳಿಗಳಲ್ಲಿ ಏನಾಗಿದೆ. ಹಳ್ಳಿಯವರನ್ನು ಸ್ಕೂಲಿಗೆ ಏಕೆ ಕಳಿಸಿಲ್ಲ ಎಂದು ಕೇಳಿದರೆ, ಏನು ಮಾಡುವುದು ಕಳಿಸಿಲ್ಲ ಎಂದು ಹೇಳು ತ್ತಾರೆ. ಎಸ್.ಎಸ್.ಎಲ್.ಸಿ. ತನಕ ಬರುತ್ತಾರೆ, ಫೈಲಾಗುತ್ತಾರೆ. ಪ್ಯಾಂಟ್ ತೊಟ್ಟಮೇಲೆ ಅವರಿಗೆ ಮನೆ ಉದ್ಯೋಗ ಹಿಡಿಸುವುದಿಲ್ಲ, ಅಪ್ಪ. ಅಮ್ಮನಿಗೆ ಸಹಾಯವಾಗಿ ನಿಂತುಕೊಳ್ಳುವುದಿಲ್ಲ; ನೀವು ಕೆಲಸ ಕೊಡುವುದಿಲ್ಲ, ಅಪ್ಪ ಹಳ್ಳಿಯಲ್ಲಿ ದುಡಿದು ಮಗನಿಗೆ ಕ್ಷೌರಕ್ಕೆ ಸಿನಿಮಾಗೆ ದುಡ್ಡು ಕೊಡಬೇಕು, is it ? Do you want to give this education? ಅಕ್ಷರ ಬಿತ್ತಬೇಕು That is not the end. ಇದು ಕೊನೇ ಅಲ್ಲ. ಇದು ಎಲ್ಲಿ ಪರ್ಯವಸಾನ ಆಗಬೇಕು. This is my question. Drop outs at the 7th standard, ಎಸ್.ಎಸ್.ಎಲ್.ಸಿ. ಆದಮೇಲೆ ಅಪ್ಪ ಫೀಡ್ ಮಾಡ ಬೇಕಲ್ಲ. Is it not a naked reality ? ಹಳ್ಳಿಗಳಲ್ಲಿ ಈ ಒಂದು ಪರಿಸ್ಥಿತಿ ಇದೆ. ಇದರ ಬಗ್ಗೆ ನಾವು ವಿಚಾರ ಮಾಡಿರಲಿಲ್ಲ. ಈ ದೇಶಕ್ಕೆ ಎಂತಹ ಶಿಕ್ಷಣಬೇಕು, ಎಂತಹ ಶಿಕ್ಷಣ ಕೊಟ್ಟಿದ್ದೇವೆ ಎಂಬ ಬಗ್ಗೆ ಖಂಡಿತವಾಗಿಯೂ ವಿಚಾರ ಮಾಡಿದ್ದೇವೆಯೇ ? ವಿಚಾರಮಾಡಿ, ಅಡಾಪ್ಟ್ ಮಾಡತಕ್ಕಂಥ ಯೋಗ್ಯತೆ ನಮಗಿಲ್ಲ. ದೇಶದಲ್ಲಿ ಸೋಷಿಯಲ್ ಸ್ಟ್ರಕ್ಚರನ್ನು ಅನಲೈಸ್‌ಮಾಡಿ, ಜಾತಿ ಪದ್ಧತಿಗಳನ್ನು ಅನಲೈಸ್‌ಮಾಡಿ, ಹಳ್ಳಿಗಾಡಿನ ಪರಿಸ್ಥಿತಿಯನ್ನು ವಿಶ್ಲೇಷಣೆಮಾಡಿ, ಸಾಮಾಜಿಕ ಸ್ಥಿತಿಗತಿಗಳ ಅಕೌಂಟನ್ನು ತೆಗೆದುಕೊಂಡು ಎಂತಹ ಶಿಕ್ಷಣ ಕೊಟ್ಟರೆ ಸರಿಹೋಗುತ್ತದೆ ಎಂದು ಪ್ರಾಕ್ಟಿಕಲ್ಲಾಗಿ ರೂಪಿಸಿದಂಥ ಒಬ್ಬೇ ಒಬ್ಬ ವ್ಯಕ್ತಿ ಎಂದರೆ ಮಹಾತ್ಮ ಗಾಂಧಿ. ದೇಶಕ್ಕೆ ಬೇಸಿಕ್ ಎಜುಕೇಶನ್ ಕೊಟ್ಟರು. ಅದನ್ನು ಬಿಟ್ಟು ಈಗ ಸಿಕ್ ಎಜುಕೇಷನ್ ಮಾಡಿದರು.

ಶ್ರೀ ಕೆ. ಎಲ್. ಮರಿಸ್ವಾಮಿ.—ಸರ್ವೆ ಮಾಡಬೇಕು. ಬೇಸಿಕ್ ಎಜುಕೇಷನ್ ಕೊಡಬೇಕೆಂದು ಸಂವಿಧಾನದಲ್ಲಿದೆ. ಆದನ್ನು ಕಾರ್ಯರೂಪಕ್ಕೆ ತರುತ್ತಾ ಇಲ್ಲ ಅಷ್ಟೆ.

ಶ್ರೀ ಮಳ್ಳೂರು ಆನಂದರಾವ್.—ಕೆಲವು ಮೆತೆಡ್ಸ್ ಮಾಡಿ ಆಧುನಿಕ ಸಮಾಜಕ್ಕೆ ಅಳವಡಿಸ ಬೇಕಾಗಿತ್ತು. ಬೇಸಿಕ್ ಎಜುಕೇಷನ್ ಇವತ್ತು ಸಿಕ್ ಎಜುಕೇಷನ್ ಆಯಿತು. ಮಹಾತ್ಮಾಗಾಂಧಿ ಯವರು ಸ್ಥಾಪನೆ ಮಾಡಿದಂಥ ಬೇಸಿಕ್ ಎಜುಕೇಷನ್ ಹೊರಟುಹೋಯಿತು ಒಂದು ಮಗು ಬರಬೇಕಾ ದರೆ, Child-centered education, community centered education, crop-centered education ಕೊಡಬೇಕು ಎಂದು ಹೇಳಿದರು. That is what Gandhiji conceived. ಇದನ್ನೆಲ್ಲಾ ರಾಜ್‌ಘಾಟ್‌ನಲ್ಲಿ ಗಾಂಧೀಜಿಯವರ ಜೊತೆಯಲ್ಲಿ ಸಮಾಧಿ ಮಾಡಿದೆವು. ಆದರೂ ಬ್ರಿಟೀಷರ ಪದ್ಧತಿಯನ್ನು ಮುಂದುವರಿಸುತ್ತಿದ್ದೇವೆ. ಇದು ಕೆ.ಎಸ್.ಆರ್.ಟಿ.ಸಿ. ಬಸ್ ಇದ್ದಹಾಗೆ, ಈ ಬಸ್ಸಿಗೆ ಒಳಗಡೆ ಇಂಜನ್ ಇಲ್ಲ, ಪಾರ್ಟ್ಸ್ ಇಲ್ಲ, ಹಾರ್ನ್ ಮಾತ್ರ ಶಬ್ದ ಮಾಡುತ್ತದೆ. ಅದೇ ಬಸ್‌ಗೆ ಸ್ವಲ್ಪ ಪೇಯಿಂಟ್ ಬಳಿದು ನೂಕುತ್ತಾ ಇದ್ದರೆ ಅದು ಮುಂದಕ್ಕೂ ಹೋಗದು, ಹಿಂದಕ್ಕೂ ಹೋಗದು, ನಾವು ಮುಂದಕ್ಕೆ ಹೋಗುತ್ತದೆ ಎನ್ನುವ ಭ್ರಮೆಯಲ್ಲಿದ್ದೇವೆ. ಅದೇ ನೂಕುವ ಖಾಲಿ ಬಸ್‌ನಲ್ಲಿ ೧೬೦ ಕೋಟಿ ರೂಪಾಯಿಗಳನ್ನು ಹಾಕಿ ತಳ್ಳುತ್ತಾ ಇದ್ದೇವೆ.

ಶ್ರೀ ಜಿ. ಬಿ. ಶಂಕರರಾವ್.—ಅದೇ ಬಸ್‌ನಲ್ಲಿ ನೀವು ಕೂತಿದ್ದೀರಲ್ಲ.

ಶ್ರೀ ಮಳ್ಳೂರು ಆನಂದರಾವ್.—ನಾವೂ ನಿಮ್ಮ ಜೊತೆಯಲ್ಲಿ ಇದ್ದೇ ತಳ್ಳುತ್ತಾ ಇದ್ದೇವೆ. ಕಂಡಕ್ಟರ್, ಪ್ಯಾಸೆಂಜರ್, ಡ್ರೈವರ್, ಕ್ಲೀನರ್ ಎಲ್ಲಾ ಇದ್ದಾರೆ. ನಾನು ಬಹಳ ವಿಷಾದದಿಂದ, ದುಃಖ ದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಆದ್ದರಿಂದ ಸರ್ಕಾರ ಶಿಕ್ಷಣ ತಜ್ಞರನ್ನು ಕರೆಸಿ ವಿಚಾರಮಾಡಲಿ. ಈ ಬಗ್ಗೆ ನಾರಾಯಣ ಸ್ವಾಮಿ ಕಮಿಟಿ ಆಯಿತು, ಮಲ್ಲಾರಾಧ್ಯ ಕಮಿಟಿ ಇತ್ತು, ದೇವೇಗೌಡ ಕಮಿಟಿ ಇತ್ತು ಆಲ್ ಕಾಂಪ್ರೆಹೆನ್ಸಿವಾಗಿ ಆಕ್ಟ್ ಮಾಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಮಾನ್ಯ ಮಂತ್ರಿಗಳು ಈಗ ಉತ್ತರ ರೆಡಿ ಮಾಡಿಕೊಂಡಿದ್ದಾರೆ. ಅಧಿಕಾರಿಗಳು ರೆಡಿ ಮಾಡಿಕೊಟ್ಟಿರುತ್ತಾರೆ. ನೀವು ಎಷ್ಟೇ ಪ್ರಯತ್ನಪಟ್ಟರೂ ಆಗುವುದಿಲ್ಲ. ಇದು ಶವ ಶೃಂಗಾರವಾಗಿದೆ, ಇದಕ್ಕೆ ಮೊದಲು ಪ್ರಾಣವನ್ನು ತುಂಬಿ. ನಿಮ್ಮ ರಿಪೋರ್ಟ್‌ಗಳು ಅನ್ಯಾಯವಾಗಿ ಹೋಗುವುದು ಬೇಡ. ಒಂದೊಂದು ಕಾಸೂ ಕೂಡ ರಾಷ್ಟ್ರದ ಸಂಪತ್ತನ್ನು ಬೆಳೆಸುವ ದೃಷ್ಟಿಯಿಂದ ವಿನಿಯೋಗವಾಗಲಿ. ನಿಮಗೆ ಮಾಡಬೇಕು ಎನ್ನುವ ಇಚ್ಛಾಶಕ್ತಿ ಇದ್ದಾರೆ, ಮಾನ್ಯ ಗುಂಡೂರಾಯರಿಗೆ ಮಾಡಬೇಕು ಎನ್ನುವ ಇಚ್ಛಾಶಕ್ತಿ ಇದ್ದರೆ ಈ ವರ್ಷದಲ್ಲೇ ಮಾಡಬಹುದು. ನಮ್ಮನ್ನು ಕೇಳುವುದೇ ಇಲ್ಲ, ಬೇಡ ಬಿಡಿ. ನೀವು ಭಾಷಣಗಳನ್ನು ಮಾಡಿ ಕೊಂಡು ಹೋಗಿ ಎಂದು ಹೇಳುತ್ತೀರಿ. ನನ್ನನ್ನು ಕೇಳಿ ಎಂದು ನಾನು ಹೇಳಲಿಲ್ಲ. ಶಿಕ್ಷಣದ ಬಗ್ಗೆ ಆಳವಾಗಿ ಚಿಂತನೆ ಮಾಡತಕ್ಕವರಿದ್ದಾರೆ.

ಶ್ರೀ ಎಸ್. ವಿ. ನಾಯಕ್.—ತಮಗೆ ಒಂದು ಮಾತನ್ನು ಹೇಳುವುದಾದರೆ. ಇವತ್ತಿನ ದಿವಸ ಏನು ವಿದ್ಯಾಭ್ಯಾಸ ಪದ್ಧತಿ ಇದೆ ಇದರಿಂದ ಉಂಟಾಗಿರತಕ್ಕ ಸಮಸ್ಯೆಗಳಿಗೆ, ಪಾಶ್ಚಿಮಾತ್ಯರ ವಿದ್ಯಾಭ್ಯಾಸದ ಪದ್ಧತಿಯ ಅಂಧಾನುಕರಣೆಯೇ ಕಾರಣವೆಂದು ಹೇಳಿದರೆ ಒಪ್ಪುತ್ತೀರಾ ?

ಶ್ರೀ ಮಳ್ಳೂರು ಆನಂದರಾವ್.—ಅದು ನೂರಕ್ಕೆ ನೂರು ಪಾಲು ಸತ್ಯ. ನಾವು ಏನೂ ಬದಲಾ ವಣೆ ಮಾಡಿಲ್ಲ. ಬ್ರಿಟೀಷರು ತಮ್ಮ ಗುಲಾಮರಿಗೆ ಬರೀ ಕ್ಲರ್ಕ್, ಗುಮಾಸ್ತರ ಹುದ್ದೆಗಳಿಗೆ ಎಷ್ಟು ಶಿಕ್ಷಣ ಕ್ರಮ ಬೇಕಿತ್ತೋ ಅಷ್ಟನ್ನು ಮಾತ್ರ ಏನು ಕೊಟ್ಟು ಹೋಗಿದ್ದರು ಅದನ್ನೇ ನಾವು ಮುಂದುವರಿಸಿ ಕೊಂಡು ಬಂದಿದ್ದೇವೆ ಇನ್ನು ಏನೂ ಬದಲಾವಣೆ ಮಾಡಿಲ್ಲ.

ಶ್ರೀ ವಿ. ಮುನಿಯಪ್ಪ.—ಇಲ್ಲಿಯವರೆಗೆ ಕೊಟ್ಟಿರತಕ್ಕ ವಿದ್ಯಾಭ್ಯಾಸದ ಶಿಕ್ಷಣದ ಪದ್ಧತಿ ಏನಿದೆ ಅದಲಿ ಹಿಂದೆ ವಿದ್ಯಾಭ್ಯಾಸದ ಬಗ್ಗೆ ಆಳವಾಗಿ ಅಭ್ಯಾಸ ಮಾಡಿ ಕೊಟ್ಟಿದ್ದ ತಜ್ಞರ ವರದಿಯನ್ನು ಆದರಿಸಿಯೇ ಮಾಡಿರತಕ್ಕದ್ದು, ಆದರೂ ಅದರ ಪರಿಣಾಮ ಏನಾಯಿತು ?

ಶ್ರೀ ಎಂ. ಮಳ್ಳೂರು ಆನಂದರಾವ್.—ಸರಿ, ಶಿಕ್ಷಣ ತಜ್ಞರು ಕೊಟ್ಟಿರತಕ್ಕ ವರದಿಯಲ್ಲಿ ಪ್ರಾಣ ವನ್ನು ಬಿಟ್ಟು ಉಳಿದಿದ್ದನ್ನು ಇಂಪ್ಲಿಮೆಂಟ್ ಮಾಡಿದ್ದೀರಿ ಅಷ್ಟೇ !

ಶ್ರೀ ವಿ. ಮುನಿಯಪ್ಪ.—ಪ್ರಾಣ ಯಾವುದು ಎಂಬುದನ್ನಾದರೂ ಹೇಳಿ.

ಶ್ರೀ ಎಂ. ಮಳ್ಳೂರು ಆನಂದರಾವ್.—ನಾನು ಹೇಳುತ್ತೇನೆ, ತಾವು ಸಹ ಕುಳಿತು ಯೋಚನೆ ಮಾಡಬೇಕು. ನಾನು ಇಷ್ಟರತನಕ ಶಿಕ್ಷಣ ಪದ್ಧತಿಯ ಬಗ್ಗೆ ತಾತ್ವಿಕವಾಗಿ ವಿಶ್ಲೇಷಣೆ ಮಾಡುವುದಕ್ಕೆ ಹೋಗಿದ್ದೇನೆ, ಶಿಕ್ಷಣದ ಬಗ್ಗೆ ೩ ಗಂಟೆಯಲ್ಲ ೮ ಗಂಟೆ ಬೇಕಾದರೂ ಭಾಷಣ ಮಾಡಬಲ್ಲೆ. ಆದರೆ ಸದಸ್ಯರಿಗೆ ಬೇಜಾರು ಆಗಬಹುದು, ಮತ್ತೆ ಈಗ ಸಮಯದ ಅಭಾವ ಬೇರೆ ಇದೆ.

ಶ್ರೀ ಎಸ್.ವಿ. ನಾಯಕ್.—ಅದಕ್ಕೆ ಕಾಯಕಲ್ಪ ಏನು ಎಂಬುದನ್ನು ಮಾತ್ರ ಹೇಳಿ.

ಶ್ರೀ ಎಂ. ಮಳ್ಳೂರು ಆನಂದರಾವ್.—ಅದನ್ನು ಹೇಳುತ್ತೇನೆ. ತಾವು ಜಪಾನ್ ದೇಶ ತೆಗೆದು ಕೊಳ್ಳಿ, ಅದು ಬೇಡ ಜರ್ಮನಿ ದೇಶ ತೆಗೆದುಕೊಳ್ಳಿ ಎರಡನೇ ಮಹಾಯುದ್ಧವಾದ ನಂತರ ಅಲ್ಲಿ ಉಂಟಾಗಿದ್ದಂಥ ಪರಿಸ್ಥಿತಿ ಎಲ್ಲರಿಗೂ ಗೊತ್ತೇ ಇದೆ ಅಲ್ಲಿ ಗಂಡಸರೇ ಇರಲಿಲ್ಲ, ಎಲ್ಲಾ ಯುದ್ಧದಲ್ಲಿ ಸತ್ತು ಹೋಗಿದ್ದರು, ಕೇವಲ ಮುದುಕರು, ಹೆಣ್ಣುಮಕ್ಕಳು ಮಾತ್ರ ಇದ್ದರು. ಆದರೆ ಇವತ್ತು ಆ ದೇಶವೇನಾಗಿದೆ ? ಇಡೀ ಇಂಟರ್ ನ್ಯಾಶನಲ್ ಮಾರ್ಕೆಟ್‌ನಲ್ಲಿ ನಮ್ಮ ಭಾರತವನ್ನೇ ಬೀಟ್ ಮಾಡು ತ್ತದೆ, ಆರ್ಥಿಕ ಕ್ಷೇತ್ರದಲ್ಲಿಯಾಗಲೀ ಇಲ್ಲವೇ ಯಾವುದೇ ಕ್ಷೇತ್ರದಲ್ಲಿಯಾಗಲೀ, ಅಷ್ಟು ಪುಟ್ಟ ರಾಷ್ಟ್ರ ಇವತ್ತು ಭಾರತವನ್ನೇ ಕೊಂಡುಕೊಳ್ಳುವುದಕ್ಕೆ ಸಿದ್ಧವಾಗಿದೆ. ಅದೇ ರೀತಿ ಇವತ್ತು ನಮ್ಮಲ್ಲಿ ಸಹ ಆಗ ಬೇಕಾಗಿದ್ದರೆ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಆಮೂಲಾಗ್ರವಾಗಿ ಬದಲಾವಣೆಯಾಗಬೇಕಾಗಿದೆ. ನರ್ಸರಿ ಯಿಂದ ಹಿಡಿದು ಮೇಲಿನವರೆಗೂ ಈ ಶಿಕ್ಷಣ ಪದ್ಧತಿ ಆಮೂಲಾಗ್ರವಾಗಿ ಬದಲಾವಣೆಯಾಗಬೇಕಾಗಿದೆ. ಅದನ್ನು ಜೀವಂತವನ್ನಾಗಿ ಮಾಡಿ, ಧೃಡಕಾಯವಾಗಿ ಮಾಡತಕ್ಕ ವ್ಯವಸ್ಥೆ ಅತ್ಯಂತ ಅವಶ್ಯಕವಿದೆ. ಇದನ್ನು ಶ್ರೀ ಶಂಕರ್‌ರಾವ್‌ರವರು ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರವೇ ಕೇಂದ್ರದಲ್ಲಿರುವುದ ರಿಂದ, ಅವರು ಧೃಢ ಮನಸ್ಸಿನಿಂದ, ಇದರ ಬಗ್ಗೆ ವಿಚಾರ ಮಾಡಿ ಮಾಡುತ್ತಾರೆಂದು ಕಾಣುತ್ತದೆ. ಆದುದರಿಂದ ಇದರ ಬಗ್ಗೆ ಅವರು ವಿಚಾರಣೆ ಮಾಡಿ ಸರ್ಕಾರದವರ ವಿದ್ಯಾಭ್ಯಾಸದ ಹೊಸ ಪಾಲಿಸಿ ಏನೆಂಬುದನ್ನು ತಿಳಿಸುತ್ತಾರೆಂದು ಭಾವಿಸಿದ್ದೇವೆ. ಇದರ ಬಗ್ಗೆ ಒಂದು ಸಲ ವಿಚಾರ ಮಾಡುವುದಕ್ಕೆ ಶುರು ಮಾಡಿ ಸಾಕು ಆ ನಂತರ ಅದು ತನ್ನಷ್ಟಕ್ಕೆ ತಾನೇ ಕಾರ್ಯಗತಕ್ಕೆ ಬರುತ್ತದೆ. ಆಗ ನೀವು ಅಚೀವ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಶಿಕ್ಷಣ ರೀತಿ ನೀತಿ ಬಗ್ಗೆ ಹೇಳುವುದಾದರೆ ನಿಮ್ಮಲ್ಲಿ ನೀತಿಯೇ ಇಲ್ಲ ಅದಕ್ಕೆ ಮಾನ್ಯ ಮಂತ್ರಿಗಳವರು ಯೂನಿಫಾರಂ ಆ್ಯಕ್ಟನ್ನು ತರುತ್ತಿದ್ದೇವೆಂದು ಹೇಳು ತ್ತಿದ್ದಾರೆ, ಅದು ಯಾವ ರೀತಿಯಾಗಿ ಮಾಡುತ್ತಾರೋ, ಯಾವ ರೀತಿಯಾಗಿ ತರುತ್ತಾರೋ ಗೊತ್ತಿಲ್ಲ. ಅದೇನೇ ಬರಲಿ, ಇವತ್ತು ಶಿಕ್ಷಣ ಸಮಗ್ರ ಬದಲಾವಣೆಗಾಗಿ ಒಂದು ಮಸೂದೆಯನ್ನು ತರುತ್ತಿದ್ದೇವೆಂದು ಹೇಳುತ್ತಿದ್ದಾರೆ ಸಂತೋಷ, ತರಲಿ ನೋಡೋಣ.

ಇನ್ನು ನಿಮ್ಮ ವಿದ್ಯಾಭ್ಯಾಸದ ಅಡ್ಮಿನಿಸ್ಟ್ರೇಷನ್ ಬಗ್ಗೆ ಬರುತ್ತೇನೆ. ನಿಮ್ಮ ಇಲಾಖೆ ಈಗ ಹೇಗೆ ನಡೆಯುತ್ತಿದೆ ಎಂದು ಹೇಳುವುದಾದರೆ ನಾವು ಕೊಟ್ಟಂಥ ೧೬೦ ಕೋಟಿ ಹಣದಲ್ಲಿ, ಮಾನ್ಯ ಶ್ರೀ ಅರಕೇರಿ ಯವರೇ ತಾವು ಕೇಳಬೇಕು, ಇತ್ತ ಕಡೆಗೆ ಗಮನ ಕೊಡಬೇಕು, ನಾವು ಇಲ್ಲಿ ಅನೇಕ ಸ್ಕ್ಯಾಂಡಲ್ಸ್‌ಗಳನ್ನು ತರುತ್ತಿದ್ದೇವೆ. ಫುಡ್ ಸ್ಕ್ಯಾಂಡಲ್ಸ್, ೬೦ ರೋಲರ್ ಮಿಲ್ಸ್‌ಗೆ ಪರ್ಮಿಟ್ ಕೊಟ್ಟ ಸ್ಕ್ಯಾಂಡಲ್ಸ್ ಮುಂತಾದವುಗಳನ್ನು ತರುತ್ತಿದ್ದೇವೆ, ಅದೇ ರೀತಿ ಇವತ್ತು ವಿದ್ಯಾಭ್ಯಾಸ ಇಲಾಖೆಯಲ್ಲಿ ೨-೩ ಲಕ್ಷ ರೂಪಾಯಿಗಳ ದುರ್ವ್ಯವಹಾರವಾಗಿರುವುದನ್ನು ನಾನು ಹಿಂದೆಲ್ಲಾ ಈ ಸಭೆಯಲ್ಲಿ ಮಂತ್ರಿಗಳ ಗಮನಕ್ಕೆ ತಂದಿದ್ದೆ. ಮಾನ್ಯ ಶ್ರೀ ಸವದ್‌ರವರು ಮೆಡಿಕಲ್ ಕಾಲೇಜ್‌ಗಳನ್ನು ನಡೆಸಲು ಹಣವಿಲ್ಲವೆಂದು ಸೀಟ್ ಗಳನ್ನು ೪೦ ಲಕ್ಷಕ್ಕೆ ಮಾರಿಕೊಳ್ಳುವ ಅವಶ್ಯಕತೆ ಇಲ್ಲ, ಇವತ್ತು ವಿದ್ಯಾಭ್ಯಾಸ ಇಲಾಖೆಯಲ್ಲಿ ಏನು ಹಣ ದುರುಪಯೋಗವಾಗುತ್ತಿದೆ ಅದನ್ನು ತಡೆಗಟ್ಟಿದರೆ ಸಾಕು, ಅವುಗೂ ಸಹ ಹಣ ಕೊಡಬಹುದು. ಈ ಪ್ರೈವೇಟ್ ಮೆಡಿಕಲ್ ಕಾಲೇಜುಗಳನ್ನು ಸರ್ಕಾರದವರು ನಡೆಸುವ ಅವಶ್ಯಕತೆಯು ಇರುವುದಿಲ್ಲ. ಎಲ್ಲಾ ಮೆಡಿಕಲ್ ಕಾಲೇಜ್‌ಗಳನ್ನೂ ಸಹ ಆಗ ಸರ್ಕಾರದವರೇ ನಡೆಸಬಹುದಾಗಿದೆ. ಇದು ಸರ್ಕಾರದವರ ಮುಂದೆ ಕಣ್ಣುಮುಂದೆಯೇ ಕೋಟ್ಯಾಂತರ ರೂಪಾಯಿಗಳ ಹಗಲು ದರೋಡೆಯಾಗುತ್ತಿದೆ. ಮುಚ್ಚಿ ರುವ ಶಾಲೆಗಳಿಗೆಹೇಗೆ ಸ್ವಾಮಿ ಗ್ರಾಂಟ್ ಸ್ಯಾಂಕ್ಷನ್ ಮಾಡುವುದು ?

ಶ್ರೀ ಜಿ. ಬಿ. ಶಂಕರ್‌ರಾವ್.—ಇಲ್ಲಾ......

ಶ್ರೀ ಎಂ. ಮಳ್ಳೂರು ಆನಂದರಾವ್.—ಸ್ಯಾಂಕ್ಷನ್ ಮಾಡಿದ್ದಾರೆ, ಗ್ರಾಂಟ್ಸ್ ಕೊಟ್ಟಿದ್ದಾರೆ. ಈ ರೀತಿ ಹಗಲು ದರೋಡೆಯಾಗುತ್ತಿರುವುದನ್ನು ನೀವು ತಪ್ಪಿಸಿದರೆ ಅದರಲ್ಲಿ ಉಳಿದ ಹಣವನ್ನು ಬೇಕಾದರೆ ಶ್ರೀ ಬಂಗಾರಪ್ಪನವರು ರೈತರಿಗೆ ಸಬ್ಸಿಡಿ ಕೊಡಬಹುದು. ಆದುದರಿಂದ ಈ ಗ್ರಾಂಟ್ ಇನ್ ಏಡ್ ಹಣ ವನ್ನು ಕೊಡುವುದರಲ್ಲಿ ಏನು ಹಗಲು ದರೋಡೆ ನಡೆಯುತ್ತಿದೆ ಅದರ ಕಡೆಗೆ ಸರ್ಕಾರದವರು ಗಮನ ಕೊಡಬೇಕು. ಸುಮಾರು ೨೮ರಿಂದ ೩೦ ಕೋಟಿ ರೂಪಾಯಿಗಳ ತನಕ ಈ ದುರ್ವ್ಯವಹಾರ ನಡೆದಿದೆ. ಸ್ವಾಮಿ ನಾನು ಇದರ ಬಗ್ಗೆ ೭ ವರ್ಷಗಳಿಂದ ಇದರ ಬಗ್ಗೆ ಹೇಳುತ್ತಲೇ ಇದ್ದೇನೆ ಯಾವ ಶಿಕ್ಷಣ ಮಂತ್ರಿ ಗಳವರೂ ಇದನ್ನು ಮುಟ್ಟುವುದಕ್ಕೆ ಧೈರ್ಯ ಮಾಡಲಿಲ್ಲ. ಈ ಸದನದಲ್ಲಿ ಹಿಂದಿನ ಸಲ ನಾನು ಭಾಷಣ

ಮಾಡುತ್ತಿದ್ದಾಗ ಶ್ರೀ ಸುಬ್ಬಯ್ಯಶೆಟ್ಟಿಯವರು ವಿದ್ಯಾಮಂತ್ರಿಗಳಾಗಿದ್ದಾಗ ನಾನು ಹೇಳಿದ್ದೆ, ಈಗ ಅವರ ನನ್ನ ಪಕ್ಕದಲ್ಲಿ ಬಂದು ಕೂತಿದ್ದಾರೆ, ಈಗ ಎಲ್ಲೋ ಎದ್ದು ಹೊರಗಡೆ ಹೋಗಿದ್ದಾರೆ, ಅವರು ಇದ್ದಾಗ ನಾನು ಹೇಳಿದ್ದೆ, ನೀವು ಖಾಸಗಿ ಶಾಲೆಗಳಲ್ಲಿ ನಡೆಯುತಕ್ಕ ಹಗಲು ದರೋಡೆಯನ್ನು ನಿಲ್ಲಿಸಿರುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡರೆ ಖಂಡಿತವಾಗಿಯೂ ಬೆಂಗಳೂರು ನಗರದಲ್ಲಿ ಹೂವಿನ ರಥದಲ್ಲಿ ಕೂರಿಸಿ ಸ್ವಯಂ ನನ್ನ ನೇತೃತ್ವದಲ್ಲಿ ಮೆರವಣಿಗೆ ಮಾಡಿಸುತ್ತೇನೆಂದು ಹೇಳಿದ್ದೆ. ನಾನು ಅನಂತರ ಅತ್ತ ಕಡೆಗೆ ಹೋದೆ ಇಬ್ಬರ ಪುನಃ ಇತ್ತ ಕಡೆಗೆ ಬಂದು ಬಿಟ್ಟಿದ್ದೇವೆ. ಇಲ್ಲ ನಾನೇ ಹೋಗಿ ಅವರನ್ನು ಕರೆದುಕೊಂಡು ಬಂದು ಬಿಟ್ಟೆ.

ಒಬ್ಬ ಸದಸ್ಯರು.—ಶ್ರೀ ಶಂಕರ್‌ರಾವ್‌ರವರಿಗೆ ಮಾಡಿಸಿ ಬಿಡಿ.

ಶ್ರೀ ಎಂ. ಮಳ್ಳೂರು ಆನಂದರಾವ್.—ಅದು ನನ್ನ ಕೈಯಲ್ಲಿದೆ. ಹಿಂದೆ ಇದ್ದ ವಿದ್ಯಾಮಂತ್ರಿಗಳವರು ಯುವಕರಿದ್ದರು, ಬಹಳ ಆಸಕ್ತಿ ವಹಿಸಿ ಮಳ್ಳೂರು ಆನಂದರಾಯರೇ ನಾನು ಇದನ್ನು ಮಾಡಿಯೇ ಮಾಡಿ ತೋರಿಸುತ್ತೇನೆ ಎಂದು ಹೇಳಿದ್ದರು. ಆದರೆ ದುರ್ದೈವ ಹಣೆ ಬರಹ ನೆಟ್ಟಗೆ ಇರಲಿಲ್ಲ ನಾನು ಹೋಗಿ ಅವರನ್ನು ಇತ್ತಕಡೆಗೆ ಕರೆದುಕೊಂಡು ಬಂದು ಬಿಟ್ಟೆ. ಆದುದರಿಂದ ಇದನ್ನು ನಾನು ಹಾಸ್ಯಾಸ್ಪದಕ್ಕೆ ಹೇಳುತ್ತಿಲ್ಲ. ಇದನ್ನು ಶ್ರೀ ಶಂಕರ್‌ರಾವ್‌ರವರೇ ಮಾಡಲಿ ನಾನು ಖಂಡಿತವಾಗಿಯೂ ಮೆರವಣಿಗೆ ಮಾಡಿಸಿಯೇ ಮಾಡಿಸುತ್ತೇನೆ.

ಒಬ್ಬ ಸದಸ್ಯರು.—ನೀವು ಏತಕ್ಕೆ ಅತ್ತಕಡೆಗೆ ಹೋಗಬಾರದು ?

ಶ್ರೀ ಎಂ. ಮಳ್ಳೂರು ಆನಂದರಾವ್.—ಅದೇ ನನ್ನ ಹಣೆ ಬರಹ ನೆಟ್ಟಗಿಲ್ಲ. ನಾನು ಯಾವಾಗಲೂ ವಿರೋಧ ಪಕ್ಷದಲ್ಲಿಯೇ ಕೂತಿರಬೇಕೆಂದಿದೆ. ನಾನು ಇತ್ತ ಕಡೆಯಿಂದ ಅತ್ತ ಕಡೆಗೆ ಹೋದರೆ ಆ ಪಕ್ಷ ವಿರೋಧ ಪಕ್ಷವಾಗಿ ಕನ್‌ವರ್ಟ್ ಆಗಿ ಬಿಡುತ್ತದೆ. ನಾನು ಅಲ್ಲಿಗೆ ಹೋದೆ ನೋಡಿ ಶ್ರೀ ಬಸವಲಿಂಗಪ್ಪನವರು, ಶ್ರೀ ದೇವರಾಜ್ ಅರಸ್‌ರವರು ಇತ್ತಕಡೆಗೆ ಬಂದುಬಿಟ್ಟರು, ಅದಕ್ಕೆ ನೋಡಿ ಅವರು ನನ್ನನ್ನು ಮುರುಗಟ್ಟಿಕೊಂಡು ನೋಡುತ್ತಿದ್ದಾರೆ.

(ನಗು......)

ಶ್ರೀ ಎ. ಅಜೀಜ್ ಸೇಠ್.—ಮತ್ತೆ ಈಗ ಅತ್ತಕಡೆಗೆ ಏತಕ್ಕೆ ಹೋಗುವುದಿಲ್ಲ, ಅವರ ಕಡೆಗೆ ಹೋಗಿ.

ಶ್ರೀ ಎಂ. ಮಳ್ಳೂರು ಆನಂದರಾವ್.—ಇಬ್ಬರೂ ಅತ್ತ ಕಡೆಗೆ ಹೋಗಿ ಕುಳಿತುಕೊಳ್ಳೋಣ ಬನ್ನಿ.

ಶ್ರೀ ಅಜೀಜ್ ಸೇಠ್.—ಅದು ಆಗುವುದಿಲ್ಲ, ಅದು ಜಾತಿ ಭ್ರಷ್ಟವಾಯಿತು.

ಶ್ರೀ ಎಂ. ಮಳ್ಳೂರು ಆನಂದರಾವ್.—ಖಾಸಗಿ ಶಾಲೆಗಳಲ್ಲಿ ಏನು ಅಕ್ರಮ ನಡೆದಿದೆ. ಎನ್ನುವ ಬಗ್ಗೆ ಕಳೆದ ೭ ವರ್ಷಗಳಿಂದ ನಾನು ಮಾತನಾಡಿದ್ದೇನೆ ಇನ್ನು ಮುಂದೆ ಈ ಸದನದಲ್ಲಿ ಮಾತನಾಡಲೇ ಬಾರದೆಂದಿದ್ದೆ, ಆದರೆ ಈ ಸಾರ್ತಿಯಾದರೂ ತಾವು ಏನೂ ಕ್ರಮ ತೆಗೆದುಕೊಳ್ಳದಿದ್ದರೆ ನಾನು ಇನ್ನು ಮುಂದೆ ಮಾತನಾಡುವುದನ್ನೇ ನಿಲ್ಲಿಸಿ ಬಿಡಬೇಕಾಗುತ್ತದೆ. ನಾನೇನಾದರೂ ಇವತ್ತಿನ ದಿವಸ ಖಾಸಗಿ ಶಾಲೆಗಳ ಬಗ್ಗೆ ಮಾತನಾಡುವುದಕ್ಕೆ ಹೋದರೆ, ಅಲ್ಲಿ ಏನು ಈ ಗ್ರ್ಯಾಂಟ್ ಇನ್ ಏಡ್‌ನಲ್ಲಿ ೨. ೩,೫ ಲಕ್ಷದ ವರೆಗೆ ಸ್ಯಾಂಕ್ಷನ್ ಮಾಡಿ ಅವ್ಯವಹಾರ ನಡೆದಿದೆ ಅದರ ಬಗ್ಗೆ ಹೇಳುತ್ತಲೇ ಇದ್ದರೆ, ಇವನೇನು ಮಳ್ಳೂರು ಆನಂದರಾವ್ ಹುಚ್ಚನಿದ್ದಾನೆಂದು ಹೇಳುತ್ತಾರೆ ಅಷ್ಟೆ. ಅವನೇನು ಮಾಡುತ್ತಾನೆ, ವಿಧಾನ ಸೌಧದಲ್ಲಿ ಹೇಳಿದರೆ, ವಿದ್ಯಾಮಂತ್ರಿಗಳವರೇನು ನಮಗೆ ಮಾಡುತ್ತಾರೆ. ನಮ್ಮ ಜಾಯಿಂಟ್ ಡೈರೆಕ್ಟರ್ ರವರು ಡಿಡಿಪಿಐ ರವರು ನಮ್ಮ ಕೈಯಲ್ಲಿದ್ದಾರೆ. ಅಂಡರ್ ಸೆಕ್ರೆಟರಿಯವರು ನಮ್ಮ ಕೈಯಲ್ಲಿದ್ದಾರೆ. ಅವರನ್ನು ಸಾಯಂಕಾಲ ಇಂಥಾ ಕ್ಲಬ್ಬಿಗೆ ಬನ್ನಿ ಎಂದರೆ ಬಂದು ಕುಳಿತುಕೊಳ್ಳುತ್ತಾರೆಂದು ಆ ಮ್ಯಾನೇಜ್‌ಮೆಂಟಿನವರು ಹೇಳುತ್ತಾರೆ. ನಾನು ಯಾವ ಯಾವ ಆಫೀಸರ್ಸ್ ಮೇಲೆ ಚಾರ್ಜ್ ಮಾಡಿದ್ದೇವೆ ಅವರೆಲ್ಲಾ ಮನೆಗೆ ಹೋದರು ಹೋಗುವಾಗ ೨, ೩ ಲಕ್ಷ ಮಾಡಿಕೊಂಡೇ ಹೋಗಿದ್ದಾರೆ. ಮತ್ತೆ ಒಬ್ಬರು ಮಾಡಿ ಇಟ್ಟುಕೊಂಡಿದ್ದ ಹಣವನ್ನೆಲ್ಲಾ ಹಾಕಿ ಎಂಎಲ್‌ಸಿ ಆಗಬೇಕೆಂದು ಹೊರಟರು, ಪಾಪ. ಆದರೆ ಶಿಕ್ಷಕರು ಅವರಿಗೆ ಓಟು ಕೊಡಲಿಲ್ಲ, ಏತಕ್ಕೆಂದರೆ ಶಿಕ್ಷಕರಿಗೆಲ್ಲಾ ಅವರ ಯೋಗ್ಯತೆ ಏನು ಎಂಬುದು ಚೆನ್ನಾಗಿ ಗೊತ್ತಿತ್ತು. ಇದರಿಂದ ಅವರನ್ನು ಶಿಕ್ಷಕರು ತಿರಸ್ಕಾರ ಮಾಡಿದರು.

ನಾನು ಯಾವ ಯಾವ ಶಾಲೆಗಳ ಮೇಲೆ ಆಪಾದನೆ ಮಾಡಿದ್ದೆ ಅದನ್ನು ವಿಜಿಲೆನ್ಸ್‌ಗೆ ರೆಫರ್ ಮಾಡಿ ಸಾಕ್ಷಿಗೆ ನನ್ನನ್ನು ಕರೆಸಿದ್ದರು. ಆದರೆ ಮತ್ತೆ ಒಂದು ವರ್ಷದಲ್ಲಿ ಎಲ್ಲಾ ಲೂಟಿ ಹೊಡೆದರು. ಒಂದು ಉದಾಹರಣೆ ಹೇಳುತ್ತೇನೆ. ನನಗೆ ಹೇಳಿ ಹೇಳಿ ಬೇಜಾರು ಆಗಿಬಿಟ್ಟಿದೆ. ಆದರೆ ಪ್ರಯೋಜನ ಮಾತ್ರ ಏನೂ ಆಗಲಿಲ್ಲ. ಸರಸ್ವತಿ ವಿದ್ಯಾನಿಕೇತನ ಎಂಬ ಸಂಸ್ಥೆ ೨೪ ಶಾಲೆಗಳನ್ನು ನಡೆಸುತ್ತಿದೆ. ಬೆಂಗಳೂರಿನಲ್ಲಿ ಸಾಮಾನ್ಯ ಡ್ರಿಲ್ ಇನ್‌ಸ್ಪೆಕ್ಟರ್ ಆಗಿದ್ದವನೊಬ್ಬ ೨೪ ಶಾಲೆಗಳನ್ನು ನಡೆಸುತ್ತಿದ್ದಾನೆ. ಗಾಯಿತ್ರಿನಗರ, ರಾಜಾಜಿನಗರದಲ್ಲಿ ೧೪ ನರ್ಸರಿ ಶಾಲೆಗಳಿವೆ ಎಂದು ಇದೆ. ಎಲ್ಲಾ ಬೋಗಸ್. ೧೯೭೪-೭೫ರಲ್ಲಿ ನಾನು ವಿಧಾನಪರಿಷತ್ತಿನ ಸದಸ್ಯನಾಗಿದ್ದಾಗ ಕೆಲವು ದೂರುಗಳನ್ನು ಮಾಡಿದೆ. ಆಗ ಮಾನ್ಯ ಮಲ್ಲಿಕಾರ್ಜುನ ಸ್ವಾಮಿಯವರು ವಿದ್ಯಾಮಂತ್ರಿಗಳಾಗಿದ್ದರು. ನಂತರ ವಿಚಾರಣೆ ಮಾಡಿಸಿ ೧೯೭೪ರಲ್ಲಿ ಅದಕ್ಕೆ ಕೊಟ್ಟಿದ್ದ ಅಂಗೀಕಾರವನ್ನು ವಾಪಸ್ ತೆಗೆದುಕೊಂಡರು. ಶಾಲೆಗಳನ್ನು ಮುಚ್ಚಿಸಿದರು. ೧೯೭೪-೭೫ರಲ್ಲಿ ನಾನು ಜೈಲಿಗೆ ಹೋದೆ. ೧೯೭೩-೭೪ರಿಂದ ೧೯೭೭ರವರೆಗೆ ೬ ಲಕ್ಷ ರೂಪಾಯಿ ೮೧ ಸಾವಿರ ರೂಪಾಯಿಯನ್ನು ರೆಟ್ರಾಸ್ಪೆಕ್ಟಿವ್ ಎಫೆಕ್ಟ್ ಗ್ರಾಂಟ್‌ನ್ನು ಅವರಿಗೆ ಇಲಾಖೆಯವರು ಮಂಜೂರು ಮಾಡಿದ್ದಾರೆ. ಶಿಕ್ಷಣ ಮಂತ್ರಿಗಳಾಗಿದ್ದ ಶ್ರೀಮಾನ್ ಸುಬ್ಬಯ್ಯಶೆಟ್ಟಿಯವರಿಗೆ ಈ ವಿಷಯ ಹೇಳಿದೆ. ಅವರು ೩ ಲಕ್ಷ ರೂಪಾಯಿಯನ್ನು ಮಾತ್ರ ಕೊಡುವಂತೆ ನಿಲ್ಲಿಸಿದರು. ಇನ್ನು ಮೂರೂವರೆ ಲಕ್ಷ ರೂಪಾಯಿ ಲೂಟಿಯಾಯಿತು. ಅಸ್ತಿತ್ವವಿಲ್ಲದ ಶಾಲೆಗೆ ಹಣ ಮಂಜೂರಾಗಿದೆ.

ಶ್ರೀ ಎಂ.ಸಿ. ನಾಣಯ್ಯ.—ನೀವು ಹೇಳುವುದನ್ನು ಸ್ವಲ್ಪ ನಿಧಾನವಾಗಿ ಹೇಳಿ, ಮಾನ್ಯ ಶಿಕ್ಷಣ ಮಂತ್ರಿಗಳು ಬರೆದುಕೊಳ್ಳುತ್ತಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್.—ನನ್ನ ಹತ್ತಿರ ಬೇಕಾದಷ್ಟು ಮಾಹಿತಿ ಇದೆ. ಅದನ್ನೆಲ್ಲಾ ಹೇಳುತ್ತಾ ಹೋದರೆ ಒಂದು ದಿನವಾದರೂ ಮುಗಿಯುವುದಿಲ್ಲ. ಈ ರೀತಿ ಬೋಗಸ್ ಶಾಲೆಗಳನ್ನು ನಡೆಸಿ ಹಣ ಲೂಟಿ ಹೊಡೆಯುತ್ತಿರುವ ಮನುಷ್ಯ ಹೇಗಿದ್ದಾನೆಂದರೆ he is a king of kings; all Educational Officers are in his pockets. ಇಲ್ಲದೇ ಇರುವ ಶಾಲೆಗೆ ೬ ವರ್ಷದಿಂದ ರೆಟ್ರಾಸ್ಪೆಕ್ಟಿವ್ ಎಫೆಕ್ಟ್ ಕೊಟ್ಟು ಗ್ರಾಂಟನ್ನು ಮಂಜೂರು ಮಾಡಿದ್ದಾರೆ. ಈ ರೀತಿ ಮಂಜೂರು ಮಾಡುವ ಅಧಿಕಾರವನ್ನು ಯಾವ ಶಿಕ್ಷಣಾಧಿಕಾರಿಗೆ ಕೊಟ್ಟಿದ್ದೀರಿ? ಮಾನ್ಯ ಸುಬ್ಬಯ್ಯಶೆಟ್ಟರ ಮೇಲೆ ಒತ್ತಡ ತಂದಿದ್ದರಿಂದ ಮೂರು ಲಕ್ಷ ರೂಪಾಯಿ ಉಳಿತಾಯವಾಯಿತು, ಆದರೂ ಮೂರೂವರೆ ಲಕ್ಷ ರೂಪಾಯಿ ಲೂಟಿಯಾಯಿತು. ಈ ವರ್ಷ ಶಿಕ್ಷಣ ಇಲಾಖೆ ಅವನಿಗೆ ಇನ್ನೂ ಎರಡು ಶಾಲೆಗಳಿಗೆ ಹೊಸದಾಗಿ ಪ್ರಾರಂಭ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದೆ. ಇದು ನಿಮ್ಮ ಇಲಾಖೆ ಅವನಿಗೆ ಕೊಟ್ಟಿರುವ ಬಹುಮಾನ. ಜಯನಗರದಲ್ಲಿ ತೇಜಸ್ವಿನಿ ಶಾಲೆಯನ್ನು ಪ್ರಾರಂಭ ಮಾಡಲು ಅನುಮತಿ ಕೊಟ್ಟಿದ್ದಾರೆ.

SRI AZEEZ SAIT.—That shows his capacity. The Minister must understand.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಸಚಿವರಾದವರು ಸ್ವಲ್ಪ ಅಲ್ಲಿ ಹೋಗಿ ನೋಡಬೇಕು. ಸರಿಯಾಗಿ ಪರಿಶೀಲನೆ ಮಾಡಿ ನೋಡಬೇಕು. ನೀವು ಗೊಂಡಾರಣ್ಯದಲ್ಲಿದ್ದೀರಿ. ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಶಿಕ್ಷಣ ಇಲಾಖೆ ಒಂದು ಗೊಂಡಾರಣ್ಯ ಇದ್ದ ಹಾಗೆ. ಅದರಲ್ಲಿ ಒಳಗಡೆ ಹೋಗಬಹುದು, ಆದರೆ ಹೊರಗಡೆ ಬರಬೇಕಾದರೆ ಬಹಳ ಕಷ್ಟ. ನಾನು ೬ ಜನ ಶಿಕ್ಷಣ ಮಂತ್ರಿಗಳನ್ನು ನೋಡಿದ್ದೇನೆ. ನೀವು ಅದರಲ್ಲಿ ಕೊನೆಯವರು. ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರು ಸ್ವರ್ಗಕ್ಕೇ ಹೊರಟುಹೋದರು. ಆದರೆ ನಾನು ನಿಮಗೆ ಆ ರೀತಿ ಹಾರೈಸುವುದಿಲ್ಲ. ನೀವು ಬಹಳ ದಿನ ಶಿಕ್ಷಣ ಮಂತ್ರಿಗಳಾಗಿರಿ ಎಂದು ಹಾರೈಸುತ್ತೇನೆ. ನಿಮ್ಮ ಡಿಪಿಐ ಆಫೀಸ್ ಇದೆಯಲ್ಲಾ ಇದು ಮತ್ತು ಡಿಡಿಪಿಐ ಇದೆಯಲ್ಲಾ direct educational departments and administration; it is meant to loot money through Private Educational Institutions. This is my charge. If you want I will prove it. ಇನ್ನೊಂದು ರೇಣುಕಾ ವಿದ್ಯಾ ಸಂಸ್ಥೆ ಎಂದಿದೆ.

ಉಪಾಧ್ಯಕ್ಷರು.—ನಿಮಗೆ ಇನ್ನು ಐದು ನಿಮಿಷ ಮಾತ್ರ ಅವಕಾಶ ಕೊಡುತ್ತೇನೆ.

ಶ್ರೀ ಅಜೀಜ್ ಸೇಠ್.—ನನ್ನ ಟೈಮನ್ನು ಅವರಿಗೆ ಕೊಡುತ್ತೇನೆ.

ಉಪಾಧ್ಯಕ್ಷರು.—ನಿಮ್ಮ ಹೆಸರೇ ಇಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಅವರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಮಾತನಾಡಲಿ.

ಶ್ರೀ ಮಳ್ಳೂರು ಆನಂದರಾವ್.—ನನ್ನ ಕ್ಷೇತ್ರದಲ್ಲಿ ರೇಣುಕಾ ವಿದ್ಯಾಸಂಸ್ಥೆ ಎಂದಿದೆ. ನಾನು ಒಂದು ಸಲ ಅಲ್ಲಿಗೆ ಹೋಗಿ ಬಂದೆ ಅಲ್ಲಿ ಒಬ್ಬರು ಶ್ರೀಮತಿ ಸೀತಾಲಕ್ಷ್ಮಿ ಎಂದು ಇದ್ದಾರೆ. ಅವರು Head Mistress-cum-Superintendent-cum-President. ಆಕೆ ಬಹಳ ಪ್ರಭಾವೀ ವ್ಯಕ್ತಿ. ಆಕೆ ಎದುರು ಮಾತನಾಡುವ ಧೈರ್ಯ ಯಾರಿಗೂ ಇಲ್ಲ. ಆಕೆ ಮೇಲೆ ಬೋಗಸ್ ಉಪಾಧ್ಯಾಯರನ್ನು ನೇಮಿಸಿಕೊಂಡು ಲೂಟಿ ಹೊಡೆದಿದ್ದಾರೆ ಎಂದು ಪೋಲೀಸ್ ಕೇಸ್ ರಿಜಿಸ್ಟರ್ ಆಗಿದೆ. ಆದಕ್ಕೆ ಆಕೆಗೆ ಸಿಕ್ಕಿರುವ ಬಹುಮಾನ ಏನೆಂದರೆ ಪ್ಯಾಲೇಸ್ ಗುಟ್ಟಹಳ್ಳಿ ಮತ್ತು ಮಲ್ಲೇಶ್ವರದಲ್ಲಿ ಎರಡು ಶಾಲೆಗಳನ್ನು ತೆರೆಯುವುದಕ್ಕೆ ಈ ವರ್ಷ ಶಿಕ್ಷಣ ಇಲಾಖೆಯವರು ಅವಕಾಶ ಕೊಟ್ಟಿದ್ದಾರೆ. ಅದು ಪ್ರೈಮರಿ ಶಾಲೆಯೋ ನರ್ಸರಿ ಶಾಲೆಯೋ ಸರಿಯಾಗಿ ಗೊತ್ತಿಲ್ಲ. ಅಂತೂ ಅನುಮತಿ ಕೊಟ್ಟಿದ್ದಾರೆ.

SRI G. B. SHANKARA RAO.—I do not know about Primary Schools. I will get it examined.

ಶ್ರೀ ಬಿ. ವಿ. ಕಕ್ಕಿಲಾಯ.— ನನಗೆ ಗೊತ್ತಿಲ್ಲ ಎಂದರೇನು? ಪ್ರೈಮರಿ ಶಾಲೆಗೆ ಬೇರೆ ಮಂತ್ರಿ ಇದ್ದಾರೆಯೇ? I expect the Eduction Minister to know all of them. Otherwise, what is the function of the Education Minister? He cannot plead his inablity on these things.

SRI G. B. SHANKARA RAO.— The Hon. Member is revealing the facts. I do not say it is wrong.

ಶ್ರೀ ಬಿ. ವಿ. ಕಕ್ಕಿಲಾಯ.— ವಿದ್ಯಾಮಂತ್ರಿಗಳಾದ ಮೇಲೆ ಎಲ್ಲಾ ತಿಳಿದುಕೊಳ್ಳಬೇಕು.

ಶ್ರೀ ಜಿ. ಬಿ. ಶಂಕರ್‌ರಾವ್.— ನಾನು ಅವರು ಹೇಳುವುದು ತಪ್ಪು ಎಂದು ಹೇಳಲಿಲ್ಲ.

ಶ್ರೀ ಮಳ್ಳೂರು ಆನಂದರಾವ್.— ಒಂದು ಸಮಸ್ಯೆ ಏನಿದೆಯೆಂದರೆ ಇದೆಲ್ಲಾ ನಿಮ್ಮ ತನಕ ಬರುತ್ತಾ ಇಲ್ಲ. ಕೆಳಮಟ್ಟದಲ್ಲೇ ಈ ವ್ಯವಸ್ಥೆಗೆ ಅನುಕೂಲಗಳಿದ್ದು ಅವರೇ ಎಲ್ಲಾ ಮಾಡಿಕೊಂಡು ಬಿಡುತ್ತಾರೆ. ಅಂಥ ಪರ್‌ಫೆಕ್ಟ್ ವ್ಯವಸ್ಥೆ ನಿಮ್ಮ ಇಲಾಖೆಯಲ್ಲಿದೆ. ೧೯೭೫—೭೬ರಿಂದ ನಿಲ್ಲಿಸಿದ್ದ ಗ್ರಾಂಟ್ ೫೫ ಸಾವಿರ ರೂಪಾಯಿಯನ್ನು ರೆಟ್ರಾಸ್ಪೆಕ್ಟಿವ್ ಎಫೆಕ್ಟ್‌ನಿಂದ ಮಂಜೂರುಮಾಡಿಸಿಕೊಂಡು ಈ ವರ್ಷ ತೆಗೆದುಕೊಂಡಿದ್ದಾರೆ. ಇದೆಲ್ಲಾ ಮಾಮೂಲಾಗಿ ನಡೆಯುತ್ತೇವೆ.

ಶ್ರೀ ಅಜೀಜ್ ಸೇಟ್.—ದೊಡ್ಡ ದೊಡ್ಡ ಸಂಸ್ಥೆಗಳನ್ನು ನಡೆಸುವರು ಮಾತ್ರ ಮಂತ್ರಿಗಳ ಹತ್ತಿರ ಬರುತ್ತಾರೆ. ಸಣ್ಣ ಪುಟ್ಟವರೆಲ್ಲಾ ಅಲ್ಲೇ ಮಾಡಿಕೊಂಡುಬಿಡುತ್ತಾರೆ.

ಶ್ರೀ ಮಳ್ಳೂರು ಆನಂದರಾವ್.— ಅವರು ಹೇಗೆ ಲೂಟಿ ಹೊಡೆಯುತ್ತಾರೆ ಎಂಬುದು ಬಹಳ ಮುಖ್ಯವಾದ ವಿಷಯ. ನೋಡುವುದಕ್ಕೆ ಬಹಳ ಇಂಟರೆಸ್ಟಾಗಿರುತ್ತದೆ. ಆಕೆ ೬ ಸೆಕ್ಷನ್ ಇರತಕ್ಕ ಕನ್ನಡ ಮೀಡಿಯಂ ಶಾಲೆಯನ್ನು ನಡೆಸುತ್ತಾಳೆ. ಅದರ ಜೊತೆಗೆ ನಿಮ್ಮ ಇಲಾಖೆಯವರು ಈಗ ೬ ಸೆಕ್ಷನ್ ಇಂಗ್ಲಿಷ್ ಮೀಡಿಯಂ ಸ್ಕೂಲ್ ನಡೆಸುವುದಕ್ಕೆ ಅನುಮತಿ ಕೊಟ್ಟಿದ್ದಾರೆ. ೬ ಸೆಕ್ಷನ್ ಇಂಗ್ಲೀಷ್ ಮೀಡಿಯಂ ಎಂದರೆ ನಿಜವಾಗಿ ನಡೆಸುವುದಿಲ್ಲ. ಸುಮ್ಮನೆ ಬೋಗಸ್ ಅದೇ ಕನ್ನಡ ಮೀಡಿಯಂ ವಿದ್ಯಾರ್ಥಿಗಳೇ. ರಿಜಿಸ್ಟರ್ ಬೇರೆ ಇಟ್ಟಿರುತ್ತಾರೆ ಅಷ್ಟೆ. ಅದೇ ವಿದ್ಯಾರ್ಥಿಗಳನ್ನು ಇಲ್ಲೂ ತೋರಿಸುತ್ತಾರೆ ಇದಕ್ಕೆ ನಿಮ್ಮ ಇಲಾಖೆಯಿಂದ ಸ್ಯಾಂಕ್ಷನ್ ಕೊಟ್ಟು ಗ್ರಾಂಟೂ ಕೊಟ್ಟುಬಿಟ್ಟಿದ್ದಾರೆ. ಅಮೇಲೆ ಇನ್ನೊಂದು ಕಮಲಾ ನೆಹರೂ ಮಕ್ಕಳ ಮಂದಿರ ಎಂಬ ಒಂದು ಸಂಸ್ಥೆ ಇದೆ. ಬಸವನಗುಡಿಯಲ್ಲಿರುವ ಈ ಸಂಸ್ಥೆಯ ಬಗ್ಗೆ ೬ ವರ್ಷದಿಂದ ಹೇಳುತ್ತಿದ್ದೇನೆ, ಅದರೂ ಏನೂ ಪ್ರಯೋಜನವಾಗಲಿಲ್ಲ. ಆದ್ದರಿಂದ ಮತ್ತೆ ಅವರ ವಿಷಯ ಎಲ್ಲಾ ಹೇಳುವುದಿಲ್ಲ. ಅಲ್ಲಿ ಟಿ. ಸಿ. ಹೆಚ್. ಗೆ ಎಷ್ಟು ಜನ ವಿದ್ಯಾರ್ಥಿಗಳಿಗೆ ಅವಕಾಶ ಕೊಟ್ಟಿದ್ದಾರೆ ಎಂಬುದನ್ನು ಇಲಾಖೆಯವರನ್ನು ಕೇಳಿ. ಒಬ್ಬೊಬ್ಬ ವಿದ್ಯಾರ್ಥಿಯಿಂದ ೫ ರಿಂದ ೬ ಸಾವಿರ ರೂಪಾಯಿಯವರೆಗೂ ಸಂಪಾದನೆ ಮಾಡಿಕೊಂಡಿದ್ದಾರೆ. ಇಲಾಖಾ ಅನುಮತಿ ಇಲ್ಲದೆ ವ್ಯವಹಾರಗಳು ನಡೆಯುತ್ತಿವೆ. ನಿಮ್ಮ ಇಲಾಖೆಯವರೇ ಎಲ್ಲಾ ಪ್ಲಾನ್ ಹಾಕಿಕೊಡುತ್ತಾರೆ. ಕೋರ್ಟಿಗೆ ಹೋಗಬೇಕಾದರೂ ಯಾರು ಡ್ರಾಫ್ಟ್ ಹಾಕಿಕೊಡುತ್ತಾರೆ ಎಂಬುದು ನನಗೆ ಗೊತ್ತು. ನಿಮ್ಮ ವಿದ್ಯಾ ಇಲಾಖೆಯವರೇ ರಿಟ್ ಹಾಕಿ ಎಂದು ಹೇಳಿಕೊಟ್ಟು ಡ್ರಾಫ್ಟ್ ಕೂಡ ಹಾಕಿ ಕೊಡುತ್ತಾರೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

೧. ಪಿ. ಎಂ.

ವಿದ್ಯಾರ್ಥಿಗಳ ದೃಷ್ಟಿಯಿಂದ ನ್ಯಾಯಾಲಯದವರು ತಡೆ ಆಜ್ಞೆ ಕೊಡುತ್ತಾರೆ. ಇಲಾಖೆಯವರು ಸಂಬಂಧಪಟ್ಟ ಫೈಲುಗಳನ್ನು ತಡೆಹಿಡಿದುಬಿಡುತ್ತಾರೆ. ಇದೆಲ್ಲಾ ನಡೆಯುತ್ತಿದೆ. ಇದರ ಬಗ್ಗೆ ತಾವು ತನಿಖೆ ಮಾಡಬೇಕು. ನಾನು ಹೇಳಿದ್ದು ಒಂದು ವೇಳೆ ಸುಳ್ಳಾಗಿಬಿಟ್ಟರೆ ನಾನು ರಾಜೀನಾಮೆ ಕೊಡುತ್ತೇನೆ ಅಪಾದನೆಗಳನ್ನು ಬೇಜವಾಬ್ದಾರಿಯಿಂದ ನಾನು ಮಾಡುವುದಿಲ್ಲ ಅಂಕಿ—ಅಂಶಗಳ ಆಧಾರದ ಮೇಲೆ ಮಾಡುತ್ತೇನೆ. ಮಾನ್ಯ ಸಚಿವರು ದಯವಿಟ್ಟು ತನಿಖೆ ಮಾಡಿಸಬೇಕು. ಕಮಲಾ ನೆಹರೂ ಮಕ್ಕಳ ಮಂದಿರದ ವಿಷಯವನ್ನು ನಾನು ಉದಾಹರಣೆಯಾಗಿ ಹೇಳುತ್ತಿದ್ದೇನೆ.

ಶ್ರೀ ಜಿ. ಬಿ. ಶಂಕರರಾವ್ .— ಸದ್ಯ ನನ್ನ ಹೆಸರನ್ನು ಹೇಳಲಿಲ್ಲ!

ಶ್ರೀ ಮಳ್ಳೂರು ಆನಂದರಾವ್ .— ಬರುತ್ತದೆ; ನಿಮ್ಮ ಹೆಸರನ್ನೂ ಹೇಳುತ್ತೇನೆ; ಡಬಲ್ ರೋಡ್‌ನಲ್ಲಿ ವಿವೇಕಾನಂದ ಸ್ಕೂಲ್ ಇದೆ. ಇದರ ವ್ಯವಹಾರವನ್ನು ಈ ಮನೆಯ ಸದಸ್ಯರ ತಂಡವೊಂದು ಹೋಗಿ ನೋಡಬೇಕು ಅಲ್ಲಿನ ಕೌಂಟರ್‌ನಲ್ಲಿ ದುಡ್ಡು ಸುರಿಯುತ್ತದೆ. ಪ್ರತಿದಿವಸ ಅಲ್ಲಿ ಸಾವಿರಾರು ರೂಪಾಯಿ ಸಂಗ್ರಹವಾಗುತ್ತಿದೆ. ಈ ಶಾಲೆಗೆ ೧೯೬೩ ರಿಂದ ೧೯೬೯ರ ವರೆಗೆ, ಅಂದರೆ, ಆರು ವರ್ಷಗಳಿಗೆ ರೆಟ್ರಾಸ್ಪೆಕ್ಟೀವ್ ಆಗಿ ಗ್ರ್ಯಾಂಟ್ ಮಂಜೂರು ಮಾಡಿ ಹಣ ಕೊಡಲಾಗಿದೆ. ಆ ಹಣವನ್ನು ಎಲ್ಲಿ ಇಡಬೇಕೆಂದು ತೋಚದೆ ಅವರೊಂದು ಸಿನಿಮಾ ತೆಗೆದರು. ವಿದೇಶಕ್ಕೆ ಹೋಗಿ ಬಂದರು. ಇಷ್ಟೆಲ್ಲಾ ಆದರೂ ಅವರ ಬಳಿ ಇನ್ನೂ ಹಣವಿದೆ. ಅವರ ಮನೆಯ ಮೇಲೆ ದಾಳಿ ನಡೆಸಿದರೆ ಅವರ ಬಳಿ ಎಷ್ಟು ಹಣವಿದೆ ಎಂಬುದು ಗೊತ್ತಾಗುತ್ತದೆ. ಆತನ ಹೆಂಡತಿ ಆ ಶಾಲೆಗೆ ಹೆಡ್ ಮಿಸ್ಟ್ರೆಸ್. ಅಲ್ಲಿರುವವರು ಬರೀ ಮುಸ್ಲಿಂ ಹೆಂಗಸರು. ಅವರನ್ನು ಬೇರೆಯವರ ಹತ್ತಿರ ಮಾತನಾಡುವುದಕ್ಕೆ ಬಿಡುವುದಿಲ್ಲ.

ಅಧ್ಯಕ್ಷರು .— ತಾವು ಇನ್ನೂ ಎಷ್ಟು ಹೊತ್ತು ಮಾತನಾಡುತ್ತೀರಿ?

ಶ್ರೀ ಎಂ. ಸಿ. ನಾನಯ್ಯ .— ಮಾನ್ಯ ಸದಸ್ಯರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರಿಗೆ ಕಾಲಾವಕಾಶವನ್ನು ಕೊಡಬೇಕು.

ಅಧ್ಯಕ್ಷರು .— ಈಗ ಚರ್ಚೆ ಮುಗಿಯಬೇಕು.

ಶ್ರೀ ಎಂ. ಸಿ. ನಾನಯ್ಯ .—ಮಧ್ಯಾಹ್ನ ಸೇರೋಣ.

ಅಧ್ಯಕ್ಷರು .— ಈಗ ೧—೩೦ ಗಂಟೆಗೆ ಮುಗಿಸಿ ಮಧ್ಯಾಹ್ನ ೩—೦೦ ಗಂಟೆಗೆ ಸೇರೋಣ. ಈಗ ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮುಂದುವರಿಸಿ. ಆದಷ್ಟು ಬೇಗ ಮುಗಿಸಬೇಕು.

ಶ್ರೀ ಮಳ್ಳೂರು ಆನಂದರಾವ್ .— ಹೇಳಬೇಕಾದ್ದು ಬಹಳಷ್ಟಿದೆ. ಆದರೆ ಸಮಯವಿಲ್ಲ. ಆದುದರಿಂದ, ಮಾನ್ಯ ಸಚಿವರು ನಾನು ಹೇಳುವುದನ್ನೆಲ್ಲ ಬರೆದುಕೊಂಡು ತನಿಖೆ ಮಾಡಿಸಬೇಕೆಂದು ಹೇಳುತ್ತೇನೆ. ವಿವೇಕಾನಂದ ಶಾಲೆಗೆ ಸರ್ಕಾರದವರು ಸುಮಾರು ೨—೩ ಲಕ್ಷ ರೂಪಾಯಿಗಳನ್ನು ಕೊಟ್ಟಿರಬಹುದು. ಆ ಶಾಲೆಯಲ್ಲಿ ಕೇವಲ ಖಾಸಗಿಯವರಿಂದ ಪಡೆದುಕೊಳ್ಳುವ ಹಣಕ್ಕೆ ಲೆಕ್ಕಾ ಜಮಾ ಏನೂ ಇಲ್ಲ. ಅವರ ಬಳಿ ಲಕ್ಷಾಂತರ ರೂಪಾಯಿಗಳಿವೆ, ಅವರ ಮನೆ ಮೇಲೆ ದಾಳಿ ಮಾಡಿದರೆ ಗೊತ್ತಾಗುತ್ತದೆ. ಇನ್ನು, ಉಮಾ ಎಜುಕೇಷನ್ ಸೊಸೈಟಿ, ಮಾಗಡಿ ರಸ್ತೆ, ಬ್ಯಾಟರಾಯನಪುರ. ಮುಚ್ಚಿದ್ದ ಈ ಶಾಲೆಗೆ ಒಂದು ಲಕ್ಷ ರೂಪಾಯಿಗಳ ಗ್ರ್ಯಾಂಟ್ ಕೊಟ್ಟಿದ್ದಾರೆ. ಓಂ ವಿದ್ಯಾ ಗಣಪತಿ ವಿದ್ಯಾ ಮಂದಿರ, ಮಾಗಡಿ ರಸ್ತೆ, ಕೆಂಪಾಪುರ ಅಗ್ರಹಾರ. ಇದರ ಕಥೆ ಎಲ್ಲವನ್ನು ಹೇಳುವುದಿಲ್ಲ. ೧೯೬೦ ರಿಂದ ೧೯೬೯ರ ವರೆಗೆ, ಅಂದರೆ, ೯ ವರ್ಷಗಳ ಗ್ರ್ಯಾಂಟನ್ನು ಈ ಶಾಲೆಗೆ ಕೊಟ್ಟಿದ್ದಾರೆ. ಅಲ್ಲಿ ಶಾಲೆಯೇ ಇಲ್ಲ. ಎಲ್ಲಾ ರೆಕಾರ್ಡ್‌ಗಳನ್ನೂ ಸೃಷ್ಟಿಮಾಡಲಾಗಿದೆ. ಇದಕ್ಕೆ ರಾಜಕೀಯ ವ್ಯಕ್ತಿಗಳ ಸಂಪೂರ್ಣ ಬೆಂಬಲವಿದೆ. ಇನ್ನು, ಕೆಂಪೇಗೌಡ ವಿದ್ಯಾ ಮಂದಿರ. ಕನ್ನಡ ಚಳವಳಿ ನಾಯಕರೊಬ್ಬರು ಇದನ್ನು ನಡೆಸುತ್ತಿದ್ದಾರೆ. ಇದರ ಕರುಣ ಕಥೆಯನ್ನು ಹೇಳುವುದಕ್ಕೆ ಈಗ ಸಮಯವಿಲ್ಲ. ಈ ಶಾಲೆಯ ಅಧ್ಯಕ್ಷರು ಕನ್ನಡ ಚಳುವಳಿಯ ಅಗ್ರನಾಯಕರು! ಒಬ್ಬ ಹರಿಜನ ನೌಕರಳೊಬ್ಬಳನ್ನು ಬಡಿದು ಬಾಯಲ್ಲಿ ಹಾಕಿಗೊಂಡು ದುಡ್ಡು ತಿಂದು ಹಾಕಿದ್ದಾರೆ. ಕೆಲಸ ಕೊಡುವುದಾಗಿ ಹೇಳಿ ಆ ಹೆಣ್ಣು ಮಗಳಿಂದ ದುಡ್ಡು ತಿಂದಿದ್ದಾರೆ. ಆ ಹೆಣ್ಣುಮಗಳು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿ ಹೀನಾವಸ್ಥೆಯಲ್ಲಿರ ಬೇಕಾದರೆ

ಆಕೆಗೆ ಸಂಬಳ ಕೊಡದೆ, ಆಕೆಯ ಮನೆಗೆ ಹೋಗಿ ಚೂರಿ ತೋರಿಸಿ ಹೆದರಿಸಿ ಅಕ್ವಿಟೆನ್ಸ್ ರಿಜಿಸ್ಟರ್‌ಗೆ ರುಜು ಹಾಕಿಸಿಕೊಂಡು ಬಂದು, ೨ ೩ ವರ್ಷಗಳ ಗ್ರಾಂಟನ್ನು ಲೂಟಿ ಹೊಡೆದು ಬಿಟ್ಟಿದ್ದಾರೆ. ಕನ್ನಡ ಚಳುವಳಿಗೆ ಜೈ! ಉಪಾಧ್ಯಾಯಿನಿಯರ ಹೆಸರು ಪಾರ್ವತಮ್ಮ, ಲಲಿತಮ್ಮ ಎಂದು. ಮತ್ತೊಬ್ಬಳು ಕ್ರಿಶ್ಚಿಯನ್ ಮತಕ್ಕೆ ಸೇರಿದವಳು. ಆ ಪರಿಜನ ಮಹಿಳೆ ಹೆಸರು ಪುಟ್ಟ ಮಾದಮ್ಮ. ಬೇಕಾದರೆ ಆಕೆಯನ್ನು ತಮ್ಮ ಕಛೇರಿ ಮುಂದೆ ನಿಲ್ಲಿಸುತ್ತೇನೆ ಆಕೆಯ ಕಥೆ ಕೇಳಿ. ಇದರಲ್ಲಿ ಇಬ್ಬರು ಎ.ಇ.ಓ. ಗಳು ಶಾಮಿಲಾಗಿದ್ದಾರೆ ಒಬ್ಬರ ಹೆಸರು: ಲಕ್ಷ್ಮಿ ನಾರಾಯಣ ಸಿಂಹ: ಇನ್ನೊಬ್ಬರ ಹೆಸರು: ದೇವೀಸಿಂಗ್ ಈ ಮಾನ್ಯ ಧವ ೯ಸಿಂಗ್ ಅವರ ಸಂಬಂಧಿಕನೆಂದು ಹೇಳಿಕೊಳ್ಳುತ್ತಾನೆ! ಹಾಗೆ ಹೇಳಿಕೊಂಡು ಆತ ಲೂಟಿ ಹೊಡೆದದ್ದೂ ಹೊಡೆದದ್ದೆ. ಅವರು ಇಂಥ ಪಾಪ ಕಾರ್ಯದಲ್ಲಿ ನಮ್ಮನ್ನು ನಿಮ್ಮನ್ನು ಉಪಯೋಗಿಸಿ ಕೊಳ್ಳಲು ಪ್ರಯತ್ನ ಮಾಡುತ್ತಾರೆ. ನನ್ನನ್ನೂ ಉಪಯೋಗಿಸಿ ಕೊಳ್ಳುವುದಕ್ಕೆ ಪ್ರಯತ್ನ ಮಾಡಿದರು ಆದರೆ, ಅದು ಸಾಧ್ಯವಾಗಲಿಲ್ಲ. ಮಾನ್ಯ ಸಚಿವರೇ ಅಧ್ಯಕ್ಷರಾಗಿರುವ ಒಂದು ಶಾಲೆ ಇದೆ.

ಶ್ರೀ ಜಿ. ಬಿ. ಶಂಕರರಾವ್ .— ಎಲ್ಲಿ?

ಶ್ರೀ ಮಳ್ಳೂರು ಆನಂದರಾವ್ .— ನನ್ನಲ್ಲಿರುವ ಮಾಹಿತಿ ಆಧಾರದ ಮೇಲೆ ಹೇಳುತ್ತಿದ್ದೇನೆ. ಆಪಾದನೆ ಮಾಡುತ್ತಿಲ್ಲ. ಅವರು ಅನೇಕ ವರ್ಷಗಳಿಂದ ಈ ಸಂಸ್ಥೆಗೆ ಅಧ್ಯಕ್ಷರಾಗಿದ್ದರು.

ಶ್ರೀ ಜಿ. ಬಿ. ಶಂಕರರಾವ್ .— ನನ್ನ ಜೀವಮಾನದಲ್ಲಿ ನಾನು ಯಾವ ಸಂಸ್ಥೆಗೂ ಅಧ್ಯಕ್ಷನಾಗಿಲ್ಲ, ಯಾವ ಸಂಸ್ಥೆಗೂ ಸದಸ್ಯನಾಗಿಲ್ಲ. ಯಾವ ಸಹಕಾರ ಸಂಘದಲ್ಲೂ ಸದಸ್ಯನಾಗಿಲ್ಲ ಅಧ್ಯಕ್ಷನೂ ಆಗಿಲ್ಲ. ಮಾನ್ಯ ಸದಸ್ಯರು ಹೊಸದಾಗಿ ಹೇಳುತ್ತಿದ್ದಾರೆ. ಇದಕ್ಕೆ ನಾನೇನು ಮಾಡಲಿ?

ಶ್ರೀ ಮಳ್ಳೂರು ಆನಂದರಾವ್ .— Subject to correction ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು .— ಆಪಾದನೆ ಮಾಡಿದ ಮೇಲೆ ಉತ್ತರ ಕೊಟ್ಟರಾಯಿತು.

ಶ್ರೀ ಜಿ. ಬಿ. ಶಂಕರರಾವ್ .— ಮಾನ್ಯ ಸದಸ್ಯರು ನನ್ನ ಮೇಲೆ ಮಾಡುವ ಆಪಾದನೆ ದಾಖಲಾಗುತ್ತದೆ. ನಾನು ಸವಾಲು ಹಾಕಿ ಹೇಳುತ್ತೇನೆ: ಕರ್ನಾಟಕ ರಾಜ್ಯದಲ್ಲಿನ ಯಾವುದೇ ಸಂಸ್ಥೆಯಲ್ಲಿ ನಾನು ಸದಸ್ಯನಾಗಿಲ್ಲ, ಅಧ್ಯಕ್ಷನಾಗಿಯೂ ಇಲ್ಲ.

ಶ್ರೀ ಮಳ್ಳೂರು ಆನಂದರಾವ್ .— ಮಾನ್ಯ ಸಚಿವರ ಮಾತನ್ನು ನಾನು ನಂಬುತ್ತೇನೆ. ನಾನು ಅವರ ಮೇಲೆ ಆಪಾದನೆ ಮಾಡುವುದಿಲ್ಲ. ವೆರಿಫೈ ಮಾಡದೆ ನಾನು ಎಂದಿಗೂ ಏನನ್ನೂ ಹೇಳುವುದಿಲ್ಲ. ಇದನ್ನು ನಾನು ವೆರಿಫೈ ಮಾಡುತ್ತೇನೆ. ಹಾಗಿಲ್ಲದಿದ್ದರೆ ಚಿಂತೆ ಇಲ್ಲ. ಇಲ್ಲದಿದ್ದರೆ ಪ್ರಿವಿಲೇಜ್ ಆಗುತ್ತದೆ. ಮುಂದೆ ನೋಡೋಣ.

ಶ್ರೀ ಜಿ. ಬಿ. ಶಂಕರರಾವ್ .—ಮುಂದೆ ತಾವು ಪಶ್ಚಾತ್ತಾಪ ಪಡಬೇಕಾಗುತ್ತದೆ.

ಶ್ರೀ ಮಳ್ಳೂರು ಆನಂದರಾವ್ .— ಆಪಾದನೆ ಮಾಡಿದರಲ್ಲವೆ ಪಶ್ಚಾತ್ತಾಪ ಪಡಬೇಕಾಗುವುದು?

ಅಧ್ಯಕ್ಷರು .—ಗೊಂದಲ ಬೇಡ. ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮುಂದುವರಿಸಬಹುದು.

ಶ್ರೀ ಮಳ್ಳೂರು ಆನಂದರಾವ್ .— ಇಂದಿರಾ ನಗರದಲ್ಲಿ New Horizon School ಎಂದು ಇದೆ ಇದರ ಮೇಲೆ ಸುಮಾರು ಒಂದೂ ವರೆ ಲಕ್ಷ ರೂಪಾಯಿಗಳ ಅಪವ್ಯಯದ ಮೊಕದ್ದಮೆ ಇದೆ.

ಶ್ರೀ ಜಿ.ಬಿ. ಶಂಕರರಾವ್ .—ತಾವು ಹೇಳುತ್ತಿರುವ ಶಾಲೆ ಅನುದಾನ ಪಡೆಯುತ್ತಿರುವ ಶಾಲೆಯೆ? ಹಾಗಿದ್ದರೆ, ಅದರಲ್ಲಿ ಯಾರು ಯಾರು ಶಾಮೀಲು ಆಗಿದ್ದಾರೆ ಎನ್ನುವುದೆಲ್ಲವನ್ನೂ ಮಾನ್ಯ ಸದಸ್ಯರು ಹೇಳಬೇಕು.

ಶ್ರೀ ಮಳ್ಳೂರು ಆನಂದರಾವ್ .— ಮಾನ್ಯ ಸಚಿವರು ಏತಕ್ಕೆ ಇಷ್ಟು ಸೆನ್ಸಿಟೀವ್ ಆಗುತ್ತಿದ್ದಾರೋ ನನಗೆ ಗೊತ್ತಾಗುತ್ತಿಲ್ಲ. ಬೇರೆ ಶಾಲೆಗಳ ಬಗ್ಗೆ ನಾನು ಹೇಳುತ್ತಿದ್ದಾಗ ಮಾನ್ಯ ಸಚಿವರು ಆನಂದವಾಗಿ ಎಲ್ಲವನ್ನೂ ಬರೆದುಕೊಳ್ಳುತ್ತಿದ್ದವರು ಈ ಶಾಲೆಯ ಹೆಸರನ್ನು ಹೇಳಿದಾಕ್ಷಣ ಏತಕ್ಕೆ ಸೆನ್ಸಿಟೀವ್ ಆಗುತ್ತಿದ್ದಾರೆ? I am making a charge that the managemant is collecting Rs. 100 from every student. It is a recognised school.

SRI RAMESH KUMAR.—The Hon. Minister for Education has refuted the allegation. Sri Mallur Anand Rao has made a specific alle-

gation. When the Hon. Minister hears the name of a particular institution, he becomes sensitive. It forces us to doubt something else. He has refuted the allegations. He says he has never been a President or a member of any institution. Then why should he get this kind of emotion ?

ಶ್ರೀ ಮಳ್ಳೂರ್ ಆನಂದರಾವ್.—ಸ್ವಾಮಿ, ಕಂಪ್ಲೀಟ್ ಇದ್ದಂತ ಸ್ಕೂಲಿಗೆ ಒಂದು ಲಕ್ಷ ರೂಪಾಯಿ ಪ್ರೊವೈಡ್ ಮಾಡಿದ್ದೀರಿ. ಇದು ನಿಜವಲ್ಲವೇ ? ಇಂದಿರಾ ನಗರದಲ್ಲಿ 200 300 ಸೈಟುಗಳನ್ನು ಕೊಟ್ಟಿರುವುದು ನಿಜವಲ್ಲವೆ? ಶಂಕರ್‌ರಾವ್ ಸಂಬಂಧಿಸಿದ್ದು ಅಂತ ನಾನು ಹೇಳಲಿಲ್ಲ. ನನಗೂ ಸೋರ್ಸ್ಸ್ ಇದೆ, ಪರಿಶೀಲನೆ ಮಾಡುತ್ತೇನೆ.

SRI M. C. NANAIAH.—Does the Minister know that atleast such an institution exists in Indranagar or not ? Let him say 'Yes' or 'No'.

ಶ್ರೀ ಜಿ. ಬಿ. ಶಂಕರ್‌ರಾವ್.—ನನಗೆ ಸ್ಕೂಲ್ ಗೊತ್ತಿದೆ, ನನ್ನ ಸ್ನೇಹಿತರೊಬ್ಬರು ನಡೆಸುತ್ತಿದ್ದಾರೆ. ಮಾನ್ಯ ಬದರೀನಾರಾಯಣ್‌ರವರು ಮಂತ್ರಿಗಳಾಗಿದ್ದಾಗ ರೆಕಗ್ನಿಷನ್ ಕೊಡಿಸಿದ್ದೆ. ಒಂದು ಸಮಾರಂಭಕ್ಕೆ ಕೆಲವು ಮಂತ್ರಿಗಳೂ ಹೋಗಿದ್ದರೂ. ನನ್ನನ್ನೂ ಕರೆದಿದ್ದರು ನಾನೂ ಹೋಗಿದ್ದೆ.

ಶ್ರೀ ಮಳ್ಳೂರು ಆನಂದರಾವ್.—ಫ್ರಾಡ್ ನಡೆದಿರತಕ್ಕ ಸ್ಕೂಲಿಗೆ ಹೇಗೆ ರೆಕಗ್ನೈಸ್ ಕೊಟ್ಟರು ?

ಅಧ್ಯಕ್ಷರು.—ಅವರು ಯೀಲ್ಡ್ ಆಗಿಲ್ಲ, ನೀವು ಏತಕ್ಕೆ ಮಾತನಾಡುತ್ತೀರಿ ?

ಶ್ರೀ ಕೆ. ಬಿ. ಶಿವಯ್ಯ.—ಸ್ವಾಮಿ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ನೋಟ್ ಮಾಡಿ ಕೊಂಡು ಹೇಳಲಿ. ಮಾನ್ಯ ಸದಸ್ಯರು ಫ್ರಾಡ್ ಅಂತ ಹೇಳುತ್ತಾರೆ. ಅನುದಾನ ಪಡೆದು ದುರುಪಯೋಗ ಮಾಡಿದರೆ ಫ್ರಾಡ್ ಆಗುತ್ತೆ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ಈ ಸದನದಲ್ಲಿ ಯಾರೇ ಸದಸ್ಯರಾಗಿರಲೀ ಸದಸ್ಯರಮೇಲಾಗಲೀ, ಮಂತ್ರಿಗಳ ಮೇಲಾಗಲೀ ಅಥವಾ ಯಾರ ಮೇಲೆ ಆಗಲೀ ಆಪಾದನೆಗಳನ್ನು ಮಾಡಬೇಕಾದರೆ ಸತ್ಯಾಸತ್ಯತೆಯನ್ನು ನೋಡಿ ಮಾಡಬೇಕು. ನಂಬುವುದಕ್ಕೆ ಆಗದ ರೀತಿಯಲ್ಲಿ ಆಪಾದನೆ ಮಾಡುವುದು ಸರಿಯಲ್ಲ. ಮಾನ್ಯ ಮಂತ್ರಿಗಳು ನನಗೆ ಮೊದಲೇ ಸಂಬಂಧ ಇಲ್ಲವೆಂದು ಹೇಳಿದ್ದಾರೆ.

He is entitled to make any charges if he is in possession of facts and figures. But what he should, do under the Rules ? He should make out a case well in advance and submit it to the Speaker so that he could pass it on to the member or Minister concerned. Thus the allegations should be procedurally dealt with. Instead, there is no sense in the Minister's becoming sensitive. The whole matter is seized by the House. We cannot hear the things that are going on here. I would submit to the Chair that it may not be proper to allow people to make allegations. They can make and they are entitled, provided they are in possession of all the facts, materials and that too, they should place them before the Speaker well in advance. Otherwise, there is no point in allowing a member to charge against another member.

SRI M. C. NANAIAH.—When a member makes a personal allegation against another member of the House in his capacity as the Legis-

lator, or if I am making a charge against any member in the capacity as the legislator or in the capacity as a Minister, it is in order that I should pass it on to you. Here, Sri Mallur Ananda Rao has made an allegation against the institution. Is it an allegation in the capacity of the legislator or in the capacity of a Minister ? I think Sri K. H. Ranganath should understand this. I am sorry Sir. The Speaker should not curtail the rights of the members particularly while speaking on the demands. That should be made clear.

SRI K. H. RANGANATH.—I want a ruling also. I raise a point of order. The hon. member did make an allegation that the Education Minister according to his information was the President of the particular institution. That was the allegation. Immediately the Minister said, he had never become President of any institution. That was the answer.

SRI MALLUR ANANDA RAO.—I am not making any allegations. I have only said ಮಾನ್ಯ ರಂಗನಾಥ್‌ರವರು ನಾನು ಹೇಳಿದ್ದನ್ನು ಅರ್ಥಮಾಡಿಕೊಂಡಿಲ್ಲ, ಶಂಕರ್‌ರಾವ್ ಅವರಿಗೆ ಸಂಬಂಧ ಇಲ್ಲವೆಂದು ಹೇಳಿದ್ದೇನೆ. ನಿಮ್ಮ ಮೇಲೆ ಆಪಾದನೆ ಮಾಡಲಿಕ್ಕೆ ನಾನು ಹೋಗುವುದಿಲ್ಲ. ಇಂಥ ಸ್ಕೂಲಿಗೆ ೨೦೦-೩೦೦ ಸೈಟನ್ನು ಹೇಗೆ ಮಂಜೂರು ಮಾಡಿದಿರಿ ? ನಮ್ಮನ್ನು ನಿಮ್ಮನ್ನು ಎಲ್ಲರನ್ನೂ ಉಪಯೋಗಿಸಿಕೊಳ್ಳುವಂಥ ಕೆಲವು ಸಂಸ್ಥೆಗಳಿವೆ. ಇಂಥ ಖದೀಮರು ಇದ್ದಾರೆ. ಮಾನ್ಯ ವಿದ್ಯಾಮಂತ್ರಿಗಳು ೧೮-೭ ೧೯೮೦ ರಂದು ವುಡ್‌ಲ್ಯಾಂಡ್ ಹೋಟೆಲಿನಲ್ಲಿ ನಡೆದಂಥ ಒಂದು ಸಮಾರಂಭಕ್ಕೆ ಹೋಗಿದ್ದಾರೆ, ಆ ಸಮಾರಂಭ ಏರ್ಪಡಿಸಿದ್ದವರು ಖಾಸಗೀ ಶಾಲೆಗಳ ಮಾಲೀಕರು. ಹಿಂದೆ ಈ ರೀತಿ ಸಮಾರಂಭಕ್ಕೆ ಮಲ್ಲಿಕಾರ್ಜುನ ಸ್ವಾಮಿಯವರನ್ನು ಕರೆದಾಗ ಅವರು ಛೀಮಾರಿ ಹಾಕಿ ಕಳುಹಿಸಿದರು. ಸುಬ್ಬಯ್ಯಶೆಟ್ಟರನ್ನು ಕರೆದಾಗ ಅವರು ಹೋಗಲಿಲ್ಲ. ಈ ಸಮಾರಂಭ ಏರ್ಪಡಿಸಿದ್ದವರು ಕಳ್ಳ ಖದೀಮರು. ನೀವು ಅನುಕೂಲ ಮಾಡಿಕೊಡುವುದಕ್ಕೆ ಹೋಗಿದ್ದೀರಿ ಅಂತ ನಾನು ಹೇಳುವುದಿಲ್ಲ. ಈ ಖದೀಮರ ಬಗ್ಗೆ ಎಚ್ಚರಿಕೆ ವಹಿಸಬೇಕೆಂದು ಹೇಳುತ್ತೇನೆ. ಇವರು ಪಂಚಮಹಾಪಾತಕರು ಮಾನ್ಯ ಮುಖ್ಯಮಂತ್ರಿಗಳಾದ ಗುಂಡೂರಾಯರು ಇದ್ದಿದ್ದರೆ ಚೆನ್ನಾಗಿತ್ತು. ಮಾನ್ಯ ಗುಂಡೂರಾಯರ ಫೋಟೋ ಹಾಕಿರತಕ್ಕ ಒಂದು ವಿದ್ಯಾಸಂಸ್ಥೆಯ ಪತ್ರ ನನ್ನ ಹತ್ತಿರ ಇದೆ ವಿದ್ಯಾ ಸಂಸ್ಥೆಯ ಹೆಸರು, ''ಗುಂಡೂರಾವ್ ಜನರಲ್ ಎಜುಕೇಷನ್ ಟ್ರಸ್ಟ್'' ಎಂದು ಇದು ದಕ್ಷಿಣ ಕನ್ನಡ ಜಿಲ್ಲೆಯ ಸೂರತ್‌ಕಲ್‌ನಲ್ಲಿದೆ. ಒರಿಜಿನಲ್ ಲೆಟರ್ ತಂದಿದ್ದೇನೆ ನೋಡಿ ಕಳುಹಿಸಿಕೊಡುತ್ತೇನೆ. ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಗುಂಡೂರಾಯರಿಗೆ ಕೊಟ್ಟಿರತಕ್ಕ ಬಿರುದಾವಳಿಗಳು ಹಿಂದೆ ವಿಜಯನಗರ ಸಾಮ್ರಾಜ್ಯದಲ್ಲಿದ್ದಂತ ರಾಜರುಗಳನ್ನು ಕೂಡ ಆ ರೀತಿ ಹೊಗಳಿಲ್ಲ, ತಮ್ಮ ಕಡೆ ಪತ್ರ ಕಳುಹಿಸಿಕೊಡುತ್ತೇನೆ ನೋಡಿ.

ಅಧ್ಯಕ್ಷರೆ, ಇಷ್ಟು ಪ್ರವರ ಇವರಿಗೆ. ಬಹುಪರಾಕ್ ಅಂತ ಸೇರಿಸಬೇಕಾಗಿತ್ತು. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳವರಾದ ಗುಂಡೂರಾವ್ ಅವರು ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವರ ಹೆಸರಿನಲ್ಲಿ ಮಾಡಿಕೊಂಡಿದ್ದಾರೆ. ಮಾಡಿಕೊಂಡು ಹೋಗಲಿ, ಇನ್ನೆಷ್ಟು ಪುಟಗಳಲ್ಲಿ ಪರಾಕ್ ಹೇಳಲಿ ನಮ್ಮದೇನು ಅಡ್ಡಿ ಇಲ್ಲ. ದಿನಾಂಕ ೧೦-೭-೧೯೮೦ರಲ್ಲಿ ಮಾನ್ಯ ಮಂತ್ರಿಗಳಿಗೆ ಏನು ಕಳುಹಿಸಿ ಕೊಟ್ಟಿದ್ದಾರೆ ಅಂದರೆ.... ...

'telegraphic orders may be issued for sanction of the School.''

ಈ ಅಪ್ಲಿಕೇಷನ್ ಸರ್ಕಾರದಲ್ಲಿದೆ. ಇದು ತಮ್ಮ ಗಮನಕ್ಕೆ ಬಂದಿಲ್ಲ ಈಗ ಅದರ ಕಾಪಿ ಆಫ್ ದಿ ಲೆಟರ್ ತಮ್ಮ ಕಡೆಗೆ ಕಳುಹಿಸಿಕೊಡುತ್ತಿದ್ದೇನೆ. ತಾವು ವುಡ್‌ಲ್ಯಾಂಡ್ಸ್‌ನಲ್ಲಿ ಕುಳಿತ್ತಿದ್ದಾಗ ಇದಕ್ಕೆ ಸ್ಯಾಂಕ್ಷನ್ ಕೊಟ್ರಿ ಅಂತ ನನಗೆ ಇನ್‌ಫರ್‌ಮೇಷನ್ ಬಂದಿದೆ.

ಶ್ರೀ ಜಿ. ಬಿ. ಶಂಕರ್‌ರಾವ್.—ನಾವು ಖಾಸಗಿ ವಿದ್ಯಾಸಂಸ್ಥೆಗಳಿಗೆ ಪರ್ಮಿಷನ್ ಕೊಡುತ್ತೇವೆ. ಮೊನ್ನೆ ಖಾಸಗಿ ವಿದ್ಯಾ ಸಂಸ್ಥೆ ನಡೆಸತಕ್ಕ ಆಡಳಿತ ಮಂಡಳಿಯವರು, ತಮ್ಮಂತಹ ಸ್ನೇಹಿತರು ಅಲ್ಲಿಗೆ ಬರಬೇಕು ಅಂತ ಹೇಳಿದರು. ಅಲ್ಲಿ ಯಾರು ಯಾರು ಇದ್ದಾರೆ ಅಂತ ನಾನು ಅವರನ್ನು ಕೇಳಲಿಕ್ಕೆ ಹೋಗಲಿಲ್ಲ. ಅಲ್ಲಿಗೆ ಹೋದಮೇಲೆ ಬಾಯಿಮುಚ್ಚಿಕೊಂಡು ಬಂದಿದ್ದೇನೆ. ನಾನು ಯಾರಿಗೂ ಆಶ್ವಾಸನೆ ಕೊಟ್ಟಿಲ್ಲ. ಸರ್ಕಾರದ ಆಸ್ತಿಯನ್ನು ಏನೂ ಬರೆದುಕೊಟ್ಟಿಲ್ಲ. ನಿರಾಧಾರವಾದ ವಿಷಯವನ್ನು ಮೇಲಿಂದಮೇಲೆ ಪ್ರಸ್ತಾಪಮಾಡಿಕೊಂಡು ಹೋದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ನಾನು ಈ ಅಪಾದನೆಯನ್ನು ನಿರಧಾರವಾಗಿ ಮಾಡಿಲ್ಲ. ತಾವು ಆ ಸ್ಕೂಲಿಗೆ ಪರ್‌ಮಿಷನ್ ಕೊಡುತ್ತೀರೋ ಇಲ್ಲವೋ ನೋಡೋಣ. ಈ ವಿಷಯ ಇನ್ನೆಂದಿಗೂ ಹೇಳುವುದಿಲ್ಲ ಈವೊತ್ತೇ ಕೊನೆ ಇನ್ನು ಹೇಳುವುದಿಲ್ಲ. ಈಗ ನಮಗೂ ನಿಮಗೂ ಇರುವ ಅಲ್ಪ ಮರ್ಯಾದೆ ಉಳಿಸಬೇಕು. ವಿದ್ಯಾ ಮಂತ್ರಿಗಳಾಗಿ, ಶಾಸನಸಭಾ ಮರ್ಯಾದೆ, ಶಾಸಕರ ಮರ್ಯಾದೆ ಉಳಿಯಬೇಕು ಅಂತ ಇದ್ದರೆ ದಿಟ್ಟ ಕ್ರಮ ತೆಗೆದುಕೊಳ್ಳಿ. ತೆಗೆದುಕೊಳ್ಳಲಿಲ್ಲ ಅಂದರೆ ಕೊಳ್ಳೆ ಹೊಡೆಯಲಿಕ್ಕೆ ಮುಕ್ತ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಈ ಖಾಸಗಿ ಶಾಲೆಯವರು ಬೆಂಗಳೂರು ನಗರ ಒಂದರಲ್ಲಿಯೇ ಒಂದು ವರ್ಷಕ್ಕೆ ಎರಡು ಮೂರು ಕೋಟಿ ರೂಪಾಯಿ ಹೊಡೆದು ಹಾಕುತ್ತಾರೆ. ತಾವು ವಿಜಿಲೆನ್ಸ್ ಅಂತ ಹೇಳಲಿಕ್ಕೆ ಹೋದರೆ, ಅತೀಥರು ಡಿಪಾರ್ಟ್‌ಮೆಂಟ್ ಅಧಿಕಾರಿಗಳ ಜೊತೆಯಲ್ಲಿಯೇ ಇರುತ್ತಾರೆ. ಡಿಪಾರ್ಟ್‌ಮೆಂಟ್ ಏನು ಮಾಡಲಿಕ್ಕೆ ಆಗುವುದಿಲ್ಲ. ನರ್ಸರಿಯಿಂದ ಪ್ರೈಮರಿ ಹಂತದವರೆಗೆ ಇಂತಹ ಇನ್‌ಸ್ಟಿಟ್ಯೂಷನ್ ತೆಗೆದುಕೊಳ್ಳಲಿಕ್ಕೆ. ಬಸ್ಸುಗಳನ್ನು ರಾಷ್ಟ್ರೀಕರಣ ಮಾಡಿದ ಹಾಗೆ, ಈ ಸ್ಕೂಲುಗಳನ್ನೆಲ್ಲ ತೆಗೆದುಕೊಳ್ಳುವುದಕ್ಕೆ ನೀವು ಕಾನೂನಿನಲ್ಲಿ ಪ್ರಾವಿಜನ್ ಮಾಡಿ; ಎಲ್ಲಾ ಸ್ಕೂಲುಗಳನ್ನು ನೀವೇ ತೆಗೆದುಕೊಳ್ಳಿ. ಇಲ್ಲವೇ ಕೆಲವು ಕಂಡೀಷನ್ ಹಾಕಿ. ಒಳ್ಳೆಯ ಸ್ಕೂಲುಗಳಿಗೆ ಪರ್ಮಿಷನ್ ಕೊಡಿ ನ್ಯಾಷನಲೈಸ್ ಮಾಡದೇ ಇದ್ದರೆ ಇವರಿಗೆ ಫ್ರೀ ಲೈಸೆನ್ಸ್ ಎರಡು ಪರ್‌ಸೆಂಟ್ ಇದ್ದರೆ, ಕೊಳ್ಳೆ ಹೊಡೆಯುವುದು ೯೮ ಪರ್‌ಸೆಂಟ್ ಆಗುತ್ತದೆ ಅದಕ್ಕೋಸ್ಕರವಾಗಿ ಇದಕ್ಕೆ ಒಬ್ಬ ಅಡ್ಮಿನಿಸ್ಟ್ರೇಟರ್ ಹಾಕಿ ಸಂಪೂರ್ಣವಾಗಿ ಈ ಸ್ಕೂಲುಗಳನ್ನು ತಮ್ಮ ವಶಮಾಡಿಕೊಳ್ಳಲಿಕ್ಕೆ ಕೂಡಲೇ ಒಂದು ಶಾಸನವನ್ನು ತನ್ನಿ. ಈ ಅಧಿವೇಶನ ಮುಗಿಯುವುದರೊಳಗೆ ತನ್ನಿ. ಅದಕ್ಕಿಂತಲೂ ಉತ್ತಮವಾದ ಒಂದು ಸಲಹೆ ಕೊಡಬೇಕು ಅಂದರೆ, ಇದರ ಬಗ್ಗೆ ಸರಿಯಾದಂಥ ಅಂಶಗಳು ಗೊತ್ತಾಗಬೇಕು ಅಂದರೆ, ಮಾನ್ಯ ಅರ್ಮುಗಮ್ ಅವರನ್ನು ಸೇರಿದಂತೆ ಈ ಮನೆಯ ಮತ್ತು ಮೇಲ್ಮನೆಯ ಕೆಲವು ಶಾಸಕರನ್ನು ಈ ವಿದ್ಯಾ ಸಂಸ್ಥೆಗಳನ್ನು ನೋಡಿಕೊಂಡು ಬರಲಿಕ್ಕೆ ಕಳುಹಿಸಿಕೊಡಿ. ಈ ಸಭೆ ಮುಗಿಯುವುದರೊಳಗೆ ಅವರು ಒಂದು ವರದಿಯನ್ನು ಸಲ್ಲಿಸಲಿಕ್ಕೆ ತಿಳಿಸಿ. ಅದರಲ್ಲಿ ಹಿರಿಯ ಶಾಸಕರನ್ನೇ ಹಾಕಿ, ಈ ಸ್ಕೂಲುಗಳಿಗೆ ಹೋಗಿ ನೋಡಿಕೊಂಡು ಬಂದು ಅವರು ಒಂದು ವರದಿಯನ್ನು ಒಪ್ಪಿಸಲಿ, ಅದರ ಮೇಲೆ ತಾವು ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಿ ಅಂತ ನಾನು ಸೂಚಿಸುತ್ತೇನೆ. ಇವೊತ್ತು ಶಿಕ್ಷಣ ಅಧಿಕಾರಿಗಳು ಯಾರು ಇದ್ದಾರೆ, ಕೇಸ್‌ವರ್ಕರ್ ಯಾರು ಇದ್ದಾರೆ, ಇದಕ್ಕೆ ಸಂಬಂಧಪಟ್ಟಿರತಕ್ಕವರು ೧೫೦ ರಿಂದ ೧೫೦೦ರ ವರೆಗೆ ಲೋ ರ್‍ಯಾಂಕ್‌ನಲ್ಲಿರತಕ್ಕ ಅಧಿಕಾರಿಗಳು ಈ ಖಾಸಗಿ ಶಾಲೆಗಳವರಿಗೆ ಪ್ರೊಟೆಕ್ಷನ್ ಕೊಡುತ್ತಾರೆ. ಈ ವ್ಯವಸ್ಥೆ ಬಹಳ ಚೆನ್ನಾಗಿದೆ. ಈ ೧೪೦–೧೫೦ ಜನರನ್ನು ಮಾನ್ಯ ಸುಬ್ಬಯ್ಯಶೆಟ್ಟರು ವಿದ್ಯಾಮಂತ್ರಿಗಳಾಗಿದ್ದಾಗ ಅವರನ್ನೆಲ್ಲಾ ಬೇರೆ ಬೇರೆ ಕಡೆಗೆ ವರ್ಗ ಮಾಡಿದ್ದರು. ಸುಮಾರು ೨೦ ವರ್ಷದಿಂದಲೂ ಇಲ್ಲೇ ಪೀಠಮಾಡಿಕೊಂಡು ಕುಳಿತಿದ್ದಾರೆ. ಅವರ ಆಸ್ತಿಯನ್ನು ತನಿಖೆ ಮಾಡಿಸಿ. ಅವರು ಮಾಡಿರುವಷ್ಟು ಆಸ್ತಿ ನಮ್ಮ ಶಂಕರ್‌ರಾವ್ ಅವರಿಗೂ ಇಲ್ಲ ಅವರ ಹೆಂಡತಿ ಮೈಮೇಲೆ ಇರತಕ್ಕ ಒಡವೆ ಎಷ್ಟು. ಅವರೆಲ್ಲರ ಹೆಸರು ಇದೆ. ಆದರೆ ಇಲ್ಲಿ ಓದುವುದು ಅವರ ಹೆಂಡತಿಯವರು ಒಳ್ಳೆಯ ಮಹಾರಾಣಿಯವರ ಹಾಗೆ ವಜ್ರದ ಓಲೆ ಹಾಕಿಕೊಂಡು ಬರುತ್ತಾರೆ. ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕ ಒಬ್ಬ ಸೆಕೆಂಡ್ ಡಿವಿಜನ್ ಕ್ಲಾರ್ಕ್ ಇಷ್ಟು ವ್ಯವಹಾರ ಮಾಡುತ್ತಾನೆ. ನಾನು ನನ್ನ ಹೆಂಡತಿಗೆ ಒಂದು ಸೀರೆ ತೆಗೆದುಕೊಡುವ ಯೋಗ್ಯತೆ ಇಲ್ಲ. ಅವರ ಹೆಸರುಗಳನ್ನು ಇಲ್ಲಿ ಓದಲಿಕ್ಕೆ ಹೋಗಬಾರದು ತಮ್ಮ ಕಡೆ ಕಳುಹಿಸಿಕೊಡುತ್ತೇನೆ ನೋಡಿ. I would like to know from the Hon. Minister for Education, whether the Govt. have cancelled the transfer orders of all these officials ?

ಶ್ರೀ ಭೀಮಣ್ಣ ಎಸ್. ಖಂಡ್ರೆ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಸೆಕೆಂಡ್ ಡಿವಿಜನ್ ಕ್ಲಾರ್ಕ್ಸ್ ಎಸ್ಕ್ವಯಿರಿ ಮಾಡಬೇಕೆಂದು ಹೇಳಿದರು. ಇವೊತ್ತು, ಎಂ. ಎಲ್. ಎ. ಎಂ. ಎಲ್. ಸಿ. ಮತ್ತು ಎಂ. ಪಿ. ಗಳು ಏನು ಆಸ್ತಿ ಮಾಡಿದ್ದಾರೆ ಅದನ್ನು ಮಾಡಲಿಕ್ಕೆ ಗವರ್ನ್‌ಮೆಂಟ್‌ಗೆ ಅಧಿಕಾರ ಇಲ್ಲ.

ಶ್ರೀ ಮಳ್ಳೂರು ಆನಂದರಾವ್.—ಈಗ ಶಿಕ್ಷಣ ಮಂತ್ರಿಗಳಿಗೆ ಪ್ರೈವೇಟ್ ಸ್ಕೂಲಿಗಂತೂ ಅಧಿಕಾರ ಇಲ್ಲ. ಇದನ್ನಾದರೂ ಮಾಡಿ. ನಿಮಗೆ ಮೆರವಣಿಗೆ ಇಲ್ಲದೇ ಇದ್ದರೂ ಚಿಂತೆಯಿಲ್ಲ. ಈ ಹಗಲು ದರೋಡೆಯನ್ನು ನಿಲ್ಲಿಸಿ. ಇಡೀ ಸದನ ಸೇರಿ ಅಭಿನಂದನೆಯ ಸುರಿಮಳೆಯನ್ನು ಸುರಿಸುತ್ತೇವೆ. I would like to know, whether the Hon. Minister for Education or the Education Department have cancelled transfer orders of all these officials from here to different places.

೧–೩೦ ಪಿ. ಎಂ.

ನಾನು ಬೇರೆ ಬಡ್ಜೆಟ್ಟಿನ ಮೇಲೆ ಮಾತನಾಡುವುದಿಲ್ಲ. ಅಲ್ಲದೆ ಬೇರೆ ಸದಸ್ಯರು ಹೆಚ್ಚಿಗೆ ಮಾತನಾಡುವುದಿಲ್ಲ ಎಂದು ಅವರು ಎಲ್ಲಾ ಸಮಯವನ್ನೂ ನನಗೆ ದಾನಮಾಡಿದ್ದಾರೆ.

ಈಗ ನಾನು ಸಂಸ್ಕೃತದ ವಿದ್ಯಾಭ್ಯಾಸದ ಬಗ್ಗೆ ಮತ್ತು ಕೆಲವು ಪಾಲಿಸಿ ಬಗ್ಗೆ ಹೇಳಬೇಕಾಗಿದೆ. ಆ ಬಗ್ಗೆ ಹೆಚ್ಚು ವಿವರಗಳಿಗೆ ಹೋಗುವುದಿಲ್ಲ. ಸಂಸ್ಕೃತದ ಬಗ್ಗೆ ಸಾಕಷ್ಟು ವಿವಾದ ಎದ್ದಿದೆ. ರಾಜ್ಯದಲ್ಲಿ ಮೊದಲನೆ ಭಾಷೆ ಆಗಬೇಕೇ, ದ್ವಿತೀಯ ಭಾಷೆಯಾಗಬೇಕೇ, ಎನ್ನುವ ಬಗ್ಗೆ ವಿವಾದ ಎದ್ದಿದೆ. ಸಂಸ್ಕೃತ ಪ್ರಥಮ ಭಾಷೆಯಾದರೆ ಕನ್ನಡಕ್ಕೆ ಧಕ್ಕೆ ಬರುತ್ತದೆ ಎನ್ನುವ ವಿವಾದವನ್ನು ಸಹ ಎಬ್ಬಿಸಿದ್ದಾರೆ. ಇದನ್ನು ಒಂದನೇ ತರಗತಿಯಿಂದ ಕಡ್ಡಾಯವಾಗಿ ಎಲ್ಲರೂ ಕಲಿಯಬೇಕೆಂದು ಹೇಳಿಲ್ಲ. ಇದು ಬಹಳ ದುಸ್ಸರಿಣಾಮವಾದ ಸಂಗತಿ. ಪ್ರೌಢ ವಿದ್ಯಾಭ್ಯಾಸದಲ್ಲಿ ಕನ್ನಡಕ್ಕೆ ಮೊದಲನೇ ಭಾಷೆ ಆಗಬೇಕೆಂಬುದು ಇದ್ದೇ ಇದೆ. ಆದರೆ ಕೇವಲ ೨೦೦ ಶಾಲೆಗಳಲ್ಲಿ ಯಾರು ಸಂಸ್ಕೃತವನ್ನು ಓದುವುದಕ್ಕೆ ಕಲಿತುಕೊಳ್ಳುವುದಕ್ಕೆ, ಮೊದಲು ಲಾಂಗ್ವೇಜ್ ಆಗಿ ತೆಗೆದುಕೊಳ್ಳುವುದಕ್ಕೆ ಇಷ್ಟಪಡುತ್ತಾರೋ ಅವರಿಗೆ ಅವಕಾಶ ಇದೆಯೇ ಹೊರತು, Sanskrit is not compulsory for all the students ಸಂಸ್ಕೃತದ ರೀತಿಯಂತೆ ಹಿಂದಿ ಇಲ್ಲವೇ, ಮರಾಠಿ ಇಲ್ಲವೇ, ತೆಲುಗು ಇಲ್ಲವೇ, ತಮಿಳು ಇಲ್ಲವೇ. ಅವುಗಳನ್ನೂ ಮೊದಲು ಲಾಂಗ್ವೇಜ್ ಆಗಿ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಆದ್ದರಿಂದ ಸಂಸ್ಕೃತವನ್ನು ಯಾರಾದರೂ ಓದುವವರು ಇಚ್ಛೆಪಟ್ಟು ಮೊದಲ ಲಾಂಗ್ವೇಜ್ ಆಗಿ ತೆಗೆದುಕೊಂಡರೆ, ಅದರಿಂದ ಕನ್ನಡಕ್ಕೆ ಧಕ್ಕೆಯಾಗುತ್ತದೆ ಎಂಬುದಾಗಿ ಹೇಳುವುದರಲ್ಲಿ ಅರ್ಥ ವಿಲ್ಲ. ಯಾವ ಯಾವ ಕಾಲದಲ್ಲಿ ಯಾವ ಯಾವ ಸರ್ಕಾರಗಳು ಏನೇನೋ ಮಾಡಿದರು. ಆದರೆ ಈಗ ನಿಮ್ಮ ಸರ್ಕಾರ ಏನು ನಿಲುವು ತೆಗೆದುಕೊಂಡಿದೆ ಅದು ಸರಿ. ಸಂಸ್ಕೃತವನ್ನು ಮೊದಲ ಭಾಷೆಯಾಗಿ ತೆಗೆದುಕೊಳ್ಳುವುದಕ್ಕೆ ಹುಡುಗರು ಮುಂದೆ ಬರುವುದರಿಂದ ಕನ್ನಡಕ್ಕೆ ಏನೇನು ದಕ್ಕೆಯಾಗುವುದಿಲ್ಲ. ಕನ್ನಡಕ್ಕೆ ಸಂಸ್ಕೃತ ಭಾಷೆ ಮಾರಕವಾಗಿ ಬಂದಿಲ್ಲ. ಜೊತೆಗೆ ಅದು ಕಾಂಪಿಟ್ ಮಾಡತಕ್ಕಂತಹ ಭಾಷೆಯೂ ಅಲ್ಲ. ಅದು ಸ್ವತಃ ಭಾಷೆಯಾಗಿ ಬೆಳೆದು ಬಂದಿದೆ. ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇದು ದೇವನಾಗರಿ ಭಾಷೆ. ಅದರಲ್ಲಿ ತಪ್ಪು ಏನಿದೆ ? ಇದಕ್ಕೋಸ್ಕರ ಭಾಷೆಯ ಹೆಸರಿನಲ್ಲಿ ನಮ್ಮ ಪಕ್ಷದವರು ತೆಗೆದುಕೊಂಡಂತಹ ನಿಲುವು ಸರಿಯಲ್ಲ. ಎಲ್ಲ ಸದಸ್ಯರು ಈ ಸಂಸ್ಕೃತ ಭಾಷೆ ಮುಂದೆ ಬಂದು ಕನ್ನಡಕ್ಕೆ ದಕ್ಕೆಯಾಗುತ್ತದೆ ಎಂಬುದಾಗಿ ಏನು ಹೇಳುತ್ತಿದ್ದಾರೆ ಅದು ತಪ್ಪು. ಆ ವಾದವನ್ನು ನಾನು ಒಪ್ಪುವುದಿಲ್ಲ. ಕನ್ನಡಕ್ಕೆ ಮಾರಕವಾಗಿರತಕ್ಕಂತಹದ್ದು ಸಂಸ್ಕೃತ ಅಲ್ಲ ಇಂಗ್ಲಿಷ್. ನಮ್ಮ ಮಕ್ಕಳನ್ನು ಯಾರೂ ಕನ್ನಡ ಶಾಲೆಗೆ ಕಳುಹಿಸುವುದಿಲ್ಲ. ಎಲ್ಲರೂ ಇಂಗ್ಲಿಷ್ ಶಾಲೆಗೆ ಕಳುಹಿಸುತ್ತಾರೆ. ನೀವು ಈ ಬಗ್ಗೆ ಏನೊಂದು ನಿಲುವನ್ನು ತೆಗೆದುಕೊಂಡಿದ್ದೀರಿ ಅದು ಸರಿ. ಯಾರು ಸಂಸ್ಕೃತವನ್ನು ಓದುವುದಕ್ಕೆ ಇಷ್ಟಪಡುತ್ತಾರೋ ಅವರಿಗೆ ವ್ಯಾಸಂಗ ಮಾಡುವುದಕ್ಕೆ ಅವಕಾಶ ಮಾಡಿಕೊಡಿ, ಬೇರೆ ಬೇರೆ ಉದ್ದೇಶದಿಂದ ಈ ಭಾಷೆಯನ್ನು ತೆಗೆಳುವುದರಲ್ಲಿ ಅರ್ಥ ವಿಲ್ಲ. ಇನ್ನೊಂದು ವಿಷಯ. ಇದನ್ನು ಬಹುತೇಕವಾಗಿ ಅನೇಕ ಸದಸ್ಯರು ನನ್ನ ಮಾತನ್ನು ಒಪ್ಪುವುದಿಲ್ಲ. ಅದು ವಿವಾದಾಸ್ಪದವಾದ ವಿಚಾರ. ಎಜುಕೇಷನ್‌ನಲ್ಲೂ ರಿಸರ್ವೇಷನ್ ಪಾಲಿಸಿ ಮಾಡಿದ್ದೀರಿ. ಇವತ್ತು ಇದು ಸರಿ ಅಂತ ಕಾಣಬಹುದು. ಆದರೆ ನಾಳೆ ಇದು ಎಲ್ಲಿಗೆ ನಿಮ್ಮನ್ನು ತೆಗೆದುಕೊಂಡು ಹೋಗಿ ನಿಲ್ಲಿಸುತ್ತದೆ ಎಂಬುದನ್ನು ವಿಚಾರ ಮಾಡುತ್ತಿದ್ದೀರಾ ಎಂಬುದಾಗಿ ನಾನು ನಿಮ್ಮನ್ನು

ಕೇಳಬೇಕಾಗುತ್ತದೆ. ಹಾವನೂರ್ ವರದಿಯ ಪ್ರಕಾರ ಎಜುಕೇಷನ್‌ನಲ್ಲೂ ಈ ರಿಸರ್ವೇಷನ್ ಪದ್ಧತಿಯನ್ನು ಜಾರಿಗೆಕೊಟ್ಟಿದ್ದಾರೆ. ಹಾಗೆಂದ ಮಾತ್ರ ನಾನು ಇದರಲ್ಲಿ ನೌಕರಿ ದೊರೆಯುವ ಬಗ್ಗೆ ಇರತಕ್ಕಂತಹ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ ಪ್ರಿನ್ಸಿಪಲ್ ಆಫ್ ಎಜುಕೇಷನ್‌ನ ದೃಷ್ಟಿಯಿಂದ. ಯಾವುದೇ ಒಂದು ಮಗುವಿಗೆ, ಈ ರೀತಿಯ ಅಂದರೆ ಆತನು ಇಷ್ಟಬಂದಂತಹ ವಿಷಯದಲ್ಲಿ ವ್ಯಾಸಂಗ ಮಾಡುವಂತಹ ಒಂದು ಅವಕಾಶ ಇರಬೇಕು. ಜಾತಿಯ ಹೆಸರಿನಲ್ಲಿ ಶಿಕ್ಷಣಕ್ಕೆ ಅವಕಾಶ ಇರಬಾರದು.

ಶ್ರೀ ಕೆ. ಎಚ್. ರಂಗನಾಥ್.—ಇದು ನಿಮ್ಮ ವ್ಯಯಕ್ತಿಕ ಅಭಿಪ್ರಾಯವೋ, ಅಥವಾ ಪಕ್ಷದ ಅಭಿಪ್ರಾಯವೋ ?

ಶ್ರೀ ಮಳ್ಳೂರು ಆನಂದರಾವ್.—ಇದು ನನ್ನ ವ್ಯಯಕ್ತಿಕ ಅಭಿಪ್ರಾಯ. ಜಾತಿಯ ಹೆಸರಿನಲ್ಲಿ ಅಡ್ಮಿಷನ್ ಆಗುವುದನ್ನು ತಡೆಗಟ್ಟಬಹುದು. ಅವನು ಬ್ರಾಹ್ಮಣನಿರಬಹುದು, ಲಿಂಗಾಯಿತ ಇರಬಹುದು, ಶೆಡ್ಯೂಲ್ಡ್ ಕ್ಯಾಸ್ಟ್ ಇರಬಹುದು. ಎಲ್ಲರಿಗೂ ಸಮಾನವಾಗಿ ವಿದ್ಯಾಭ್ಯಾಸದಲ್ಲಿ ಅವಕಾಶ ಇರಬೇಕು. ಜಾತಿಯ ಹೆಸರಿನಲ್ಲಿ ಮಾಡುವುದನ್ನು ತಡೆಗಟ್ಟಬೇಕು. ಇದಕ್ಕಿಂತ ಪರಮ ಅನ್ಯಾಯ ಇನ್ಯಾವುದೂ ಇಲ್ಲ. ಎಲ್ಲರಿಗೂ ಸಮಾನವಾಗಿ ಶಿಕ್ಷಣ ಪಡೆಯತಕ್ಕಂತಹ ಎಜುಕೇಷನ್ ಅವಕಾಶ ಇರಬೇಕು. ಹರಿಜನ-ಗಿರಿಜನರ ಬಗ್ಗೆ ಹಾಗೆ ಮಾಡುವುದಕ್ಕಾಗುವುದಿಲ್ಲ. Because it is against the constitution and against the natural justice of law ೮೦ ಪರ್ಸೆಂಟ್‌ನ್ನು ತೆಗೆದುಕೊಂಡಂತಹ ಒಬ್ಬ ಬ್ರಾಹ್ಮಣರ ಹುಡುಗನಿಗೆ ಅಥವಾ ಲಿಂಗಾಯಿತರ ಹುಡುಗನಿಗೆ ಬಿ. ಎಸ್. ಸಿ. ಗೂ ಸೀಟು ಸಿಕ್ಕುವುದಿಲ್ಲ ಏಕೆ ಕೊಡುವುದಿಲ್ಲ. ಆದರೆ ಅದೇ ಒಬ್ಬ ಹುಡುಗ ಅದಕ್ಕಿಂತ ಕಡಿಮೆ ಪರ್ಸೆಂಟನ್ನು ತೆಗೆದುಕೊಂಡಿದ್ದರೂ ಹಿಂದುಳಿದ ವರ್ಗಕ್ಕೆ ಸೇರಿದರೆ ಅವನಿಗೆ ಕೊಡುತ್ತೀರಿ. ಇದರಿಂದ ಅವರ ಮೇಲೆ ಆಗತಕ್ಕಂತಹ ಪರಿಣಾಮ ಏನು ಎಂಬುದನ್ನು ದಯಮಾಡಿ ವಿಚಾರ ಮಾಡಿ. ಸೇಡಿನ ಮನೋಭಾವ ಬರುತ್ತದೆ. ಇದರಿಂದಾಗಿ ವಿದ್ಯಾಕ್ಷೇತ್ರದಲ್ಲೂ ಕೂಡ ಪಾಪದ ಕೃತಿಗಳನ್ನು ಪುನಃ ರಚನೆ ಮಾಡಬೇಕೇಕೆ ? ಇದು ರಿಫಾರ್ಮ್ ಇದಕ್ಕೆ ಪ್ರಾಯಶ್ಚಿತ್ತ ಏನು ?

ಶ್ರೀ ಪಿ. ಮುಸಿಯಪ್ಪ.—ಸಮಾಜದಲ್ಲಿ ಇವತ್ತು ವಿದ್ಯಾಕ್ಷೇತ್ರದಲ್ಲಿ ಏನಾಗಿದೆ ಎಂದರೆ ೮೦ ಪರ್ಸೆಂಟ್, ೯೦ ಪರ್ಸೆಂಟ್, ೯೫ ಪರ್ಸೆಂಟ್ ೯೯ ಪರ್ಸೆಂಟ್ ಕೊನೆಗೆ ೧೦೪ ಪರ್ಸೆಂಟ್ ತೆಗೆದುಕೊಳ್ಳತಕ್ಕಂತಹ ವಿದ್ಯಾರ್ಥಿಗಳಿದ್ದಾರೆ. ಸಮಾಜದಲ್ಲಿ ಈ ಪರ್ಸೆಂಟ್ ಹೇಗೆ ಬಂತು? ಇದಕ್ಕೇನು ಹೇಳುತ್ತೀರಾ?

ಶ್ರೀ ಮಳ್ಳೂರು ಆನಂದರಾವ್.—ಎಲ್ಲರಿಗೂ ವಿದ್ಯಾ ಕ್ಷೇತ್ರದಲ್ಲಿ ಮುಕ್ತ ಅವಕಾಶ ಇರಬೇಕು. ಈ ವ್ಯವಸ್ಥೆಯನ್ನು ದಯಮಾಡಿ ಮಾಡಿ. ಶಿಕ್ಷಣವನ್ನು ಎಲ್ಲಿ ಬೇಕಾದರೂ ಓದಲಿ.

ಶ್ರೀ ಕೆ. ಎಚ್. ರಂಗನಾಥ್.—ರಿಸರ್ವೇಷನ್ ಬಗ್ಗೆ ಒಳ್ಳೆಯ ವಿಷಯವನ್ನು ಹೇಳುತ್ತಿದ್ದೀರಲ್ಲಾ, ೯೯ ಪರ್ಸೆಂಟ್ ಬಂದಿರುವುದೇ ಅನುಮಾನಕ್ಕೆ ಆಸ್ಪದನಾಗಿದೆ. ಮತ್ತೆ ೧೦೦ ಪರ್ಸೆಂಟ್ ಹೇಗೆ ಬಂತು ಎಂಬುದರಲ್ಲಿ ಕೂಡ ಅನುಮಾನಕ್ಕೆ ಆಸ್ಪದವಾಗಿದೆ.

ಶ್ರೀ ಮಳ್ಳೂರು ಆನಂದರಾವ್.—ಬಂದಿರತಕ್ಕಂತಹ ಅನುಮಾನ ಮಾನ್ಯ ಶ್ರೀ ಮುಸಿಯಪ್ಪನವರಿಗೂ ಹಾಗೂ ಶ್ರೀ.ರಂಗನಾಥ್‌ರವರಿಗೆ ಅಷ್ಟೆ. ಬೇರೆಯವರಿಗೆ ಅಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಎಲ್ಲರಿಗೂ ಹೇಳುತ್ತಿರತಕ್ಕಂತಹದ್ದು ನನ್ನ ಕಿವಿಗೂ ಬಂತು. ಅದನ್ನು ನಾನು ಹೇಳಿದೆ. ಆದರೆ ನೀವು ಏಕೆ ನಾನು ಹೇಳಿದೆ ಅಂತ ಹೇಳುತ್ತೀರಿ?

ಶ್ರೀ ಮಳ್ಳೂರು ಆನಂದರಾವ್.—ಅದನ್ನು ನಾನ್ಯಾಕೆ ಹೇಳಬೇಕು. ಮಾನ್ಯ ವಿದ್ಯಾ ಮಂತ್ರಿಗಳೇ ಹೇಳಬೇಕು. You have to censure the Education. Department ಅದನು ನಾನು ಹೇಳಿದರೆ then again it is reflection on the Education Department. ಈ ಸಾರಿಯ ಪಿ. ಯು. ಸಿ. ಪರೀಕ್ಷೆಯಲ್ಲಿ ಎರಡೆರಡು ಸಾರಿ ವಾಲ್ಯುವೇಷನ್ ಮಾಡಿಸಿದ್ದಾರೆ. ಆ ರೀತಿ ಕರಪ್ಷನ್ ವಾಲ್ಯುವೇಷನ್ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಶಾಲಾ ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿರತಕ್ಕಂತಹ ಉಪಾಧ್ಯಾಯರುಗಳು, ಮತ್ತು ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜಿನಲ್ಲೂ ಕೂಡ ದುಡ್ಡು ತೆಗೆದುಕೊಂಡು ಉತ್ತರ ಬರೆಸುತ್ತಾರೆ, ದುಡ್ಡು ತೆಗೆದುಕೊಂಡು ನಂಬರ್ ಹಾಕುತ್ತಾರೆ, ಎನ್ನುವ ದೂರು

ಇದೆ. ವಿದ್ಯಾರ್ಥಿಗಳಿಗೆ ಒಟ್ಟು ವ್ಯಾಸಂಗ ಮುಗಿಸುವುದಕ್ಕೆ ೫೦ ಸಾವಿರ ಖರ್ಚಾಗುತ್ತದೆ. ಆದರೆ ೧೦ ಸಾವಿರ ರೂ. ಗಳನ್ನು ಖರ್ಚು ಮಾಡಿ ಹೆಚ್ಚಿಗೆ ನಂಬರ್‌ಗಳನ್ನು ಹಾಕಿಸಿಕೊಂಡು ಬರುತ್ತಿದ್ದಾರೆ. ಆದ್ದರಿಂದಲೇ ಈ ಪರ್ಸೆಂಟೇಜ್ ಗ್ರೇಡಿನಲ್ಲಿ ಮೇಲಕ್ಕೆ ಹೋಗುತ್ತಿದೆ.

ಶ್ರೀ ಮಳ್ಳೂರು ಆನಂದರಾವ್.—ತಾಂತ್ರಿಕ, ಹಾಗೂ ವೈದ್ಯಕೀಯದ ವ್ಯಾಸಂಗದ ಬಗ್ಗೆ ತಾವು ಏನು ಹೇಳಿದಿರಿ ಅದನ್ನು ಸಂಪೂರ್ಣವಾಗಿ ನಾನು ಒಪ್ಪುತ್ತೇನೆ. ಏಕೆಂದರೆ ಇರಾನಿನ ವಿದ್ಯಾರ್ಥಿಗಳಿಗೆ ಡಿಗ್ರಿಯನ್ನು ಮಾರುತ್ತಿದ್ದಾರೆ ಎಂಬುದು ಪತ್ರಿಕೆಯಲ್ಲಿ ಬಂದಿದೆ. ಆದರೆ ನಾನು ಜನರಲ್ ಎಜುಕೇಷನ್ ಬಗ್ಗೆ ಮಾತನಾಡುತ್ತಿದ್ದೇನೆ. ಮಾನ್ಯ ವಿದ್ಯಾ ಮಂತ್ರಿಗಳು ಇದರ ಬಗ್ಗೆ ವಿಚಾರ ಮಾಡಿ ಕಳೆದ ಮಾರ್ಚಿ ತಿಂಗಳ ಪಿ.ಯು.ಸಿ. ಪರೀಕ್ಷೆಯಲ್ಲಿ ಎರಡೆರಡು ಸಾರಿ ವಾಲ್ಯುವೇಷನ್ ಮಾಡಿಸಿದ್ದಾರೆ. ಅದನ್ನು ಈ ಸದನದಲ್ಲೇ ಅನೌನ್ಸ್ ಮಾಡಿದ್ದಾರೆ. ಸಾಧಾರಣ ಮಾಡುತ್ತೇವೆಂದು ಈ ಸದನದಲ್ಲಿ ತಾವು ಅನೌನ್ಸ್ ಮಾಡಿ. ದಯಮಾಡಿ ಇದರ ಬಗ್ಗೆ ಉತ್ತರ ಕೊಟ್ಟರೆ ಒಳ್ಳೆಯದು. ಈ ರಿಸರ್ವೇಷನ್ ಪಾಲಿಸಿ ಏನಿದೆ ಜಾತಿ ಭಾವನೆಗಳಿಂದ, ಕೋಮು ಭಾವನೆಗಳಿಂದ ಮಾಡಿ, ಈ ಸಮಾಜದಲ್ಲಿ ವಿಷ ಬೀಜವನ್ನು ಬಿತ್ತಬೇಡಿ. ಇದು ಒಂದು ಸೆಕ್ಯೂಲರ್ ಸ್ಟೇಟ್. ಈ ರೀತಿ ಮಾಡುವುದರಿಂದ ಸಮಾಜದಲ್ಲಿ ಅತೃಪ್ತಿ ಮತ್ತು ಅಸಮಾಧಾನ ನಿರ್ಮಾಣವಾಗುತ್ತದೆ. ಎಲ್ಲಾ ವಿದ್ಯಾರ್ಥಿಗಳಿಗೂ ಮುಕ್ತ ಅವಕಾಶ ಇರಬೇಕು. ಮತ್ತು ಇದರಲ್ಲಿ ಜಾತೀಯ ಸಂಖ್ಯೆಯನ್ನು ಇದರಲ್ಲಿ ಬಳಸಬಾರದು. ಯಾರ್ಯಾರು ಎಲ್ಲೇ ಬೇಕಾದರೂ ವ್ಯಾಸಂಗ ಮಾಡುವ ಅವಕಾಶ ಇರಬೇಕು. ಹರಿಜನ-ಗಿರಿಜನರಿಗೆ ೧೦೦ ಪರ್ಸೆಂಟ್ ರಿಸರ್ವೇಷನ್ ಕೊಡಬೇಕು. ಆದರೆ ಈಗ ಏನಾಗಿದೆ ಎಂದರೆ ಅವರ ಹೆಸರಿನಲ್ಲಿ ಕೊಳ್ಳೆ ಹೊಡೆಯುತ್ತಿದ್ದಾರೆ. ಅವರಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿದ್ದರೆ ಅವರಿಗೆ ಇನ್ನೂ ಏನೇನು ಸೌಲಭ್ಯಗಳು ಬೇಕೋ ಅವುಗಳನ್ನು ಕೊಡುವುದಕ್ಕೆ ಅವಶ್ಯ ಇದೆಯೋ ಅವುಗಳೆಲ್ಲವನ್ನೂ ಕೊಟ್ಟು ಮುಂದೆ ತನ್ನಿ. ನಾನು ಬೇಡ ಎಂಬುದಾಗಿ ಹೇಳುವುದಿಲ್ಲ. ಆದರೆ ಇವರನ್ನು ಬಿಟ್ಟು ಇನ್ನು ಬೇರೆ ಬೇರೆಯವರಿಗೆ ರಿಸರ್ವೇಷನ್ ಅಂತ ಏನು ಮಾಡಿದ್ದಾರೆ ಅದನ್ನು ಕೂಡಲೇ ತೆಗೆಯಬೇಕೆಂದು ನಾನು ಸರ್ಕಾರಕ್ಕೆ ತಮ್ಮ ಮೂಲಕ ಆಗ್ರಹ ಮಾಡುತ್ತಿದ್ದೇನೆ.

ಶ್ರೀ ಬಿ.ವಿ ಕಕ್ಕಿಲಾಯ,—ರಿಸರ್ವೇಷನ್ ಏಕೆ ಬೇಕಾಗುತ್ತದೆಂದರೆ ಹಿಂದುಳಿದ ವರ್ಗದ ಜನರ ಆರ್ಥಿಕ ಸ್ಥಿತಿ ಮತ್ತು ಸಾಮಾಜಿಕ ಸ್ಥಿತಿ ಬಹಳ ಹಿಂದುಳಿದಿದೆ ಆದರೆ ಮುಂದುವರಿಯಬೇಕೆಂದು ಗಮನ ಹರಿಸುತ್ತಿರುವಂತಹ ವಿದ್ಯಾರ್ಥಿಗಳಿಗೆ ಪಟ್ಟಣದಲ್ಲೇ ಇದ್ದು ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು, ಅಷ್ಟೇ ಅಂಕಗಳನ್ನು ಇವರು ಪಡೆಯುವುದಕ್ಕೆ ಹೇಗೆ ಸಾಧ್ಯ? ಎಷ್ಟೇ ಪ್ರಯತ್ನಪಟ್ಟರೂ ಪಡೆಯುವುದಕ್ಕೆ ಸಾಧ್ಯವಿಲ್ಲ. ತಾವು ಹೇಳುವ ಹಾಗೆ ಈ ರಿಸರ್ವೇಷನ್‌ನ್ನು ಪೂರ್ಣವಾಗಿ ತೆಗೆದುಬಿಟ್ಟರೆ ಇವರಿಗೆ ಧಕ್ಕೆ ಆದಹಾಗೆ ಆಗುತ್ತದೆ. ಅದನ್ನು ಪರಿಹಾರ ಮಾಡುವುದಕ್ಕೋಸ್ಕರ ಈ ರಿಸರ್ವೇಷನ್ ಪದ್ಧತಿ ಇರುವುದು.

ಶ್ರೀ ಮಳ್ಳೂರು ಆನಂದರಾವ್.—ಸಮಾಜದಲ್ಲಿ ಎಲ್ಲಾ ಜಾತಿಯವರು ವಿದ್ಯಾರ್ಥಿಗಳು ತಮ್ಮ ವಿದ್ಯೆಯನ್ನು ಮುಂದುವರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಕಾಂಪೀಟ್ ಮಾಡತಕ್ಕ ವ್ಯವಸ್ಥೆ ಇಲ್ಲ ಎಂದು ಹೇಳಿದರೆ ಹೇಗೆ. ಆ ಒಂದು ಪ್ರತಿಭಾವಂತ ವಿದ್ಯಾರ್ಥಿಗಳ ಒಂದು ದಾರಿಗೆ ಏಕೆ ನೀವು ಅಡ್ಡ ಬರುತ್ತೀರಿ? How do you close the doors? This is my argument. Do not close the Doors. ಒಬ್ಬ ಮನೆಯನ್ನು ಕಟ್ಟಬೇಕೆಂದು ಹೇಳಿ ಅವನ ಮನೆಯ ಪಕ್ಕದಲ್ಲಿ ಇರುವವನ ಒಂದು ಮನೆಯನ್ನು ಒಡೆದು ಈತನ ಮನೆಯನ್ನು ನಿರ್ಮಿಸತಕ್ಕ ಕಾರ್ಯ ಏತಕ್ಕೆ ಮಾಡಬೇಕು? ಹಾಸ್ಟಲ್ ಫೆಸಲಿಟಿ ಕೊಡಿ. ಸ್ಪೆಷಲ್ ಟ್ಯೂಷನ್ ಕೊಡಿ ನಾನು ಬೇಡ ಎಂದು ಹೇಳುವುದಿಲ್ಲ ಪ್ರತಿಭಾವಂತ ವಿದ್ಯಾರ್ಥಿಗಳೆಲ್ಲರೂ ಮುಂದೆ ಓದುವುದಕ್ಕೆ ಅವಕಾಶವನ್ನು ಮಾಡಿಕೊಡಿ ಇಲ್ಲಿ ಜಾತಿ ಮತ್ತು ಕೋಮನ್ನು ತರಬೇಡಿ ಎಂದು ನಾನು ಹೇಳುತ್ತೇನೆ. ನನಗೂ ಇಬ್ಬರು ಮಕ್ಕಳಿದ್ದಾರೆ ಒಬ್ಬ ಮಗ ತನ್ನ ತರಗತಿಯಲ್ಲಿ ೮೮ ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಂಡಿದ್ದಾನೆ. ಅದೇ ಇನ್ನೊಬ್ಬ ೮ ಹಾಗೂ ೯ನೆಯ ತರಗತಿಯಲ್ಲಿ ಎರಡು ಸಲ ಫೇಲ್ ಆಗಿದ್ದಾನೆ. ಇವರ ಪ್ರತಿಭೆಗೆ ಏಕೆ ಪುರಸ್ಕಾರವನ್ನು ಕೊಡುತ್ತಿಲ್ಲ ಕೇಳುತ್ತೇನೆ. ಸಮಯ ಬಹಳ ಕಡಿಮೆ ಇರುವುದರಿಂದ ಸೀಮಿತ ಸಮಯದಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಪ್ರತಿಭಾವಂತ ವಿದ್ಯಾರ್ಥಿಗೆ ಓದುವುದಕ್ಕೆ ಅವಕಾಶ ಇಲ್ಲ ಎಂದರೆ ಆತ ಆತ್ಮಹತ್ಯೆ ಮಾಡಿಕೊಂಡ ಹಾಗಲ್ಲವೆ? ನಾನು ಜಾಬ್ ಅಪರ್ಚ್ಯುನಿಟೀಸ್ ಬಗ್ಗೆ ಹೇಳುತ್ತಿಲ್ಲ. ಅವನಿಗೆ ವಿದ್ಯೆ ಕೊಡಿ. ಆಮೇಲೆ ನೀವು ಕೆಲಸದ ಬಗ್ಗೆ ಯಾವ ಒಂದು ಆಶ್ವಾಸನೆ ಕೊಡಬೇಡಿ. ದಯಮಾಡಿ ವಿದ್ಯಾರ್ಥಿ ಒಂದು

ಪದವಿ ತರಗತಿಗಳಲ್ಲಿ ಓದಿ ಪದವಿಯನ್ನು ಪಡೆದುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಅವನು ಏನು ತಪ್ಪನ್ನು ಮಾಡಿದ್ದಾನೆ. ಅವನಿಗೆ ಸೋಷಿಯಲ್ ಜಸ್ಟೀಸ್ ಕೊಡುವ ನೆವದಲ್ಲಿ ಸೋಷಿಯಲ್ ಇಂಜಸ್ಟೀಸ್ ಮಾಡುತ್ತಿದ್ದೀರಿ. This is my charge ಅವನು ಕಾಲೇಜು ಸೇರುವುದಕ್ಕೆ ಅವಕಾಶ ವಿಲ್ಲದಿದ್ದರೆ What is his fault? I would like to know this from the Govt. ಅವನು ಲಿಂಗಾಯಿತನಾಗಿ ಹುಟ್ಟಿದ್ದು ತಪ್ಪೇ? ಅವನು ಬ್ರಾಹ್ಮಣನಾಗಿ ಹುಟ್ಟಿದ್ದು ತಪ್ಪೇ? ಅವನು ಲಿಂಗಾಯಿತ ತಂದೆ ತಾಯಿಗಳ ಹೊಟ್ಟೆಯಲ್ಲಿ ಹುಟ್ಟಿದ್ದು ತಪ್ಪೇ? ಅವನಿಗೆ ವಿದ್ಯೆ ಕೊಡಿ. ಅವನು ಪಾಸಾಗಿ ಬಂದಮೇಲೆ ಅವನಿಗೆ ಕೆಲಸ ಕೊಡುವುದಿಲ್ಲವೆಂದು ಹೇಳಿ. ಓದುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ ಎನ್ನುವಂತಹ ವಾದ ಯಾವ ಜನತೆಯಲ್ಲಿಯೂ, ಯಾವ ದೇಶದಲ್ಲಿಯೂ ಬಂದಿಲ್ಲ. From all channels of education it is most absurd policy. Nowhere in the world such a policy has been adopted. Please examine and consult your educational experts in this matter. Personally, I am opposed to this.

ಇನ್ನು ಎಂಜಿನಿಯರಿಂಗ್ ಕಾಲೇಜ್ ಬಗ್ಗೆ ಒಂದೆರಡು ಮಾತುಗಳನ್ನು ಆಡಬೇಕಾಗಿದೆ, ಈ ಬಗ್ಗೆ ನಿಲುವಳಿ ಸೂಚನೆಯನ್ನೂ ಕೂಡ ಕಳುಹಿಸಿದ್ದೆ. ಈ ಕಾಲೇಜುಗಳಲ್ಲಿ ಒಂದು ವ್ಯಾಪಾರ ನಡೆಯುತ್ತಿದೆ. ಇದು ನಾಚಿಕೆಗೇಡಿನ ವಿಷಯ. ಎಲ್ಲಾ ಪ್ರೈವೇಟ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ಗಳು ಡೊನೇಷನ್ಸ್ ಎಂದು ಹೇಳಿಕೊಂಡು ಲೂಟಿ ಹೊಡೆಯುತ್ತಿದ್ದಾರೆ. ನಿಮಗೆ ಈ ಬಗ್ಗೆ ಮಾರಲ್ ರೈಟ್ಸ್ ಇಲ್ಲ ಎಂದು ಹೇಳುತ್ತೇನೆ. ನೀವು ನಿಗದಿ ಮಾಡಿಬಿಟ್ಟಿದ್ದೀರಿ, ೨೦,೦೦೦ ಸಾವಿರ ಡಾಲರ್ ಕೊಟ್ಟರೆ ಮೆಡಿಕಲ್ ಸೀಟು ೧೦,೦೦೦ ರೂಪಾಯಿ ಕೊಟ್ಟರೆ ಎಂಜಿನಿಯರಿಂಗ್ ಸೀಟು ಎಂದು ನಿಗದಿಪಡಿಸಿದ್ದೀರಿ ಕನಿಷ್ಟ ೬,೦೦೦ ರೂಪಾಯಿಯಾದರೂ ಎಂಜಿನಿಯರಿಂಗ್‌ಗೆ ಕೊಡಬೇಕಾಗುತ್ತದೆ. ಸರ್ಕಾರದವರೇ ಇಷ್ಟು ತೆಗೆದುಕೊಳ್ಳಿ ಎಂದು ಪರ್ಮಿಷನ್ ಕೊಟ್ಟಮೇಲೆ ಇನ್ನು ಖಾಸಗಿಯವರನ್ನು ಕೇಳುವವರು ಯಾರು? ನಾನು ಹೇಳು ತ್ತೇನೆ ಸರ್ಕಾರದವರು ದೊಡ್ಡ ದರೋಡೆಕೋರರು. You have permitted this looting of the people by these private management. ಎಂಜಿನಿಯರಿಂಗ್‌ಗೆ ಸೀಟ್ ತೆಗೆದು ಕೊಳ್ಳಬೇಕೆಂದರೆ ೨೦,೦೦೦ ರೂಪಾಯಿ ಕೊಡಬೇಕು. How does it suit your principles of Socialism? ಹಣವಂತರ ಮಕ್ಕಳು ಎಂ. ಬಿ. ಬಿ. ಎಸ್. ಡಾಕ್ಟರ್‌ಗಳಾಗಬೇಕು, ದೊಡ್ಡ ದೊಡ್ಡ ಎಂಜಿನಿಯರ್ಸ್ ಆಗಬೇಕು. ಬಡವರ ಮಕ್ಕಳು, ಹರಿಜನ ಗಿರಿಜನರ ಮಕ್ಕಳು, ಕೂಲಿ ಮಾಡುವವರ ಮಕ್ಕಳು, ರೈತರ ಮಕ್ಕಳು ಏನಾಗಬೇಕು? ಅವರು ಫ್ಯಾಕ್ಟರಿಗಳಲ್ಲಿ ಕೆಲಸ ಮಾಡಬೇಕು. How do you conceive this? ಇವತ್ತು ನನ್ನ ಮೈ ಉರಿಯುತ್ತಿದೆ. ಇವತ್ತು ನೀವು ಬುದ್ಧಿವಂತ ಮಕ್ಕಳಿಗೆ ಶಿಕ್ಷಣ ಕೊಡಿ. ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಡೊನೇಷನ್ಸ್ ತೆಗೆದುಕೊಳ್ಳುವುದನ್ನು ನಿಲ್ಲಿಸಿ. ಇವತ್ತು ಒಬ್ಬ ಬಾಗಲಕೋಟೆಯಲ್ಲಿ ವಾಸ ಮಾಡತಕ್ಕವನಿಗೆ ಸೂರತ್‌ಕಲ್‌ನಲ್ಲಿ ಸೀಟ್ ಕೊಡುತ್ತೀರಾ. ದಾವಣಗೆರೆಯ ವಿದ್ಯಾರ್ಥಿಗೆ ನೀವು ಬಾಗಲಕೋಟೆಯಲ್ಲಿ ಸೀಟ್ ಕೊಡುತ್ತೀರಾ. ಬೆಂಗಳೂರಿನವನಿಗೆ ಮೈಸೂರಿನಲ್ಲಿ ಸೀಟ್ ಕೊಡುತ್ತೀರಾ. I tried to collect information from the Director of Medical Education. ಅವರೂ ಪಾಪ ಏನು ಹೇಳುತ್ತಾರೆ. ಹುಡುಗರಿಗೇ ಚಾಯ್ಸ್ ಕೇಳಿದ್ದೇವೆಂದು ಹೇಳುತ್ತಾರೆ. ಒಬ್ಬ ಬಡವನಿಗೆ ಮೆರಿಟ್ ಮೇಲೆ ಮೆಡಿಕಲ್‌ಗೆ ಸೀಟ್ ಸಿಗುತ್ತದೆಂದು ಇಟ್ಟುಕೊಳ್ಳಿ. ಅವನು ಬೆಂಗಳೂರಿನವನಾಗಿದ್ದರೆ ಅವನಿಗೆ ಮೈಸೂರಿನಲ್ಲಿ ಸೀಟ್ ಕೊಡುತ್ತೀರಿ. ಅವನು ಅಲ್ಲಿ ಎರಡು ವರ್ಷ ಕೂಡ ಓದುವುದಕ್ಕೆ ಆಗುವುದಿಲ್ಲ. ಆತ ಇಲ್ಲಿಯೇ ಬೆಂಗಳೂರಿನಲ್ಲಿ ಇದ್ದಿದ್ದರೆ ಹಿಟ್ಟೋ ಗಂಜಿಯನ್ನು ತಿಂದುಕೊಂಡು ಜೀವನವನ್ನು ನಡೆಸಿ ವಿದ್ಯಾಭ್ಯಾಸ ವನ್ನು ಮುಂದುವರೆಸುತ್ತಿದ್ದ. ಅವನ ಒಂದು ಪರಿಸ್ಥಿತಿಯನ್ನು ನೋಡಿ ಅಲ್ಲಿನವರು ರ್‍ಯಾಗಿಂಗ್ ಮಾಡಿದ್ದಾರೆ. ಆದ್ದರಿಂದ ಇಂತಹ ಒಂದು ಪಾಲಿಸಿ ತಪ್ಪಬೇಕು. ವಿದ್ಯಾರ್ಥಿಯ ತಂದೆ ತಾಯಿಗಳು ಯಾವ ಊರಿನಲ್ಲಿ ಇರುತ್ತಾರೋ ಅಲ್ಲಿನ ಸಮೀಪದ ಕಾಲೇಜುಗಳಲ್ಲಿ ಸ್ಥಳಾವಕಾಶವನ್ನು ಮಾಡಿ ಕೊಡಬೇಕಾಗು ತ್ತದೆ. ಈ ರೀತಿಯ ಒಂದು ಸಿಸ್ಟಮ್‌ನ್ನು ರೂಪಿಸಬೇಕು.

ಇನ್ನು ಡಿ ಎಲ್.ಆರ್.ಸಿ. ಬಗ್ಗೆ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿ ಬಗ್ಗೆ ಒಂದೆರಡು ಮಾತು ಗಳನ್ನು ಹೇಳುತ್ತೇನೆ. ಈ ಒಂದು ಸಮಿತಿಗಳನ್ನು ನೇಮಕ ಮಾಡುವಾಗ ದಯವಿಟ್ಟು ರಾಜಕಾರಣಿ ಗಳಿಗೆ ಸ್ಥಾನವನ್ನು ಕೊಡಬೇಡಿ ಎಂದು ನಾನು ಕೇಳಿಕೊಳ್ಳುತ್ತೇನೆ. ಒಬ್ಬನಿಗೆ ಈ ಸಮಿತಿಯಲ್ಲಿ ಸ್ಥಾನ

ಸಿಕ್ಕರೆ ಅವನಿಗೆ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಸ್ಥಾನ ಸಿಕ್ಕಿದಷ್ಟು ತೃಪ್ತಿ ಆಗುತ್ತದೆ ಸ್ವಾಮಿ. ಏನು ಸ್ವಾಮಿ ಒಂದು ಟೀಚರ್ ಪೋಸ್ಟ್ ಕೊಡಲು ಐದು ಸಾವಿರ, ಆರು ಸಾವಿರ ರೂಪಾಯಿಗಳನ್ನು ತೆಗೆದು ಕೊಳ್ಳುತ್ತಾರೆ. ಆದ್ದರಿಂದ ದಯಮಾಡಿ ರಾಜಕೀಯ ವ್ಯಕ್ತಿಗಳನ್ನು ಇವರಲ್ಲಿ ಸೇರಿಸಬೇಡಿ ಎಂದು ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ. ವಿದ್ಯಾ ಕ್ಷೇತ್ರದಲ್ಲಿ ಪ್ರತಿಭೆ ಇರತಕ್ಕಂತಹವರನ್ನು ಇಲ್ಲಿ ನೇಮಕ ಮಾಡಿ. Speed up the recruitment of the teachers. Please do not include the politicians and the professional fellows in the DLRC. Because they will loot. ಇಲ್ಲಿ ಟೀಚರ್ಸ್ ನೇಮಕ ಮಾಡುವಾಗ ದಕ್ಷರನ್ನೇ ನೇಮಿಸಬೇಕಾಗು ತ್ತದೆ. ಯಾರೂ ದಕ್ಷರೇ ಇಲ್ಲ ಎಂದರೆ ಆಗ ಬೇರೆ ಮೆಥೆಡ್ ಹುಡುಕಬೇಕಾಗುತ್ತದೆ. ಆದ್ದರಿಂದ ಇರುವ ವ್ಯವಸ್ಥೆಯಲ್ಲಿಯೇ ಸಮಸ್ಯೆಯನ್ನು ಬಿಡಿಸಬೇಕಾಗುತ್ತದೆ. ಪರ್ಯಾಯ ವ್ಯವಸ್ಥೆ ಮಾಡುವ ಬದಲು ಇರುವ ವ್ಯವಸ್ಥೆಯಲ್ಲಿಯೇ ಸುಧಾರಣೆ ಮಾಡಬಹುದೆಂದರೆ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿ ಗಳಿಗೆ ಒಳ್ಳೆಯ ವ್ಯಕ್ತಿಗಳನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಲೈಬ್ರರಿಗಳ ಬಗ್ಗೆ ಹೇಳಬೇಕೆಂದರೆ, ರಾಜಾರಾಂ ಮೋಹನರಾಯ್ ಲೈಬ್ರರಿಗೆಂದು ಫೌಂಡೇಷನ್ ಹಾಕಿ ೩೨ ಲಕ್ಷ ರೂಪಾಯಿ ತೆಗೆದುಕೊಂಡು ಇಷ್ಟು ಪುಸ್ತಕ ತೆಗೆದುಕೊಂಡವೆಂದು ತೋರಿಸಿ ಕೊನೆಗೆ ಲೈಬ್ರರಿಯೂ ಇಲ್ಲದೇ ಎಷ್ಟು ಲಕ್ಷ ರೂಪಾಯಿ ಹೋಯಿತು ಸ್ವಾಮಿ? ಆ ದುಡ್ಡನ್ನು ತಿಂದು ನೀರು ಕುಡಿದುಬಿಟ್ಟರು. ಈ ಬಗ್ಗೆ ಸದನದಲ್ಲಿ ಪ್ರಶ್ನೆಯನ್ನೂ ಹಾಕಲಾಗಿತ್ತು. ಹೀಗಾದರೆ ಹೇಗೆ?

ಇನ್ನು ಕೊನೆಯದಾಗಿ ಪಾಲಿಸಿ ಡಿಸಿಷನ್ ಬಗ್ಗೆ ಹೇಳಬೇಕೆಂದರೆ ನೀವು ೭ನೇ ತರಗತಿಯ ಪಬ್ಲಿಕ್ ಪರೀಕ್ಷೆಯನ್ನು ತೆಗೆದುಹಾಕಿದಿರಿ. ಮೊದಲ ವರ್ಷದ ಪಿ.ಯು.ಸಿ. ಪರೀಕ್ಷೆಯನ್ನು ತೆಗೆದು ಹಾಕುತ್ತೀರಿ ಆ ನಂತರ ಸೇರಿಸುತ್ತೀರಿ. ತಾವು ೭ನೇ ತರಗತಿಯ ಪಬ್ಲಿಕ್ ಪರೀಕ್ಷೆಯನ್ನು ತೆಗೆದುಹಾಕಿದ್ದರಿಂದ ಲಕ್ಷಾಂತರ ವಿದ್ಯಾರ್ಥಿಗಳಿಗೆ ತೊಂದರೆಯಾಯಿತು. ನೀವು ಈ ಬಗ್ಗೆ ಪ್ರಯೋಗ ನಡೆಸುವುದಕ್ಕೆ ಹೋಗ ಬೇಡಿ. ಒಂದು ಪದ್ಧತಿಯನ್ನು ತಂದಮೇಲೆ ಸುಮಾರು ೧೦ ವರ್ಷಗಳ ಕಾಲವಾದರೂ ಅದನ್ನು ಮುಂದುವರೆಸಿಕೊಂಡು ಹೋಗುವುದು ಒಳ್ಳೆಯದು. ಮೊದಲ ಪಿ.ಯು.ಸಿ. ಪರೀಕ್ಷೆ ರದ್ದು ಮಾಡಿದ್ದ ರಿಂದ ಎಷ್ಟು ಕಾಂಪ್ಲಿಕೇಷನ್ ಬಂದಿದೆ ಎಂಬುದು ನಿಮಗೆ ಗೊತ್ತೇ?

ಶ್ರೀ ಜಿ. ಬಿ. ಶಂಕರ್‌ರಾವ್.—ನಾವು ಮಾಡಿದ್ದಲ್ಲ.

ಶ್ರೀ ಮಳ್ಳೂರು ಆನಂದರಾವ್.—ನೀವು ಎಂದರೆ ಕಮಿಟಿ ಮಾಡಿದ್ದು. ಈ ಬಗ್ಗೆ ತಾವು ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ ಆದ್ದರಿಂದ ನಾನು ಹೇಳುತ್ತಿದ್ದೇನೆ. ಅದೇನೋ ವಕೇಷನಲೈಸೇಷನ್ ಆಫ್ ಎಜ್ಯುಕೇಷನ್ ಮಾಡಬೇಕೆಂದು ಹೊರಟಿದ್ದೀರಿ. ಈ ಒಂದು ಎಜುಕೇಷನ್ ನಿಂದ ಎಷ್ಟು ಕೋಟಿ ಹಣ ಪೋಲಾಗಿದೆ ಎಂಬುದರ ಬಗ್ಗೆ ಏನಾದರೂ ನೀವು ರಿಪೋರ್ಟನ್ನು ತರಿಸಿದ್ದೀರಾ? ದಯ ಮಾಡಿ ಸ್ವಲ್ಪ ಈ ಬಗ್ಗೆ ಕಂಳಿತು ಯೋಚನೆ ಮಾಡಿ, ಸ್ಟಡಿ ಮಾಡಿ ಯಾವುದೇ ಕಾರ್ಯಕ್ರಮ ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ. ಆದಷ್ಟು ಮಟ್ಟಿಗೆ ಶಿಕ್ಷಣ ಸುಧಾರಣೆಯಾಗಲಿ ಎಂದು ನಾನು ಹೇಳು ತ್ತೇನೆ, ಇಷ್ಟು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ರಂಗನಾಥ್‌ರವರು ಎತ್ತಿದ ಆಕ್ಷೇಪಣೆಯ ಬಗ್ಗೆ ಈ ಮನೆಯ ಕರ್ತವ್ಯವೇನು ಎನ್ನುವುದನ್ನು ಓದುತ್ತೇನೆ.

"ಅಧ್ಯಕ್ಷರಿಗೆ ಹಾಗೂ ಸಂಬಂಧಪಟ್ಟ ಮಂತ್ರಿಗಳಿಗೆ ಸದಸ್ಯರು ಪೂರ್ವಭಾವಿ ಸೂಚನೆ ಯನ್ನು ನೀಡಿರಬೇಕು.

ಸಾಮಾನ್ಯವಾಗಿ ಸದಸ್ಯರ ವಿರುದ್ಧ ಮಂತ್ರಿಗಳ ವಿರುದ್ಧ ಅಧಿಕಾರಿಗಳ ವಿರುದ್ಧ ಹಾಗೂ ಸಾರ್ವಜನಿಕರ ವಿರುದ್ಧ ಆರೋಪಗಳನ್ನು ಮಾಡಲಾಗುತ್ತದೆ.

ಸದಸ್ಯರೊಬ್ಬರು ಮತ್ತೊಬ್ಬ ಸದಸ್ಯರ ವಿರುದ್ಧ ವೈಯಕ್ತಿಕ ಆರೋಪಣೆಯನ್ನು ಮಾಡತಕ್ಕತೆ ೨೮೮ (೨) ನೇ ನಿಯಮದಲ್ಲಿ ಅವಕಾಶವಿದ್ದಾಗ್ಯೂ ಚರ್ಚೆಯ ನಡುವೆ ಇತರ ಸದಸ್ಯರ ವಿರುದ್ಧ ಹಲವು ಬಾರಿ ವೈಯಕ್ತಿಕ ಆರೋಪ ಮಾಡುವುದನ್ನು ನಾವು ಕಾಣು ತ್ತೇವೆ. ಇಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಸದಸ್ಯರಿಗೆ ತಕ್ಷಣ ಅಥವಾ ಸಂದರ್ಭ

ಮೊದಲನೆಯದಾಗಿ ತನ್ನ ವಿರುದ್ಧ ಮಾಡಲಾದ ಆರೋಪಗಳ ಬಗ್ಗೆ ಉತ್ತರ ನೀಡುವ ಅವಕಾಶ ಸಿಗುತ್ತದೆ. ಅಲ್ಲದೆ ಇದರ ವಿಷಯವು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ್ದಲ್ಲಿ ಆತನು ಮಾಡಿರುವ ಆರೋಪಗಳನ್ನು ವಾಪಸು ಪಡೆಯುವಂತೆ ಅಧ್ಯಕ್ಷರು ಆರೋಪ ಮಾಡಿರುವ ಸದಸ್ಯರಿಗೆ ತಿಳಿಸಬಹುದು. ಆರೋಪಗಳು ಅವಮಾನಕರವಾಗಿದ್ದಲ್ಲಿ ಅಧ್ಯಕ್ಷರು ಅವುಗಳನ್ನು ಕಲಾಪದ ವರದಿಯಿಂದ ತೆಗೆದುಹಾಕಬಹುದು ಈ ಸಂದರ್ಭದಲ್ಲಿಯೂ ಆರೋಪಗಳನ್ನು ಮಾಡುವುದಕ್ಕೆ ಮೊದಲು ಪೂರ್ವಭಾವಿ ಸೂಚನೆಯನ್ನು ಕೊಡುವುದು ಸೂಕ್ತವಾಗಿದೆ.

ಮಂತ್ರಿಯೊಬ್ಬರ ಅಧೀನದಲ್ಲಿರುವ ಇಲಾಖೆಯ ಬಗ್ಗೆ ಸದಸ್ಯರು ಅವರನ್ನೂ ಟೀಕಿಸಬಹುದು ಮತ್ತು ಇಲಾಖೆಯ ಆಗು ಹೋಗುಗಳ ಬಗ್ಗೆಯೂ ಕಟುವಾಗಿ ಟೀಕಿಸಬಹುದು. ಇಂತಹ ಸಂದರ್ಭದಲ್ಲಿ ಪೂರ್ವಭಾವಿ ಸೂಚನೆಯ ಅವಶ್ಯಕತೆ ಇರುವುದಿಲ್ಲ. ಆದರೆ ಮಂತ್ರಿಗಳಿಗೆ ಸಂಬಂಧಿಸಿದ ಇಲಾಖೆಯ ಆಗುಹೋಗುಗಳಿಗೆ ಪೂರ್ಣವಾಗಿ ಸಂಬಂದಿಸದಂತಿದ್ದು ಅವರ ಮೇಲೆ ಆರೋಪ ಮಾಡಬೇಕಾದಲ್ಲಿ ಆ ಬಗ್ಗೆ ಅಧ್ಯಕ್ಷರಿಗೆ ಹಾಗೂ ಸಂಬಂಧಪಟ್ಟ ಮಂತ್ರಿಗಳಿಗೆ ಪೂರ್ವಭಾವಿ ಸೂಚನೆಯನ್ನು ನೀಡುವುದು ಸೂಕ್ತವಾಗಿದೆ.

SRI M. C. NANAIAH.—Sir, the Hon' ble Health Minister made a policy statement regarding allotment of seats and capitation fees. The press people have been waiting since morning for the copies for wide publication in the State. If copies are not made available to them I will have to say that this is nothing but bankruptcy of the Government. This shows that they are treating the press with scant respect. In spite of the directions given by the Speaker copies have not been given to them. Should not the press give publicity to the policy statement of the Government? Kindly see that it is given.

MR. SPEAKER.—Arrangements have been made to supply the copies of the statement when the House meets again at 3 P.M. The House now stands adjourned and will meet at 3. 00 P. M.

(The House adjourned at Firty-five minutes past One of the Clock to meet again at Three of the Clock.)

(The House re-assembled at Fifteen minutes past Three of the Clock),

(MR SPEAKER in the Chair)

†ಶ್ರೀ ಪಿ. ಬಿ. ಭಾವಿ. (ಮುಂಡರಗಿ).—ಮಾನ್ಯ ಅಧ್ಯಕ್ಷರೆ, ನಮ್ಮ ಶಿಕ್ಷಣ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಂತಹ ಬೇಡಿಕೆಗಳಿಗೆ ನನ್ನ ಸಂಪೂರ್ಣವಾದ ಬೆಂಬಲವನ್ನು ಸೂಚಿಸುತ್ತಾ ಈ ಶಿಕ್ಷಣ ಖಾತೆಯಲ್ಲಿ ಇರತಕ್ಕಂಥ ಕೆಲವು ನ್ಯೂನತೆಗಳ ಬಗ್ಗೆ ಕೆಲವು ಸಲಹೆಗಳನ್ನು ಕೊಡಲು ಬಯಸುತ್ತೇನೆ. ಅಧ್ಯಕ್ಷರೇ ಪ್ರಾಮುಖ್ಯವಾಗಿ ಹೇಳಬೇಕಾದರೆ ನಮ್ಮ ದೇಶದ ಪ್ರಗತಿಗೆ ಅತ್ಯವಶ್ಯಕವಾಗಿ ಬೇಕಾಗಿರುವ ಈ ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯತೆ ಕೊಡುವುದು ಬಹಳ ಯೋಗ್ಯವಾದುದು. ಎಂದು ಹೇಳುತ್ತೇವೆ. ಮೊದಲನೆಯದಾಗಿ ದೇಶದ ಆರ್ಥಿಕ ಪರಿಸ್ಥಿತಿಗೆ ಪ್ರಾಮುಖ್ಯತೆ ಕೊಟ್ಟರೂ ಸಹ ವಿದ್ಯಾಭ್ಯಾಸ ಇಲಾಖೆಗೆ ಗಮನ ಕೊಡಬೇಕು. ಏಕೆಂದರೆ ಈ ವಿದ್ಯಾಭ್ಯಾಸದ ಮುಖಾಂತರವಾಗಿ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬಹುದು. ಈ ವಿದ್ಯಾಭ್ಯಾಸದ ಸಲುವಾಗಿ ಮಾನ್ಯ ವಿದ್ಯಾಮಂತ್ರಿಗಳು ಈ ಸಾಲಿನಲ್ಲಿ ಖರ್ಚು ಮಾಡಲಿಕ್ಕಾಗಿ ಸುಮಾರು [illegible] ಕೋಟಿ ರೂಪಾಯಿಯ ಒಂದು ಬೇಡಿಕೆಯನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಬಹುಶಃ ರಾಜ್ಯದಲ್ಲಿ ಈ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುವಷ್ಟು ಹಣ ಬೇರೆ

ಯಾವ ಇಲಾಖೆಯಲ್ಲೂ ಇಲ್ಲವೆಂದು ಕಾಣುತ್ತದೆ. ಕೆಲವೊಂದು ಅಂಕಿ ಅಂಶಗಳನ್ನು ಕಳೆದ ಸಾಲಿನ ಬಾಬ್ತು ಕೊಟ್ಟಿದ್ದಾರೆ. ಆ ಪ್ರಕಾರವಾಗಿ ನಮ್ಮ ರಾಜ್ಯದಲ್ಲಿ ೨,೫೫೪ ಫ್ರೀ ಪ್ರೈಮರಿ ಶಾಲೆಗಳು ಇವೆ ಪ್ರೈಮರಿ ಶಾಲೆಗಳು ೩೪,೨೭೯ ಇವೆ. I personally feel like congratulating the Education Minister because he has granted two high schools and one college to my constituency. ಇದೇ ರೀತಿ ಎಲ್ಲಾ ಕಡೆಗೂ ಕೊಟ್ಟಿದ್ದಾರೆಂದು ಭಾವಿಸಿದ್ದೇನೆ. ಹೋದವರ್ಷ ಹೆಚ್ಚಿಗೆ ಪ್ರೈವೇಟ್ ಹೈಸ್ಕೂಲುಗಳನ್ನು ಕೊಟ್ಟಿದ್ದಾರೆ.

ಶ್ರೀ ಎಚ್. ಡಿ. ಚೌಡಯ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಭಾವಿಯವರು ಅವರ ಕ್ಷೇತ್ರಕ್ಕೆ ೨ ಹೈಸ್ಕೂಲು ಮತ್ತು ಒಂದು ಕಾಲೇಜು ಕೊಟ್ಟಿದ್ದಾರೆಂದರೆ ಎಲ್ಲಾ ಕಡೆಗೂ ಕೊಟ್ಟಿದ್ದಾರೆಯೋ ಅನ್ನುವ ಅರ್ಥವೆ? ಆ ಬಗ್ಗೆ ನನಗೆ ಅವಕಾಶ ಬಂದಾಗ ಹೇಳುತ್ತೇನೆ.

SRI V. B. BHAVI.—This has been granted only by the presant Education Minister to my constituency, wich had been neglected for decades. ನಮ್ಮ ಕಾನ್ಸಿಟ್ಯೂಯೆನ್ಸಿಗೆ ಇಲ್ಲಿಯವರೆಗೆ ಸಿಕ್ಕಿರಲಿಲ್ಲ, ಈಗ ಸಿಕ್ಕಿದೆ ಅದಕ್ಕೆ ಹೇಳಿದೆ. ಈ ಸಾರಿ ೮೫ ಪ್ರೈವೇಟ್ ಹೈಸ್ಕೂಲು, ೨೭ ಗೌರ್ನಮೆಂಟ್ ಹೈಸ್ಕೂಲು ಕೊಟ್ಟಿದ್ದಾರೆ. ಪ್ರೈವೇಟ್ ಕಾಲೇಜು ಎಂದರೆ ೨ ಬಿ. ಎಡ್ ಕಾಲೇಜು ಸೇರಿ ಕೊಟ್ಟಿದ್ದಾರೆ ಆದರೆ ಇದನ್ನು ಕೊಟ್ಟಿದ್ದಕ್ಕೆ ಮಾನ್ಯ ವಿದ್ಯಾ ಸಚಿವರನ್ನು ಅಭಿನಂದಿಸುತ್ತೇನೆ. ಬರೀ ಹೈಸ್ಕೂಲು ಮತ್ತು ಕಾಲೇಜು ಕೊಟ್ಟರೆ ಪ್ರಯೋಜನವಿಲ್ಲ. ಅದೇ ಸಂದರ್ಭದಲ್ಲಿ ಅದರ ಒಂದು ಗುಣಮಟ್ಟವನ್ನು ಕಾಪಾಡುವಂತ ಶಿಕ್ಷಣ ಸುಧಾರಣೆಯಾಗಬೇಕು, ಅದರಲ್ಲೂ ಪ್ರಾಥಮಿಕ ಶಿಕ್ಷಣದಲ್ಲಿ ಪ್ರಥಮವಾಗಿ ಬರಬೇಕು ಎಂದು ಮಾನ್ಯ ವಿದ್ಯಾ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಹಿಂದೆ ನಾವು ಓದುವಾಗ ಮಹಾತ್ಮಾ ಗಾಂಧೀಜಿಯವರ ಜೀವನ ಚರಿತ್ರೆಯನ್ನು ಪಠ್ಯಪುಸ್ತಕದಲ್ಲಿ ಇಟ್ಟಿದ್ದರು, ಅಂಥಾ ಚರಿತ್ರೆಯನ್ನು ಓದುವುದರಿಂದ ಮಕ್ಕಳ ಮನಸ್ಸಿನ ಮೇಲೆ ಒಂದು ಒಳ್ಳೆಯ ಪರಿಣಾಮವನ್ನುಂಟು ಮಾಡುತ್ತದೆ. ಪ್ರಾಥಮಿಕ ಶಿಕ್ಷಣದಲ್ಲಿ ನಾವು ಒಳ್ಳೆಯ ಪ್ರಭಾವವನ್ನು ಬೀರುವಂತಹ ಒಳ್ಳೆಯ ಗುಣವನ್ನು ಹೊಂದುವಂತಹ, ಒಳ್ಳೆಯ ಸ್ವಭಾವವನ್ನು ಕಲಿತುಕೊಳ್ಳುವಂತಹ ಪಠ್ಯ ಪುಸ್ತಕಗಳನ್ನು ಇಟ್ಟರೆ ಮಕ್ಕಳು ಅದನ್ನು ಓದಿ ಕೊನೆಯವರೆಗೂ ಅದೇ ಒಂದು ಗುಣವನ್ನು ಇಟ್ಟುಕೊಂಡು ಬರುತ್ತಾರೆ, ಅದಕ್ಕಾಗಿ ಆ ಕಡೆಗೆ ಮಾನ್ಯ ಸಚಿವರ ಗಮನವನ್ನು ನಾನು ಸೆಳೆಯುತ್ತೇನೆ; ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮಕ್ಕಳ ಮನಸ್ಸಿನ ಮೇಲೆ ಯಾವ ರೀತಿ ಪ್ರಭಾವವನ್ನು ಬೀರುವಂತಹ ಯಾವ ರೀತಿಯ ಗುಣಮಟ್ಟದ ಶಿಕ್ಷಣವನ್ನು ಕೊಡುತ್ತೇವೆಯೋ ಅದೇ ರೀತಿಯ ಶಿಕ್ಷಣ ಮಕ್ಕಳಿಗೆ ಕೊನೆಯವರೆಗೂ ಜೀವನ ಪರ್ಯಂತವೂ ಬರುತ್ತದೆ, ಅದಕ್ಕಾಗಿ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಣೆಯಾಗಬೇಕು. ಆದಕಾರಣ ಇದರ ಬಗ್ಗೆ ಮಾನ್ಯ ಸಚಿವರು ಒಂದು ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕು.

ನಮ್ಮ ರಾಜ್ಯದಲ್ಲಿ ಅನೇಕ ಕಡೆ ಪ್ರಾಥಮಿಕ ಶಾಲೆಗಳಿಗೆ ಸರಿಯಾದಂತಹ ಕಟ್ಟಡಗಳಿಲ್ಲ. ಇರತಕ್ಕ ಶಾಲೆಗಳಿಗೂ ಕೂಡ ಫರ್ನೀಚರ್ ಇಲ್ಲ. ಮಕ್ಕಳನ್ನು ನೆಲದ ಮೇಲೆ ಕೂರಿಸಿ ಶಿಕ್ಷಣ ಕೊಡುತ್ತಿದ್ದಾರೆ. ಹುಡುಗರಿಗೆ ಒಂದು ಶಿಸ್ತು ಮತ್ತು ಸಂಯಮವನ್ನು ಕಲಿಸಬೇಕಾದರೆ ಮೊದಲು ಎಲ್ಲಾ ಪ್ರಾಥಮಿಕ ಶಾಲೆಗಳಿಗೂ ಕಟ್ಟಡಗಳನ್ನು ಒದಗಿಸಿ ಅವುಗಳಿಗೆ ಬೇಕಾದಂತಹ ಫರ್ನೀಚರ್‌ಗಳನ್ನು ಒದಗಿಸಬೇಕು. ಮತ್ತು ಶಿಕ್ಷಕರ ಮೇಲೆ ಸಂಬಂಧಪಟ್ಟ ವಿದ್ಯಾಧಿಕಾರಿಗಳ ಹತೋಟಿ ಇರಬೇಕು. ನನಗೆ ತಿಳಿದ ಮಟ್ಟಿಗೆ ಪ್ರೈವೇಟ್ ಏಡೆಡ್ ಸ್ಕೂಲ್‌ಗಳಿಗೆ ೧೦೦ಕ್ಕೆ ೯೫ರಷ್ಟು ಗ್ರಾಂಟನ್ನು ಸರ್ಕಾರದವರು ಕೊಡುತ್ತಿದ್ದಾರೆ. ಇನ್ನು ಉಳಿದ ೫ ಪರ್ಸೆಂಟ್ ಅನ್ನು ಮಾತ್ರ ಖಾಸಗೀ ಸಂಸ್ಥೆಗಳನ್ನು ನಡೆಸತಕ್ಕವರು ಕಾಂಟ್ರಿಬ್ಯೂಟ್ ಮಾಡುತ್ತಿದ್ದಾರೆ. ಆದ್ದರಿಂದ ಪ್ರೈವೇಟ್ ಏಡೆಡ್ ಸ್ಕೂಲ್‌ಗಳಲ್ಲಿ ಕೆಲಸ ಮಾಡತಕ್ಕ ಶಿಕ್ಷಕರನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಸರ್ಕಾರದವರು ಯೋಗ್ಯ ಕ್ರಮ ತೆಗೆದುಕೊಳ್ಳಬೇಕು. ಶಾಲೆಗಳಲ್ಲಿ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಬೇಕು. ಖಾಸಗೀ ಶಾಲೆಗಳನ್ನು ನಡೆಸತಕ್ಕವರು ಯಾವುದೋ ಒಂದು ಸಂದಿಯಲ್ಲಿ, ಲಿಕ್ಕರ್ ಷಾಪ್ ಪಕ್ಕದಲ್ಲಿ ಕೆಟ್ಟ ಪರಿಸರದಲ್ಲಿ ಶಾಲೆಗಳನ್ನು ತೆರೆಯುವುದನ್ನು ತಪ್ಪಿಸಿ ಒಳ್ಳೆಯ ಪರಿಸರದಲ್ಲಿ ಶಾಲೆಗಳನ್ನು ತೆರೆಯುವಂತೆ ಸಂಬಂಧಪಟ್ಟವರಿಗೆ ಸೂಚನೆಯನ್ನು ಕೊಡಬೇಕು. ಮತ್ತು ಶಾಲೆಗಳಲ್ಲಿ ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಿ ಮಕ್ಕಳಿಗೆ ಶಿಕ್ಷಣ

ವನ್ನು ಕೊಡಬೇಕು. ಮಕ್ಕಳು ನೈತಿಕ ಮೌಲ್ಯಗಳನ್ನು ಕಲಿಯುವಂತಹ ಪಠ್ಯಪುಸ್ತಕಗಳನ್ನು ಮಕ್ಕಳಿಗೆ ತರಗತಿಗಳಲ್ಲಿ ಇಡಬೇಕು. ಈಗ ಮಕ್ಕಳಿಗೆ ಶಾಲೆಗಳಲ್ಲಿ ಇರತಕ್ಕ ಪಠ್ಯಪುಸ್ತಕಗಳನ್ನು ಮೇಲು ನೋಟಕ್ಕೆ ನೋಡಿದರೂ ಕೂಡ ಅವುಗಳಲ್ಲಿ ವ್ಯವಹಾರಿಕ ಜ್ಞಾನ ಎಳ್ಳಷ್ಟೂ ಇರುವುದಿಲ್ಲ. ಈಗ ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ ಮಲಪ್ರಭಾ ಯೋಜನೆಯಲ್ಲಿ ಒಬ್ಬರು ಸ್ಪೆಷಲ್ ಡೆಪ್ಯುಟಿ ಕಮಿಷನರ್ ಇದ್ದಾರೆ. ಅವರಿಗೆ ವ್ಯವಹಾರಿಕ ಜ್ಞಾನ ಏನೂ ಇಲ್ಲ, ವ್ಯವಹಾರಿಕ ಜ್ಞಾನ ಅವರಿಗೆ ಶೂನ್ಯ. ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ವ್ಯವಹಾರಿಕ ಜ್ಞಾನ ದೊರೆಯದಿದ್ದರೆ ಮುಂದೆ ಅವರಿಗೆ ನೌಕರಿಯೂ ಸಿಕ್ಕದೆ ಬೇರೆ ಎಲ್ಲೂ ಕೂಡ ಹೋಗದಂತಹ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ ಮನುಷ್ಯ ಜೀವನದಲ್ಲಿ ಮುಂದುವರಿಯಬೇಕಾದರೆ ವ್ಯವಹಾರಿಕ ಮತ್ತು ನೈತಿಕ ಮೌಲ್ಯಗಳನ್ನು ಒಳಗೊಂಡ ಪಠ್ಯಪುಸ್ತಕಗಳನ್ನು ಮಕ್ಕಳಿಗೆ ಶಾಲೆಗಳಲ್ಲಿ ಇಡುವಂತಹ ವ್ಯವಸ್ಥೆಯಾಗಬೇಕು. ಆದ್ದರಿಂದ ಇದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ಯೋಗ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಇನ್ನು ಇವೊತ್ತು ಬೆಳಿಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಮಳ್ಳೂರ್ ಆನಂದರಾವ್ ಅವರು ಕೆಲವು ಶಿಕ್ಷಣ ಸಂಸ್ಥೆಗಳ ಬಗ್ಗೆ ಮಾತನಾಡಿ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರದ ಹಣ ಹೇಗೆ ಸೋರಿ ಹೋಗುತ್ತದೆ ಎಂಬುದನ್ನು ಎತ್ತಿ ತೋರಿಸಿ ಎಲ್ಲಾ ವಿಷಯಗಳನ್ನೂ ಸಭೆಯ ಮುಂದೆ ಇಟ್ಟರು. ಇದರ ಬಗ್ಗೆ ಮಾನ್ಯ ಸಚಿವರೂ ಸಹ ತೀವ್ರವಾಗಿ ಆಲೋಚನೆ ಮಾಡಬೇಕು, ಶ್ರೀಮಾನ್ ಮಳ್ಳೂರ್ ಆನಂದರಾವ್ ಅವರು ಹೇಳದೆ ಇದ್ದಂತಹ ಕೆಲವು ಸಂಗತಿಗಳನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಬೆಂಗಳೂರು ಸಿಟಿಯಲ್ಲಿ ಗಾಯತ್ರಿನಗರದಲ್ಲಿರುವ ಸರಸ್ವತಿ ವಿದ್ಯಾನಿಕೇತನ ಪ್ರೊಪ್ರೈಟರಿಗೆ ಅಸ್ತಿತ್ವದಲ್ಲಿ ಇಲ್ಲದೆ ಇರತಕ್ಕ ೧೪ ಸ್ಕೂಲ್‌ಗಳಿಗೆ ಸುಮಾರು ೯೦ ಸಾವಿರ ರೂಪಾಯಿಗಳ ಗ್ರಾಂಟ್ ಅನ್ನು ಸರ್ಕಾರದವರು ರಿಲೀಜ್ ಮಾಡಿದ್ದಾರೆ. ಅಸ್ತಿತ್ವದಲ್ಲಿ ಇಲ್ಲದೆ ಇರತಕ್ಕ ೧೪ ಸ್ಕೂಲ್‌ಗಳಿಗೆ ೧೯೬೯ರಿಂದ ೧೯೭೨ ವರೆಗೆ ೯೦ ಸಾವಿರ ರೂಪಾಯಿಗಳ ಗ್ರಾಂಟ್ ಕೊಟ್ಟಿದ್ದಾರೆ. ಅದರ ಜೊತೆಗೆ ಅಸ್ತಿತ್ವದಲ್ಲಿ ಇಲ್ಲದೆ ಇರತಕ್ಕ [illegible] ಸಾವಿರ ನರ್ಸರಿ ಸ್ಕೂಲ್‌ಗಳಿಗೆ ೧೯೬೩ನೇ ಇಸವಿಯಿಂದ ೧೯೬೯ನೇ ಇಸವಿಯವರೆಗೆ ೬ ಲಕ್ಷ ೮೧ ಸಾವಿರ ರೂಪಾಯಿಗಳ ಗ್ರಾಂಟ್ ಅನ್ನು ಸರ್ಕಾರದವರು ಕೊಟ್ಟಿದ್ದಾರೆ ಈ ಹಣವನ್ನು ಹಿಂದೆ ಇದ್ದ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರು ಕೊಟ್ಟಿದ್ದಾರೆ. ಇದನ್ನು ಶ್ರೀಮಾನ್ ಮಳ್ಳೂರ್ ಆನಂದರಾವ್ ಅವರೂ ಹೇಳಿದ್ದಾರೆ. ಲೆಜಿಸ್ಲೇಟೀವ್ ಕೌನ್ಸಿಲ್ ಎಲೆಕ್ಷನ್ನಿಗೆ ನಿಲ್ಲಲು ರಾಜೀನಾಮೆಯನ್ನು ಕೊಟ್ಟ ಡಿಡಿಪಿಐ ಅವರೂ ಇದರಲ್ಲಿ ಭಾಗಿಯಾಗಿದ್ದಾರೆ. ಶ್ರೀಮಾನ್ ಸುಬ್ಬಯ್ಯಶೆಟ್ಟಿಯವರು ವಿದ್ಯಾಮಂತ್ರಿಗಳಾಗಿದ್ದಾಗ ಈ ಡಿಡಿಪಿಐ ಅವರನ್ನೂ ಸಸ್ಪೆನ್‌ಷನ್‌ನಲ್ಲಿಟ್ಟಿದ್ದರು. ಎಇಓ ಅವರನ್ನೂ ಸಸ್ಪೆನ್‌ಷನ್‌ನಲ್ಲಿಟ್ಟಿದ್ದರು. ಈ ಅಧಿಕಾರಿಗಳನ್ನು ಸಸ್ಪೆನ್‌ಷನ್‌ನಲ್ಲಿಟ್ಟಿದ್ದರೂ ಕೂಡ ಆ ಸ್ಕೂಲ್‌ಗಳಿಗೆ ಮತ್ತೆ ಗ್ರಾಂಟ್ ಕೊಟ್ಟಿದ್ದಾರೆ. ಈ ಎಲ್ಲಾ ಸಂಗತಿಗಳೂ ಸರ್ಕಾರದ ಗಮನಕ್ಕೆ ಬಂದಿದ್ದರೂ ಕೂಡ ಆ ಸಂಸ್ಥೆಗಳ ಮೇಲೆ ಸರ್ಕಾರದವರು ಏತಕ್ಕೆ ಯೋಗ್ಯ ಕ್ರಮ ತೆಗೆದುಕೊಂಡಿಲ್ಲ? ಇದರ ಬಗೆ ಮಾನ್ಯ ವಿದ್ಯಾಮಂತ್ರಿಗಳು ಈ ಚರ್ಚೆಗೆ ಉತ್ತರ ಕೊಡುವಾಗ ತಿಳಿಸಬೇಕು.

ಇನ್ನೊಂದು ಸಂಗತಿ ಏನೆಂದರೆ ಬಸವನಗುಡಿಯಲ್ಲಿ ಕಮಲ ನೆಹರು ಮಕ್ಕಳ ಮಂದಿರ ಎನ್ನುವ ಒಂದು ವಿದ್ಯಾ ಸಂಸ್ಥೆ ಇದೆ. ಇದರ ಮೇಲೆಯೂ ಸಾಕಷ್ಟು ಆಪಾದನೆಗಳು ಇವೆ. ಈ ಸಂಸ್ಥೆಗೆ ೧೯೬೯ನೇ ಇಸವಿಯಿಂದಲೂ ಗ್ರಾಂಟ್ ಕೊಡುತ್ತಿದ್ದಾರೆ. ಇದಕ್ಕೆ ಗ್ರಾಂಟ್ ಕೊಡತಕ್ಕ ಅಧಿಕಾರಿಗಳು ಈ ಸಂಸ್ಥೆಗೆ ಭೇಟಿ ಕೊಟ್ಟು ತನಿಖೆ ಮಾಡಿದ್ದಾರೆಯೋ, ಇದರ ಮೇಲೆ ಆಪಾದನೆಗಳು ಬಂದಿರುವಾಗ ಸರ್ಕಾರದವರು ಈ ಸಂಸ್ಥೆಯ ಪದಾಧಿಕಾರಿಗಳ ಮೇಲೆ ಏತಕ್ಕೆ ಸರ್ಕಾರದವರು ಕ್ರಮತೆಗೆದುಕೊಳ್ಳಲಿಲ್ಲ ಎಂಬುದನ್ನು ತಿಳಿಸಬೇಕು, ಇನ್ನೊಂದು ವಿಷಯವನ್ನು ಈ ಸಂಸ್ಥೆಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ ಈ ಸಂಸ್ಥೆಗೆ ಟೀಚರ್ಸ್ ಬೇಕು ಎಂದು ೭ನೇ ಫೆಬ್ರುವರಿ ೧೯೭೭ರಂದು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಜಾಹಿರಾತು ಬಂತು. ಈ ಹುದ್ದೆಗೆ ೧೦ನೇ ಫೆಬ್ರುವರಿ ೧೯೭೭ರಂದು ಇಂಟರ್‌ವ್ಯೂ ಆಯಿತು ೧೧ನೇ ಫೆಬ್ರುವರಿ ೧೯೭೭ರಂದು ಅಪಾಯಿಂಟ್‌ಮೆಂಟ್ ಆರ್ಡರ್ ಕೊಟ್ಟರು. ಆಯ್ಕೆಯಾದ ಅಭ್ಯರ್ಥಿ ೧೪ನೇ ಫೆಬ್ರುವರಿ ೧೯೭೭ರಂದು ಕೆಲಸಕ್ಕೆ ಹೋದರು.

೩-೩೦ ಪಿ.ಎಂ.

ಅಧ್ಯಕ್ಷರೇ ಇದರಲ್ಲಿ ಒಂದು ನಿಜ ಸಂಗತಿಯನ್ನು ತಮ್ಮ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಅಭ್ಯರ್ಥಿ ೧೯-೨-೭೭ ರಲ್ಲಿ ಅಪಾಯಿಂಟ್ ಆಗಿದ್ದಾನೆ. ಡಿಡಿಪಿಐ ರವರು ಇದಕ್ಕೆ ಅಪ್ರೂವಲ್ ಕೊಟ್ಟಿರುವುದು ೧-೬-೭೬ ರಿಂದ ಅಂತ ಕೊಟ್ಟಿದ್ದಾರೆ. ಹಿಂದಿನಿಂದ ಇವರು ಅಪಾಯಿಂಟ್ ಆದ ಹಾಗೆ ಅಪ್ರೂವಲ್ ಕೊಟ್ಟಿದ್ದಾರಲ್ಲಾ, ಅಧಿಕಾರಿಗಳೇನಾದರೂ ಕಣ್ಣು ಮುಚ್ಚಿಕೊಂಡು ಕುಳಿತಿದ್ದರೇ ಎಂದು ಕೇಳುತ್ತೇನೆ. ಅಥವಾ ಈ ಅಭ್ಯರ್ಥಿ ಅವರಿಗೇನಾದರೂ ಸಂಬಂಧಿಕನಾಗಿದ್ದನೇ. ಈ ಬಗೆ ಮಾನ್ಯ ವಿದ್ಯಾ ಸಚಿವರು ಉತ್ತರ ಹೇಳಬೇಕು ಎಂದು ಹೇಳುತ್ತೇನೆ.

ಇನ್ನು ಇದೇರೀತಿಯಾಗಿ ಇನ್ನೊಂದು ಸಂಸ್ಥೆ ಇದೆ. ಅದು ಯಾವುದೆಂದರೆ ವಿಜಯಾ ಪ್ರೈಮರಿ ಅಂಡ್ ನರ್ಸರಿ ಸ್ಕೂಲ್. ಈ ಸ್ಕೂಲ್‌ಗೆ ಡಿಪಾರ್ಟ್‌ಮೆಂಟ್‌ನವರು ರೇಡ್ ಮಾಡಿ, ಕಂಪ್ಲೀಟ್ ಇನ್‌ಸ್ಪೆಕ್ಷನ್ ಮಾಡಿ ಅಲ್ಲಿರುವ ಕಾಗದ ಪತ್ರಗಳನ್ನು ವಶಪಡಿಸಿಕೊಂಡಿದ್ದಾರೆ. ಅದರಲ್ಲಿ ಈರೀತಿ ಬರೆದಿದ್ದಾರೆ. Such a management is now permitted to run a school under Order No. NOG/32/76-77 by the Government. ಅಲ್ಲಿ ಇರತಕ್ಕಂಥಾ ಉಪಾಧ್ಯಾಯರನ್ನು ನೋಡಿದರೆ ಯಾರೂ ಕ್ವಾಲಿಫೈಡ್ ಅಲ್ಲ. ಎಲ್ಲಾ ಡಿಸ್‌ಕ್ವಾಲಿಫೈ ಆಗಿರುವವರೆ. ಆದರೂ ಕೂಡ ಅದಕ್ಕೆ ಅಪ್ರೂವಲ್ ಕೊಟ್ಟಿದ್ದಾರೆ.

ಇನ್ನೊಂದು ಇದೇರೀತಿಯಾಗಿ ಸುದರ್ಶನ ವಿದ್ಯಾಮಂದಿರ ಅಂತ ಇದೆ. ಈ ಸ್ಕೂಲಿನಲ್ಲಿ ಗಂಡ ಅಧ್ಯಕ್ಷ ಹೆಂಡತಿ ಸೆಕ್ರೆಟರಿ, ಹೆಡ್ ಮಿಸ್ಟ್ರೆಸ್ ಆಗಿದ್ದಾರೆ. ಇಲ್ಲಿ ಅಪಾಯಿಂಟ್ ಆಗಿರುವವರೆಲ್ಲರೂ ಕೂಡ ಸಂಬಂಧೀಕರೇ ಆಗಿದ್ದಾರೆ.

ಇನ್ನೊಂದು ಇದೇರೀತಿಯಾಗಿ ವಿಚಾರಣೆಗೊಳಗೊಂಡಂಥಾ ಒಂದು ಸ್ಕೂಲ್ Excelent English Nursery and Primary School, New Town, Extension, Bangalore. ಇದರಲ್ಲಿ ಏನಾಗಿದೆ ಎಂದರೆ ಅಲ್ಲಿರುವ ಎಲ್ಲಾ ಉಪಾಧ್ಯಾಯರನ್ನೂ ಕೂಡ ಕಾಯಿದೆಗೆ ವಿರುದ್ಧವಾಗಿ ತೆಗೆದು ಹಾಕಿದ್ದಾರೆ. ಅವರು ಟ್ರಿಬ್ಯೂನಲ್‌ಗೆ ಹೋಗಿ ನ್ಯಾಯವನ್ನು ದೊರಕಿಸಿಕೊಂಡರೂ ಕೂಡ ಇನ್ನೂ ಅವರನ್ನು ಕೆಲಸಕ್ಕೆ ತೆಗೆದುಕೊಂಡಿಲ್ಲಾ. ಆ ಉಪಾಧ್ಯಾಯರೆಲ್ಲಾ ಬೀದಿ ಬೀದಿಯನ್ನು ಅಲೆಯುತ್ತಿದ್ದಾರೆ.

ಇನ್ನು ಇದೇರೀತಿಯಾಗಿ ಇನ್ನೊಂದು ಶಾಲೆ ಇದೆ ಅದ್ಯಾವುದು ಎಂದರೆ ಸಂಗಮೇಶ್ವರ ಸ್ಕೂಲ್, ೯ನೇ ಬ್ಲಾಕ್, ಜಯನಗರ ಬೆಂಗಳೂರು. ಈ ವ್ಯಕ್ತಿ ಆನೇಕಲ್‌ನಲ್ಲಿ ಎ.ಇ.ಓ. ಆಗಿದ್ದಾನೆ. This person who was working as A.E.O has sold this institution to some other person now, who is running this Sanghameshawar School in Bangalore, who is running about 34 schools in Bangalore. ಈ ಒಂದು ಶಾಲೆ ರೆಕಗ್ನೈಸ್ ಇನ್ನೂ ಮಾಡಿಲ್ಲ. ಉಪಾಧ್ಯಾಯರೂ ಕಡಿಮೆ ಇದ್ದಾರೆ. ಹೀಗಿದ್ದರೂ ಕೂಡ ಅವರು ಶಾಲೆಯನ್ನು ನಡೆಸುತ್ತಿದ್ದಾರೆ. ಈ ಬಗ್ಗೆ ಹೇಳಬೇಕಾದರೆ ಇನ್ನೂ ಕೆಲವೊಂದು ಶಾಲೆಗಳು ಇವೆ. ಒಟ್ಟಿನಲ್ಲಿ ಹೇಳಬೇಕಾದರೆ ಬೆಂಗಳೂರಿನಲ್ಲಿ ಇರತಕ್ಕಂಥಾ ಪ್ರೀಪ್ರೈಮರಿ ಹೈಯ್ಯರ್ ಸೆಕೆಂಡರಿ ಸ್ಕೂಲ್‌ಗಳು ಏನು ಇವೆ ಅವೆಲ್ಲದರ ಬಗ್ಗೆಯೂ ತನಿಖೆ ಮಾಡಿ ಇದರಲ್ಲಿರುವ ಶಿಕ್ಷಕರಿಗೆ ನ್ಯಾಯವನ್ನು ದೊರಕಿಸಿಕೊಡಬೇಕು ಎಂದು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಇನ್ನು ಹೈಸ್ಕೂಲ್ಸ್ ವಿಚಾರ ಹೇಳುವುದಾದರೆ ಕೆಲವೊಂದು ವಿಷಯಗಳನ್ನು ಮಾತ್ರ ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಪ್ರೈವೇಟ್ ಏಡೆಡ್ ಸ್ಕೂಲ್‌ಗಳು ಏನು ಇವೆ, ಈ ಮಾಧ್ಯಮಿಕ ಶಾಲೆಗಳನ್ನು ಈ ಖಾಸಗಿಯವರು ಏನು ನಡೆಸುತ್ತಿದ್ದಾರೆ ಇದರಲ್ಲಿ ಓದುತ್ತಾ ಇರುವ ಹುಡುಗರಲ್ಲಿ ಯಾವ ಒಂದು ನೈತಿಕ ಮಟ್ಟವೂ ಉಳಿದಿಲ್ಲ ಎಂದು ಹೇಳುತ್ತೇನೆ. ಹೇಗೆಂದರೆ ಅದರಲ್ಲಿ ಹುಡುಗರು ಏನಾದರೂ ಪಾಸಾಗಬೇಕಾದರೆ ಮಾಸ್ ಕಾಪಿ ಮಾಡಿಸಿ ಪಾಸ್ ಮಾಡಿಸಿಬಿಡುತ್ತಾರೆ. ಹುಡುಗರಿಗೆ ಕಾಪಿ ಮಾಡಿ ಬರೆಸುತ್ತಾರೆ. ಇದಕ್ಕೆ ಮೂಲ ಕಾರಣ ಏನೆಂದರೆ ಈ ಪ್ರೈವೇಟ್ ಸ್ಕೂಲ್‌ಗಳಲ್ಲಿ ಸರಿಯಾದ ಫಲಿತಾಂಶ ಬಂದರೆ ಮಾತ್ರ ಗ್ರ್ಯಾಂಟ್ ಕೊಡುತ್ತಾರೆ, ಇಲ್ಲದಿದ್ದರೆ ಕಟ್ ಮಾಡುತ್ತಾರೆ. ಆದರೆ ಇದರ ಒಂದು ಗುಣಮಟ್ಟವನ್ನು ತೆಗೆದುಕೊಂಡರೆ ಅದು ಇಳಿಮುಖವಾಗಿ ಬರುತ್ತಾ ಇದೆ. ಈ

ಹುಡುಗರಿಗೆ ಕಾಪಿ ಮಾಡಿ ಬರೆಸುವುದರಿಂದ ಈ ರೀತಿ ಆಗುತ್ತಾ ಇದೆ. ಇದರಲ್ಲಿ ೧೦೦ಕ್ಕೆ ೧೦೦ ಹುಡುಗರು ಪಾಸಾಗುತ್ತಾರೆ. ಸರ್ಕಾರೀ ಹೈಸ್ಕೂಲ್‌ಗಳಲ್ಲಿ ನೋಡಿದರೆ ಅದರ ಫಲಿತಾಂಶ ಕಡಿಮೆ ಇರುತ್ತದೆ. ಯಾವ ಸರ್ಕಾರೀ ಹೈಸ್ಕೂಲುಗಳಲ್ಲೂ ಕೂಡ ಇಷ್ಟು ಫಲಿತಾಂಶ ಕಡಿಮೆ ಬರುತ್ತದೆಯೆಲ್ಲಾ ಯಾವ ಒಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲಾ. ಉದಾಹರಣೆಗೆ ಹೇಳುವುದಾದರೆ ಮಲ್ಲೇಶ್ವರ ದಲ್ಲಿ ಕೆಲವೊಂದು ಹೈಸ್ಕೂಲ್‌ಗಳು ಇವೆ. ಅವುಗಳ ರಿಸಲ್ಟ್ ಜೀರೋ ಟು ೧೦ಪರ್ಸೆಂಟ್ ಬರುತ್ತಾ ಇವೆ. ಇವುಗಳ ಮೇಲೇನಾದರೂ ಇದುವರೆಗೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ? ಅಥವಾ ಇದೂ ಒಂದು ಪ್ರೈವೇಟ್ ಸಂಸ್ಥೆಯಾಗಿ ಇದೆ ಎನ್ನುವ ಭಾವನೆ ಬರುತ್ತದೆ. ಇದರ ಮೇಲೆ ನಿಮ್ಮ ಕಾನೂನು ವ್ಯಾಪ್ತಿ ಇಲ್ಲವೇ ಎನ್ನುವ ಪ್ರಶ್ನೆ ಮಾಡಬೇಕಾಗುತ್ತದೆ. ಆದುದರಿಂದ ಸರ್ಕಾರೀ ಹೈಸ್ಕೂಲ್‌ಗಳಲ್ಲೂ ಕೂಡ ಒಂದು ಉತ್ತಮವಾದ ರಿಸಲ್ಟ್ ಬರುವ ಹಾಗೆ ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ ಕಾನೂನು ವ್ಯಾಪ್ತಿ ಎಲ್ಲರಿಗೂ ಒಂದೇ ಇರುತ್ತದೆ. ಸರ್ಕಾರೀ ಹೈಸ್ಕೂಲ್‌ಗಳಿಗೂ ಮತ್ತು ಪ್ರೈವೇಟ್ ಹೈಸ್ಕೂಲ್‌ಗಳಿಗೂ ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ಮತ್ತು ಶಿಕ್ಷಕರಿಗೆ ಕೊಡತಕ್ಕಂಥಾ ಸೌಲಭ್ಯಗಳಲ್ಲಿ ಯಾವ ಒಂದೂ ವ್ಯತ್ಯಾಸವೂ ಇರಲಿಕ್ಕಿಲ್ಲಾ ಎಂದು ನನ್ನ ಭಾವನೆ. ಆ ಭಾವನೆಯಲ್ಲಿ ಏನಾದರೂ ವ್ಯತ್ಯಾಸ ಇದ್ದರೆ ಮಾನ್ಯ ಸಚಿವರು ತಿಳಿಸಬೇಕು ಎಂದು ಕೇಳುತ್ತೇನೆ.

ಇನ್ನು ಇದೇ ರೀತಿಯಾಗಿ ಶಿಕ್ಷಕರಿಗೆ ಇರತಕ್ಕಂಥಾ ಸೌಲಭ್ಯದ ಬಗ್ಗೆ ಹೇಳಬೇಕಾದರೆ ಸರ್ಕಾರೀ ಹೈಸ್ಕೂಲಿನಲ್ಲಿರತಕ್ಕಂಥಾ ಶಿಕ್ಷಕರಿಗೆ ಗ್ರಾಚ್ಯುಯಿಟಿ ಸ್ವಲ್ಪ ಹೆಚ್ಚಾಗಿ ಸಿಕ್ಕುತ್ತದೆ, ಪ್ರೈವೇಟ್ ಹೈಸ್ಕೂಲಿನವರಿಗಾದರೆ ಸ್ವಲ್ಪ ಕಡಿಮೆ ಸಿಕ್ಕುತ್ತದೆ, ಅಷ್ಟೇ ಇರುವ ವ್ಯತ್ಯಾಸ.

ಅಧ್ಯಕ್ಷರು.—ಮಾನ್ಯ ಸದಸ್ಯರು ಬೇಗನೆ ಭಾಷಣ ಮುಗಿಸಲಿ ಎಂದು ಬೆಲ್ ಬಾರಿಸಿದರು.

ಶ್ರೀ ವಿ.ವಿ. ಭಾವಿ.—ಸ್ವಾಮಿ, ಮಳ್ಳೂರು ಆನಂದರಾಯರಿಗೆ ೨½ ಗಂಟೆಗಳ ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನನಗೆ ಈ ವಿಷಯಗಳನ್ನೆಲ್ಲಾ ಹೇಳುವುದಕ್ಕೆ ಅರ್ಧ ಗಂಟೆ ಕಾಲವಾದರೂ ಕೊಟ್ಟರೆ ಕೆಲವೊಂದು ವಿಷಯಗಳನ್ನು ಮಾತ್ರ ತಮ್ಮ ಗಮನಕ್ಕೆ ತರಬಹುದು. ದಯವಿಟ್ಟು ಸ್ವಲ್ಪ ಕಾಲಾವಕಾಶ ಕೊಡಿ.

ಇನ್ನು ಹೈಸ್ಕೂಲ್ ಮಟ್ಟದಲ್ಲಿ ಹೊಸದಾಗಿ ತಂದಿರುವಂತಹ ಸಿಲಬಸ್ ಬಗ್ಗೆ ಹೇಳಬೇಕೆಂದರೆ, ಅವು ಬಹಳ ಉಚ್ಚ ಮಾದರಿ ಆಗಿವೆ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ವಿಜ್ಞಾನ ಮತ್ತು ಲೆಕ್ಕದ ಬಗ್ಗೆ ಇರುವಂತಹ ಸಿಲಬಸ್‌ಗಳನ್ನು ಉಪಾಧ್ಯಾಯರೇ ಶೇಕಡಾ ೫೦ರಷ್ಟು ಅರ್ಥ ಮಾಡಿಕೊಳ್ಳುವುದು ಕಷ್ಟವಾಗಿದೆ ಅಷ್ಟೊಂದು ಕಠಿಣವಾಗಿದೆ. ಇನ್ನು ಅವರು ಹುಡುಗರಿಗೆ ಯಾವ ರೀತಿ ಕಲಿಸುತ್ತಾರೆ ? ಆದ್ದರಿಂದ ಶಿಕ್ಷಕರಿಗೂ ಸಹ ಕಡ್ಡಾಯವಾಗಿ ತರಬೇತಿ ಕೊಡುವಂತಹ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಹೈಸ್ಕೂಲ್‌ಗಳಲ್ಲಿ ಆಟದ ಬಗ್ಗೆ ಸರ್ಕಾರದವರು ಅಷ್ಟೊಂದು ಲಕ್ಷ್ಯವಹಿಸಿಲ್ಲ. ಮತ್ತು ವಿದ್ಯಾರ್ಥಿಗಳಿಂದಲೂ ಸಹ ಇವರ ಬಗ್ಗೆ ಫೀ ವಸೂಲಿ ಮಾಡುತ್ತಿಲ್ಲ. ಇದರ ಕಡೆಗೂ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಕಾಲೇಜುಗಳ ಬಗ್ಗೆ ಅಂದರೆ ಹೈಯರ್ ಎಜುಕೇಷನ್ ಬಗ್ಗೆ ಕೆಲವು ಸಲಹೆಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಮೇಲೆ ಪತ್ರಿಕೆಯಲ್ಲಿ ಇದೇ ಹೈಯರ್ ಎಜುಕೇಷನ್ ಬಗ್ಗೆ ತಾ ೮-೬-೧೯೮೦ರಂದು ಶ್ರೀ ಕೇದಾರ್‌ನಾಥಪಾಂಡೆ ಅವರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದರ ಕಡೆಗೆ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ. ಅದು ಈ ರೀತಿ ಇದೆ.—

"The Government is seriously disturbed at the rapid growth of unemployment among graduates. In a study the Union Ministry of Labour and Employment as given a state-wise breakup of this increase. The study shows that over the last five years the prbolem has assumed staggering proportions. The rise in the number of educated unemployed

has risen by about 40 per cent over the previous few years. Viewed against the background of the Assam agitation, which is beging led by unemployed graduates and post-graduates, it is clear that the whole educational system needs to be reviewed. After all there is a limit to providing white-collar jobs to people. The situation we face today is the result of the unplanned expansion of education which has nothing to do with job avilability.

STRATEGIES

The strategies of educational development so far employed have brought about a trend towardsan excess supply of highly skilled manpower. In these circumstances, a socicl clash between the Governmental system and the unemployed in the streets was inevitable. and so far we have been blaming the agitators as if they were leading a secessionist movement. But in reality it is an economic struggle, The Assamese have been swamped by others and all their economic opportuni tie shave been lost.

But an agitation of the kind is no solution to the problem of unemployment and economic backwardness. In fact, the entire north-estern region is facing economic stagnation and even those developmental activities which were going on remain suspended. The region has been a peculiar case of lack of spatial planning. In this context; the role of the Planning Commission has left much to be desired. Land reforms have been carried out only half way to their intended targets in most of the States and have more or less lost their momentum.

Higher education has got to be selective the right to it being based on merit only. At the lower levels vocationalisation is the answer to the growing problem of unemployment. If we fail to tackle this problem realistically, we may have many more Assams".

The Assam agitation is supported by unemployed graduates only. The whole educational system has to be reviewed, otherwise every State in our country will become Assam.

SRI B. BASAVALINGAPPA.—Sir, the hon.member is comparing the problem of unemployed graduates with that of agitation in Assam. Do you want that Assam agitation should be started here or incite the people here ?

SRI V.V. BHAVI.—I said that we must review the whole educational system. We must have such a system of education that it should not create unemployment problem in the State.

SRI B.V. KAKKILAYA.—What is that system ? Can you explain ?

SRI V.V. BHAVI.—At the lower levels vocationalisation is the answer to the growing problem of unemployment.

SRI B.V. KAKKILAYA.—We have heard of it for the last 30 years. Why has it not been implemented ?

SRI V.V. BHAVI.—The minister is capable of doing it and that is why, I am suggesting this.................

ಅಧ್ಯಕ್ಷರು.—ತಾವು ಜಾಗ್ರತೆ ಮುಗಿಸದಿದ್ದರೆ ನಾನು ಬೇರೆಯವರನ್ನು ಕರೆಯುತ್ತೇನೆ.

ಶ್ರೀ ವಿ. ವಿ. ಬಾವಿ.—ಅದಕ್ಕಾಗಿ ಈ ಎಲ್ಲ ಸಮಸ್ಯೆಗಳನ್ನು ಅರಿತುಕೊಂಡು ಮಾನ್ಯ ಶಿಕ್ಷಣ ಸಚಿವರು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಾಲೇಜುಗಳಲ್ಲಿ ರಾಷ್ಟ್ರೀಯ ಸಮಸ್ಯೆಗಳನ್ನು ಒಳಗೊಂಡಂತಹ ಪುಸ್ತಕಗಳನ್ನು ಸಹ ನಿಗದಿ ಮಾಡಿದರೆ, ಅವರು ರಾಷ್ಟ್ರೀಯ ಸಮಸ್ಯೆಗಳನ್ನು ಅರಿತುಕೊಳ್ಳಲು ಸಹಾಯವಾಗುತ್ತದೆ. ಈಗ ವರದಕ್ಷಿಣೆ ಪದ್ಧತಿ ಹೋಗಬೇಕು, ಪಾನನಿರೋಧ ಪದ್ಧತಿಯನ್ನು ಜಾರಿಗೆ ತರಬೇಕು. ವನಮಹೋತ್ಸವ ವನ್ನು ಆಚರಣೆ ಮಾಡಬೇಕೆಂದು ನಾವು ಹೇಳುತ್ತೇವೆ, ಆದರೆ ಆಚರಣೆಯಲ್ಲಿ ತರುತ್ತಿಲ್ಲ. ಇಂತಹ ಸಮಸ್ಯೆಗಳನ್ನು ಒಳಗೊಂಡಂತಹ ವಿಷಯಗಳನ್ನು ಕಾಲೇಜು ಮಟ್ಟದ ಸಿಲಬಸ್‌ನಲ್ಲಿ ಸೇರಿಸಿದರೆ, ಮುಂದೆ ಆ ವಿದ್ಯಾರ್ಥಿಗಳಿಗೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ.

ಇನ್ನು ಹಾವನೂರು ವರದಿಯನ್ನು ಜಾರಿಗೆ ಕೊಟ್ಟಮೇಲೆ, ಶಿಕ್ಷಣ ಇಲಾಖೆಯವರು ವಾರ್ಷಿಕವಾಗಿ ೩೬೦೦ ರೂಪಾಯಿಗಳಿಗಿಂತ ಕಡಿಮೆ ಆದಾಯವಿರುವವರ ಮಕ್ಕಳು ಫೀ ಕೊಡುವ ಅಗತ್ಯವಿಲ್ಲವೆಂದು ಒಂದು ಸರ್ಕ್ಯುಲರ್ ಹೊರಡಿಸಿದರು. ಆದರೆ ಇದಕ್ಕೂ ಮೊದಲು ಕೆಲವು ಕಡೆಗಳಲ್ಲಿ ಫೀ ವಸೂಲಿ ಮಾಡಿಬಿಟ್ಟಿದ್ದರು. ಸರ್ಕಾರದವರು ಈ ರೀತಿ ಫೀ ವಸೂಲಿ ಮಾಡಿದಂಥ ಖಾಸಗೀ ಸಂಸ್ಥೆಗಳಿಗೆ ಹಣವನ್ನು ವಾಪಸ್ ಮಾಡುವಾಗ ಕೆಲವಕ್ಕೆ ೧೨೬ ರೂ. ಗಳ ಪ್ರಕಾರ ಮತ್ತೆ ಕೆಲವಕ್ಕೆ ಡಬಲ್ ಸ್ಟಾಂಡರ್ಡ್ ರೇಟ್ ಎಂದು ೨೫೨ ರೂ. ಗಳ ಪ್ರಕಾರ ಕೊಟ್ಟಿದ್ದಾರೆ. ಇಂತಹ ನೀತಿ ಅನುಸರಿಸಲು ಕಾರಣವೇನೆಂಬುದನ್ನು ತಿಳಿಸಬೇಕು.

ಇನ್ನು ಡೈರೆಕ್ಟರ್ ಆಫ್ ಕೊಲಿಜಿಯೇಟ್ ಎಜುಕೇಷನ್ ಅವರು ಖಾಸಗೀ ಸಂಸ್ಥೆಗಳಲ್ಲಿ ಕೆಲಸ ಮಾಡುವಂತಹ ಲೆಕ್ಚರರ್‌ಗೆ ಪ್ರಮೋಷನ್ ಕೊಡದೆ ತಾ|| ೧-೧-೧೯೭೮ ರಿಂದ ತಡೆಹಿಡಿದಿದ್ದಾರೆ. ಇದಕ್ಕೆ ಮೂಲಭೂತವಾದ ಕಾರಣವೇನು ? ಈ ಲೆಕ್ಚರರ್ ಗೆ ಅನ್ಯಾಯವಾಗಿದೆ. ಆದಕಾರಣ ಇದಕ್ಕೆ ಸರ್ಕಾರದವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಸರ್ಕಾರೀ ಕಾಲೇಜುಗಳಲ್ಲಿ ವರ್ಷ ವರ್ಷ ಬಡ್ತಿ ನೀಡುತ್ತಾ ಬಂದಿದ್ದಾರೆ, ಆದರೆ ಖಾಸಗೀ ಕಾಲೇಜುಗಳಲ್ಲಿ ಬಡ್ತಿ ಕೊಡುವುದನು ತಡೆ ಹಿಡಿಯಲಾಗಿದೆ. ಆದ್ದರಿಂದ, ಜಾಗ್ರತೆಯಾಗಿ ಅಲ್ಲಿಯೂ ಕೂಡ ಬಡ್ತಿ ನೀಡಬೇಕೆಂದು ಹೇಳುತ್ತೇನೆ. ಕಾನೂನು ಎಲ್ಲರಿಗೂ ಒಂದೇ ಇರಬೇಕೆಂಬ ಮಾತನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಜೂನ್ ೧೬ ರಿಂದ ಕಾಲೇಜುಗಳು ಪ್ರಾರಂಭವಾಗುವುದರಿಂದ, ಜೂನ್ ೧೫ ರೊಳಗೆ ಎಲ್ಲ ಪರೀಕ್ಷೆಗಳ ಫಲಿತಾಂಶ ಪ್ರಕಟವಾದರೆ ಮುಂದಿನ ತರಗತಿಗಳಿಗೆ ಹೋಗುವುದಕ್ಕೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಆದರೆ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ (ಅದು ಸರ್ಕಾರದ ಹತೋಟಿಯಲ್ಲಿರತಕ್ಕದ್ದು) ಇವತ್ತಿನವರೆಗೂ ಪರೀಕ್ಷೆಗಳು ನಡೆಯುತ್ತಿವೆ. ಹೀಗಾದರೆ ಆ ವಿದ್ಯಾರ್ಥಿಗಳು ಮುಂದಿನ ತರಗತಿಗಳಿಗಾಗಲೀ ಅಥವಾ ಮುಂದಿನ ಕಾಲೇಜುಗಳಿಗಾಗಲೀ ಯಾವಾಗ ಹೋಗಬೇಕು ? ಹೊಸದಾಗಿ ಹೋದರೆ ಅವರಿಗೆ ಅಲ್ಲಿ ಪ್ರವೇಶಾವಕಾಶಗಳು ದೊರೆಯುತ್ತವೆಯೆ ? ಖಾಸಗೀ ಕಾಲೇಜುಗಳು ಅವರಿಗೆ ಪ್ರವೇಶಾವಕಾಶಗಳನ್ನು ಕೊಡುತ್ತಾರೆಯೋ ಎಂದು ಕೇಳಬಯಸುತ್ತೇನೆ. ವಿಶ್ವವಿದ್ಯಾನಿಲಯಗಳ ಮೇಲೆ ಸರ್ಕಾರದ ಹತೋಟಿ ಇಲ್ಲವೆ ? ಶಿಕ್ಷಣ ರಂಗದಲ್ಲಿ ವೃತ್ತಿ ಶಿಕ್ಷಣಗಳನ್ನು ಪ್ರಾರಂಭ ಮಾಡಬೇಕೆಂದು

ಮಾತನಾಡುವುದನ್ನು ಕೇಳಿದ್ದೇನೆ. ಆದರೆ ಅದನ್ನು ಆಚರಣೆಗೆ ತಂದಿರುವುದನು ಎಲ್ಲಿಯೂ ನೋಡಿಲ್ಲ. ಈಗ ಹೊಸದಾಗಿ ಮಂಗಳೂರಿನಲ್ಲಿ ಮತ್ತು ಗುಲ್ಬರ್ಗದಲ್ಲಿ ಏನು ಎರಡು ವಿಶ್ವವಿದ್ಯಾನಿಲಯಗಳು ಪ್ರಾರಂಭವಾಗುತ್ತಿವೆ. ಅವುಗಳ ಪೈಕಿ ಒಂದರಲ್ಲಿಯಾದರೂ ವೃತ್ತಿ ಶಿಕ್ಷಣವನ್ನು ನೀಡುವಂತಹ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದರಿಂದ ಕಲಿತ ವಿದ್ಯಾರ್ಥಿಗಳು ಸ್ವಂತ ಉದ್ಯೋಗವನ್ನು ಹೊಂದಿ ತಮ್ಮ ಕಾಲ ಮೇಲೆ ತಾವು ನಿಲ್ಲುವುದಕ್ಕೆ ಅನುಕೂಲವಾಗುತ್ತದೆ. ಇವತ್ತಿನ ದಿವಸ ಕೊಲಿಜಿಯೇಟ್ ಎಜುಕೇಷನ್ನಿಗೆ ಒಬ್ಬರೇ ಒಬ್ಬರು ಡೈರೆಕ್ಟರ್ ಇದ್ದಾರೆ. ಅವರು ಸುಮಾರು 200 ಕಾಲೇಜುಗಳನ್ನು ನೋಡಿಕೊಳ್ಳಬೇಕಾಗಿದೆ. ಆದ್ದರಿಂದ, ಕಾಲೇಜುಗಳನ್ನು ಡಿವಿಜನ್‌ವೈಸ್ ಆಗಿ ವಿಭಾಗ ಮಾಡಿ ಪ್ರತಿಯೊಂದು ಡಿವಿಜನ್ನಿಗೂ ಒಬ್ಬೊಬ್ಬರು ಡೈರೆಕ್ಟರನ್ನು ನೇಮಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಶ್ರೀ ಎಸ್. ಎಸ್. ಅರಕೇರಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

SRI WILLIAM ST. JOHN SINCLAIR MARLEY.—Mr. Speaker Sir, I would like to finish as soon as possible because I know that you are had pressed for time. There are certain points which I would like to bring to light. I think the two previous speakers have covered a very vast field, so I will not cover that. What I would like to bring to the notice of the Minister is that, reading this performance report, I see two aspects here. One is a gleam of hope and one of tremendous despair. With regard to the gleam of hope, I am pleased to read at page 61 :

> "The main object is to wean out as many students as possible from the meaningless clamour in search of General University Degree of doubtful relevance towards more meaningful courses of the vocational stream designed to meet the Socio-economic needs of the community and the departmental activities envisaged by the planners."

Here Sir, I find that in spite of my having spoken, I think on the budget of 1968, about the change in the Education pattern as my honourable friend and member Mr. Kakkilaya asked 'what have done all these 30 years '? The same type of pattern with the tremendous changes in our country. Is it really worth the money that we are spending today? Most of our people, those that are the privileged few, take full advantage of everything and next they are off to America, England, Australia and New Zealand. We are spending lakhs of rupees on them, but what benefit do our people get out of this ? we are constantly hankering on B. A. and M. A. Degrees. What for? In the schools that I am connected with there are about 27 of them, from eighth standard we usually advise the parents and say 'Look, your child is not suitable to go to college, if you wish to send him to college, kindly withdraw, him from the school as we are not going to let him appeared to the face the ICSE, because he does not have the capacity to pass '. What has happened? These children are withdrawn

from the school, taken to another school there they have passed the SSLC. Then see the tragedy. The boy, whom we thought was not fit to go for higher education, gets 93% in the SSLC and boys who are superior cannot get into college because of those who obtained 93% on account of this wicked system, grace marks. I would be very pleased if somebody could explain to me why grace marks are given and what is the reason behind giving them? I have never heard of this system before. According to your ability you secure marks. You are finding places for pupils that are not suitable for them. Why cannot we give them vocational training? What is wrong with our parents in not allowing their children to work with their hands? God has given them to use them and many are gifted. Instead of appearing for the B.A and M.A examinations. we should find avenues for these boys to use their hands and gifts, so that they do not become drug addicts and next suicides. I am talking because, I am concerned with alcoholics. I know the problems that are facing our youth. Sir, through you I would like to ask the Minister to formulate a policy, let us get people who are concerned with education, who know something about education. As the hon. member Mr. Ananda Rao pointed out, why do you keep changing your policy; 10 plus 2 plus 3 and next 10 plus 1 plus 3. What's all this? Let us carry on at least one policy. define it for the next 15 years and stick to it. We are just creating problems for ourselves as we go along. I know that it is a great desire that everybody should be a graduate. But are all five fingers alike? We have got brains; but all of us do not use them. Everybody cannot come first and one has to come second and some last. Why cannot we pick those boys and girls who have the capacity to go for higher education? It is here, I think the problem rests with the parents. They are the people who are responsible for this and if I am bold to say so. it is this custom of ours. Unless the girl is a B.A she cannot seek for a suitable husband and unless the boy is a graduate he cannot seek for a suitable wife. This is evident on the face from the matrimonial columns of the newspapers. Is all this necessary? Can't we look for new India? Can't we look for new horizons and better ways to achieve our goals. Why should we waste large sums of money?

4-00 P.M.

Take for instance the question that has been raised on the floor of this House about the teachers. Am I to understand that the Education Department is not looking into the details as to how many teachers are going to reach superannuation age, how many will require replacement etc? How is it that we do not have these problems in other schools? The Education Department should have

a Report from all the schools and colleges as to what is likely to be the number of students that will be passing out from Medical and Engineering, Colleges who are, going for this and for that *etc.*, so that they would be in a better position to know the needs of the students and they would be in a position to meet those needs. Are our Colleges capable of meeting the influx of the students ? I know we are short of schools and Colleges. Yet we are shouting about private shools. God save, us if the private schools and colleges are closed down tomorrow. There would be utter chaos, as the Hon'ble Member Mr. Ananda Rao pointed out. Let us find out what is wrong and put it right. If the Education Department cannot do it, well then I think, the Department is lacking badly in doing what it has too.

About the English language, I find the following here on page 57 of this Performance Budget.—

> "In order to improve the knowledge in English and also the capacity to understand, read *etc.*, English was introduced in the first year Diploma since it was found that lack of knowledge came in the way of understanding it."

We have had a lot of discussions in this August House about English being a foreign language, it is this and it is that. Let ut b very clear in our minds. English is not a foreign language. Is happens to be my mother tongue and I am protected by the Constitution of this Country. I am recognised as a minority community in this country and how can you call me a foreigner? How can you call my mother tongue foreign ? It is idiotic. There are more important issues than Prohibition and English.

SRI G. B. SHANKAR RAO.—It may be a mother tongue.

WILLIAM ST. JOHN SINCLAIR MARLEY.—I think, that is a wrong interpretation. Meghalaya, Mizoram and Nagaland have made English their official language. Am I to understand that these three territories do not belong to India ? Please, let us not be narrow minded. What is a language after all ? A language is a means of communicating between two people so that the persons—speaking and listening–can understand fully well what they want to communicate between each other. If you speak and it is not understood by the listner, it does not serve the purpose. What is its use then ? Let us be frank. There are several problems facing us which are more important than languages Certainly, I have full respect for the mother tongue of any community.

SRI B. V. KAKKILAYA.—Mr. Anand Rao, when he spoke, referred to a particular system of education in vogue here. He did not make

any reference to English language as such. What he said was, English Medium schools are charging such exorbitant donations even for nursery schools to the tune of Rs. 5,000 to Rs. 10,000 and hence the English Medium schools come in the way of education of ordinary students who cannot afford to pay such big amounts. Would you kindly tell us how should we manage and curb this system ?

WILLIAM ST. JOHN SINCLAIR MARLEY.—I am very pleased that this point has been raised. On the floor of this House, I would like to challenge any hon. Member who can point a finger to any one of the 23 schools with which I am connected and bring to my notice that they are taking donations or anything like that which is not accounted for. I can guarantee that not one school of ours is taking donations or anything like that.

SRI K. B. SHIVAIAH.—English schools managed by englishmen.

WILLIAM ST. JOHN SINCLAIR MARLEY.—You made a mistake, Sir.

SRI G. B. SHANKAR RAO.—Perhaps you are misleading all of us. It is not the question who manages the schools but it is the madness which our people have got for english. Whether it is run by Europeans or natives, but it is the madness for english that has made us feel sorry. It is not the language that has made us feel sorry. Hon. Member Marley was referring to a very few schools he is managing. But there are hundreds of english medium schools of which the hon. Member cannot take responsibility. He can talk about his schools and not of others.

WILLIAM ST. JOHN SINCLAIR MARLEY.—Mr. Speaker Sir, I would like to correct the hon. Member Sri Shivaiah. He said 'Indian Schools.' I am an Indian and a very proud Indian. What he meant by referring to english schools run by Englishmen, is to Anglo-Indians. If it is right, then he is correct. What I am trying to say is people might think that we are giving a wrong type of education. The point is that parents are wanting this type of education for their children. As I said earlier, I have nothing against Kannada. I would appeal to the Department to teach English and Kannada at the same level because the point that was raised over here on the floor of this House was 'employment'. Let us look at it in an enlightened manner. Take any Government of India organisation. What is the language by which they communicate throughout the country ? What is the language by which all these private entre-prises communicate in the country ? It is English. And if you do not have a command of that language, how can you be employed in this companies ? It is just impossible. Nobody is going to employ you. Let us face the facts. What is wrong with the teaching of

English? Take for instance our schools. We are following the three-language formula. We are teaching English, we are teaching Kannada and we are teaching Hindi. We are doing it. I am sure, in the whole of the country, ours are the only schools that are following the three-language formula correctly. Would any school in northern India be prepared to teach Kannada? None of them None of them are teaching Kannada or Tamil or Telugu. They are teaching English and Hindi only. Why there is a demand for these english medium schools? These schools have got large waiting lists. The parents want their children to learn in these schools Two hon Members of this August House came to me yesterday and asked "Will you please get our children into these schools?"

what is wrong with it? I cannot help it. If they want to get into these schools, certainly they have that right as parents to send their children to any school to be taught in any medium they like. They are protected by the Constitution. It is enshirined in our Constitution that anybody, if he wants his child to study through the medium of Bengali, Malyalam, Kannada, Urdu he is entitled to send his child to the school of his choice.

I would like to dwell a little about your printing and Stationery.

SRI J. H. PATEL.—Can you give me an example of a citizen in any other country or anywhere in the world who does not know the language of the region where he lives either in England or in Scotland? Have you seen such a thing anywhere in the world? You have every right to plead for English, but English is the foreign language.

SRI WILLIAM ST. JOHN SINCLAIR MURLEY.—Sir, I agree with Hon'ble Member Sri J. H. Patel You take for instance Switzerland which has got three languages. I am not saying that I am against Kannada. I quite agree with my friend, but do not make us foreigners in our own country. There are certain members who went with me in a delegation to North India. But nobody there talked to us in any language than in Hindi. They said that they can only speak in Hindi. What is the use? But Hindi was not known to all of us except three Members, Many of the Members could not understand what they were saying. Let us realise that if Kannda Hindi as Hindustani us be an All India language. I would not mind at all. I am not pleading for English. I am just telling you what the position is in the country today, if you cannot communicate between one another in an intelligible manner what is the use?

I would like to say a few words about a feed back. I think it would be a wonderful thing if the Department could really get some sort of feed back from the schools and colleges to be in a position evaluate the details. Is the money that is being spent being put to correct use? Is there a return for the Large sum of money that we are spending? You must, in your Department get some sort of feed back.

One more point I would like to request the Ministry about is whether they could get more playing fields for our youths. For instance, the parade ground at Mahatma Gandhi Road is just a waste, I do not understand how the military can hold on to a parade ground which they use only twice in a year. When the youth of Bangalore do not have enough playing fields cannot something be done about this?

Sir, one more point is I do not know whether the Ravindra Kalakshetra comes under the control of the Education Department now. May I digress on two things which I cannot understand. Firstly if you book this hall you are given 24 hours notice. If the reservation is to be cancelled, they say " sorry you cannot have the hall because the Government has arrange for a function." After making all arrangements the person who has booked cannot have the hall to have some function because the Government wants to have its own function. To me it seems ridiculous, absolutely ridiculous, because one cannot use the hall even though he has paid the money well in advance. It really needs looking into. The Government can as well hold its function in the Banquet Hall of the Vidhana Soudha. It think it is wrong.

Secondly, I do not know whether there is a Government Order that the first six seats in the front row have to be given to the Government. I do not know who occupies those seats. What is this? This is nothing but cheating, absolute cheating. This needs really looking into.

Sir, I am sorry I had some more points, but I canot carry on, on account of time. Thank you Sir,

† ಶ್ರೀ ಎಸ್. ವಿ. ನಾಯಕ್ (ಕುಮಟಾ).—ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರು ಮಂಡಿಸಿದಂಥ ೧೬೦ ಕೋಟಿ ರೂಪಾಯಿಗಳ ಬೇಡಿಕೆಯನ್ನು ನಾನು ಅನುಮೋದಿಸುತ್ತಾ ಕೆಲವೊಂದು ವಿಚಾರಗಳನ್ನು ಹೇಳಬಯಸುತ್ತೇನೆ. ಈ ಒಂದು ಬೇಡಿಕೆ ಬೃಹತ್ ಮತ್ತು ಮಹತ್ವದ ದೃಷ್ಟಿಯಿಂದ ಅತ್ಯಂತ ಮಹತ್ವದ್ದು ಎನ್ನುವುದನ್ನು ಅವರು ಪ್ರತಿಪಾದಿಸಿದ್ದಾರೆ. ಈ ೧೬೦ ಕೋಟಿ ರೂಪಾಯಿಗಳ ಬೇಡಿಕೆ ಅವರ ದೃಷ್ಟಿಯಿಂದ ಬೃಹತ್ ಎನ್ನುವುದಾದರೆ ಇಷ್ಟೊಂದು ದೊಡ್ಡ ಮೊತ್ತವನ್ನು ನಾವು ಈ ಒಂದು ಪವಿತ್ರವಾದ ಕಾರ್ಯಕ್ಕಾಗಿ ಏನು ವಿನಿಯೋಗಿಸುತ್ತಿದ್ದೇವೆ ಅದರ ಪರಿಣಾಮ ಯಾವ ರೀತಿ ಇದೆ ಎನ್ನುವ ಬಗ್ಗೆ ಒಂದು ಅಳತೆ ಗೋಲನ್ನು ಹಿಡಿದು ಬೆಳಿಗ್ಗೆ ಶ್ರೀ ಮುಳ್ಳೂರು ಆನಂದರಾವ್‌ರವರು ಮಾತನಾಡುವಾಗ ಹೇಳಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಶಿಕ್ಷಣದ ವಿಷಯ ಹೇಗಿತ್ತು ಎಂಬುದನ್ನು ಸಹ ತಿಳಿಸಿದರು,

ಆದರ ಬಗ್ಗೆ ಆಯೋಗಗಳು ತಮ್ಮ ವರದಿಯನ್ನು ಸಲ್ಲಿಸಿವೆ. ಡಾ. ರಾಧಾಕೃಷ್ಣರವರ ವರದಿ, ಶ್ರೀ ಕೊಠಾರಿಯವರ ವರದಿ ಇನ್ನು ಮುಂತಾದವರು ಶಿಕ್ಷಣವನ್ನು ರಾಷ್ಟ್ರೀಕರಣಗೊಳಿಸಬೇಕೆಂದು, ಮತ್ತು ಶಿಕ್ಷಣ ನೀತಿ ಧೋರಣೆಗಳು ಯಾವ ರೀತಿಯಾಗಿರಬೇಕು ಎನ್ನುವುದನ್ನು ಅತ್ಯಂತ ವಿಸ್ತಾರವಾಗಿ ಬರೆದಿದ್ದಾರೆ. ಹಲವಾರು ಜನ ಹಲವಾರು ರೀತಿಯಲ್ಲಿ ಇದರ ಬಗ್ಗೆ ವ್ಯಾಖ್ಯಾನಗಳನ್ನು ಕೂಡ ಬರೆದಿದ್ದಾರೆ ಆದರೆ ಬಗ್ಗೆ ನಾನು ಇಲ್ಲಿ ಚರ್ವಿತಚರ್ವಣವಾಗಿ ಚರ್ಚೆ ಮಾಡಲು ಹೋಗದಿದ್ದರೂ ಸಹ ಶಿಕ್ಷಣದ ವಿಷಯ ದಲ್ಲಿ ಹೇಳಬೇಕಾದರೆ ಒಬ್ಬ ವ್ಯಕ್ತಿಯಲ್ಲಿ ಶೀಲ, ಚಾರಿತ್ರ್ಯ, ಚರಿತ್ರೆ ಮತ್ತು ಚಾರುತ್ವಗಳನ್ನು ಬೆಳೆಸಿ ಕೊಳ್ಳುವುದಕ್ಕೆ ಶಿಕ್ಷಣ ಸಹಕಾರಿಯಾಗಬೇಕು ಎನ್ನುವುದರ ಬಗ್ಗೆ ಶ್ರೀ ಮುಳ್ಳೂರು ಆನಂದರಾವ್‌ರವರು ಮಾತನಾಡುತ್ತಾ ಹೇಳಿದ್ದಾರೆ. ಇವತ್ತು ವಿಶ್ವವಿದ್ಯಾನಿಲಯಗಳಿಂದ ಪದವಿ ಪಡೆದು ಹೊರಗೆ ಬರುವಂಥಾ ನಮ್ಮ ಮಕ್ಕಳನ್ನು ನಾವು ನೋಡುವುದಾದರೆ ಅವರು ಪೌರುಷ ಹೀನರಾಗಿ, ವೀರ್ಯ ಹೀನರಾಗಿ, ವಿಲಕ್ಷಣ ರಾಗಿ ಹೊರಗೆ ಬರುವಂಥಾ ದೃಷ್ಟಿಯನ್ನು ನೋಡಿದರೆ ಇವತ್ತಿನ ದಿವಸ ಶಿಕ್ಷಣದ ಪದ್ಧತಿ ಸಂಪೂರ್ಣವಾಗಿ ವಿಫಲವಾಗಿದೆಯೆಂದು ಹೇಳುವುದರಲ್ಲಿ ಮಾನ್ಯ ಶ್ರೀ ಮುಳ್ಳೂರು ಆನಂದರಾವ್‌ರವರ ಜೊತೆಯಲ್ಲಿ ನನ್ನ ಧ್ವನಿಯನ್ನೂ ಕೂಡಿಸುತ್ತೇನೆ. ಆದರೆ ಒಂದು ಮಾತಂತೂ ಖಂಡಿತ. ಇದು ಸಾಕಷ್ಟು ಸಾಕ್ಷರತಾ ಪ್ರಸಾರ ಮಾಡುವುದರಲ್ಲಿ ಸಾಕಷ್ಟು ಕಾರ್ಯ ಮಾಡಿದೆ ಎಂದು ಹೇಳುವಾಗ ಯಾವುದೇ ಅಳತೆ ಗೋಲನ್ನು ಹಿಡಿಯುವುದಕ್ಕೆ ಆಗುವುದಿಲ್ಲ. ಮಾನ್ಯ ಶ್ರೀ ಆನಂದರಾವ್‌ರವರು ಗುರುಕುಲ ಶಿಕ್ಷಣದ ಪದ್ಧತಿ ವಿಷಯ ವಾಗಿ ಮಾತನಾಡುತ್ತಾ ಹೇಳುತ್ತಿದ್ದರು ಆದರೆ ಆ ಪದ್ಧತಿ ಸಾರ್ವತ್ರಿಕವಾಗಿ ಆಗುತ್ತಿರಲಿಲ್ಲವೆನ್ನುವ ಅಂಶವನ್ನು ಅವರ ಗಮನಕ್ಕೆ ತರಬಯಸುತ್ತಿದ್ದೇನೆ. ಅವರೇ ಸ್ವಯಂಪ್ರೇರಿತರಾಗಿ, ಸ್ವಯಂಸ್ಫೂರ್ತಿ ಯಿಂದ ಯಾವುದೋ ಶಿಕ್ಷಣ ಕೊಡುತ್ತಿರಬಹುದು. ಸಾರ್ವತ್ರಿಕವಾಗಿ ಜನಸಾಮಾನ್ಯರಿಗೆ ಅದರಿಂದ ಎಷ್ಟರ ಮಟ್ಟಿಗೆ ಅನುಕೂಲವಾಗುತ್ತಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಸಾರ್ವತ್ರಿಕ ಶಿಕ್ಷಣ ಪದ್ಧತಿಯನ್ನು ಅನುಷ್ಠಾನಕ್ಕೆ ತರುವಲ್ಲಿ ಬ್ರಿಟಿಷರ ಪಾತ್ರ ಈ ದೇಶದಲ್ಲಿ ಅತ್ಯಂತ ಮಹತ್ವದ್ದು ಎಂದು ಭಾವಿಸಬೇಕು. ನಾನು ಹೀಗೆ ಹೇಳುತ್ತೇನೆಂದು, ಬ್ರಿಟಿಷ್ ಪಾದ್ರಿಗಳಾಗಲೀ, ಅಥವಾ ಯುರೋಪಿಯನ್ ಪಾದ್ರಿಗಳಾಗಲೀ ನಡೆಸಿದಂತಹ ಶಿಕ್ಷಣ ಸಂಸ್ಥೆಗಳ ಬೆನ್ನು ತಟ್ಟುತ್ತೇನೆಂದ ತಾವು ಭಾವಿಸಬಾರದು. ಶಿಕ್ಷಣ ಕ್ಷೇತ್ರದ ನೈರ್ಮಲ್ಯದ ಪ್ರಸಿದ್ಧತೆಯನ್ನು ಬಹಳಷ್ಟು ಶಿಕ್ಷಣ ಸಂಸ್ಥೆಗಳು ಕಾಯ್ದುಕೊಂಡು ಬಂದಿವೆ ಎಂಬ ಅಂಶವನ್ನು ನಾವು ಮರೆಯಬಾರದು. ಅವರು ಶಿಕ್ಷಣವನ್ನು ಯಾವುದೇ ಮಾಧ್ಯಮದಲ್ಲಿ ಕೊಡಲಿ, ಅವರು ಕೊಡತಕ್ಕ ಶಿಕ್ಷಣದ ಪದ್ಧತಿ ಚೆನ್ನಾಗಿದೆ. ಮಾನ್ಯ ಶಿಕ್ಷಣ ಮಂತ್ರಿಗಳು ಮಾತನಾಡುತ್ತಾ ಜನರಿಗೆ ಆಂಗ್ಲ ಭಾಷೆಯ ಹುಚ್ಚು ಹಿಡಿದಿದೆ ಎಂದರು. ಆದರೆ ಜನರು ಆಡುವ ಸಾಮಾನ್ಯ ಭಾಷೆಯಲ್ಲಿ (ಕನ್ನಡದಲ್ಲಿ) ಎಷ್ಟರ ಮಟ್ಟಿಗೆ ನಿಮ್ಮ ತಾಂತ್ರಿಕ ಶಿಕ್ಷಣವನ್ನು ಅಭ್ಯಾಸ ಮಾಡಬಹುದು ? ಏನೇನು ಸಾಧನ ಸೌಲಭ್ಯ ಗಳನ್ನು ಕಲ್ಪಿಸಿಕೊಟ್ಟಿದ್ದೀರಿ ಎಂದು ಕೇಳುತ್ತೇನೆ. ಆದಕಾರಣ, ನಾವು ಸಾಮಾನ್ಯವಾಗಿ ಎಲ್ಲ ಶಿಕ್ಷಣವನ್ನು ಆಂಗ್ಲ ಭಾಷೆಯ ಮಾಧ್ಯಮದಲ್ಲಿ ಪಡೆಯಬೇಕಾದ ಪ್ರಸಂಗ ಬಂದಿದೆ. ಈ ಸಂದರ್ಭದಲ್ಲಿ ಒಂದು ವಿಚಾರ ನೆನಪಾಗುತ್ತದೆ. ಅದೇನೆಂದರೆ, ತಮಗೆ ಗೊತ್ತಿರುವ ಹಾಗೆ ಇಸ್ರೇಲ್ ಎಂಬುದು ಒಂದು ಚಿಕ್ಕ ರಾಜ್ಯ. ಇಡೀ ವಿಶ್ವದಲ್ಲೇ ಹರಿದು ಹಂಚಿ ಹೋಗಿದ್ದ ಯಹೂದಿಗಳನ್ನು ಒಟ್ಟುಗೂಡಿಸಿ ರಾಷ್ಟ್ರ ಕಟ್ಟಬೇಕೆಂದಾಗ ಬೆಂಗಳೂರಿನಲ್ಲಿದ್ದುಕೊಂಡು ಕನ್ನಡ ಮಾತನಾಡುತ್ತಿದ್ದ ಯಹೂದಿಯೂ ಸಹ ಅಲ್ಲಿಗೆ ಹೋಗಿರಬಹುದೆಂದು ನನ್ನ ಭಾವನೆ. ಅವರು ತಾವು ಮಾತನಾಡುವಂತಹ ಇಸ್ರೇಲ್ ಭಾಷೆಯನ್ನು ಎಷ್ಟು ತೀವ್ರವಾಗಿ ಪ್ರಸಾರ ಮಾಡಿದರು ಎಂಬುದನ್ನು ಮಾನ್ಯ ಮಿತ್ರರು ಹೇಳುತ್ತಿದ್ದರು, ಮರಳ ದಂಡೆಯ ಮೇಲೆಲ್ಲ ಇಸ್ರೇಲ್ ಭಾಷೆಯನ್ನು ಬರೆದರಂತೆ. ಮರಗಳ ಮೇಲೆ, ಎಲೆಗಳ ಮೇಲೆ ಎಲ್ಲ ಬರೆದು ತಮ್ಮ ಭಾಷೆ ಯನ್ನು ಪ್ರಚಾರ ಮಾಡಿದ ಕೀರ್ತಿ ಆ ರಾಷ್ಟ್ರಕ್ಕೆ ಸಲ್ಲುತ್ತದೆ. ಎಲ್ಲ ಶಿಕ್ಷಣ ರಂಗಗಳಲ್ಲಿಯೂ ಕೂಡ, ಅದು ಮೆಡಿಕಲ್ ಆಗಿರಲಿ, ಇಂಜನಿಯರಿಂಗ್ ಆಗಿರಲಿ, ತಾಂತ್ರಿಕವಾಗಿರಲಿ ಎಲ್ಲ ವಿದ್ಯಾ ಕ್ಷೇತ್ರಗಳಲ್ಲಿಯೂ ಕೂಡ ಅವರು ತಮ್ಮ ಭಾಷೆಯನ್ನು ಅಷ್ಟು ತೀವ್ರವಾಗಿ ಪ್ರಸಾರ ಮಾಡಿದರು ಎಂದು ಕೇಳಿದೆ. ಆದರೆ ನಾವು ಅವರಂತೆ ಮನಸ್ಸು ಮಾಡಲಿಲ್ಲ. ಆದುದರಿಂದ ನಾವು ಪದೇ ಪದೇ ಆಂಗ್ಲ ಭಾಷೆಯನ್ನು ಬಯ್ಯುವುದು ಮತ್ತು ಪುನಃ ಆದರ ಮೊರೆ ಹೋಗುವುದು ಒಂದು ಹವ್ಯಾಸವಾಗಿದೆ. ಇದು ನಮ್ಮ ದೇಶದಲ್ಲಿ ನಡೆದು ಕೊಂಡು ಬಂದಿರುವ ಒಂದು ಪದ್ಧತಿ. ಎಲ್ಲಿಯವರೆಗೆ ನಾವು ನಮ್ಮ ಭಾಷೆ ಕಡೆ ಇಸ್ರೇಲಿಗರಂತೆ ಗಮನ ಕೊಡುವುದಿಲ್ಲವೋ ಅಲ್ಲಿಯವರೆಗೆ ಆಂಗ್ಲ ಭಾಷೆಯನ್ನು ಮರೆ ಹೋಗಬೇಕಾಗುತ್ತದೆ. ಮಾನ್ಯ ಆನಂದ ರಾಯರು ಮಾತನಾಡುವಾಗ ಶಿಕ್ಷಣ ಸಂಸ್ಥೆಗಳ ಪಾವಿತ್ರತೆಯ ಬಗ್ಗೆ ಕೆಲವು ಮಾತುಗಳನ್ನಾಡಿದರು. ಕೆಲವು ಶಿಕ್ಷಣ ಸಂಸ್ಥೆಗಳಂತೂ ವ್ಯಾಪಾರ ಸಂಸ್ಥೆಗಳಾಗಿ ಮಾರ್ಪಟ್ಟಿವೆ ಎಂದರು. ಶಿಕ್ಷಣ ಸಂಸ್ಥೆಗಳ ಶೀಲ ಚಾರಿತ್ರ್ಯವನ್ನು ಬೆಳೆಸಿಕೊಂಡು ಹೋಗಬೇಕೆಂದರೆ ಅದರ ಹಿನ್ನೆಲೆಯಾಗಿ ನೀವು ಮೊದಲು ಧೈರ್ಯ ಮಾಡ

ಬೇಕು. ಈಗಾಗಲೇ ಹಲವಾರು ಕಾರ್ಯಕ್ರಮಗಳ ಬಗ್ಗೆ ಹೇಳುತ್ತಾ ಬಂದಿದ್ದೀರಿ. ನಮ್ಮ ರಾಜ್ಯದಲ್ಲಿಯೂ ಕೂಡ ಶಿಕ್ಷಣದ ವಿಷಯವಾಗಿ ಕೆಲವೊಂದು ವರದಿಗಳನ್ನು ಕೊಟ್ಟಿದ್ದಾರೆ. ದೇವೇಗೌಡರ ಸಮಿತಿಯ ವರದಿ, ಮಲ್ಲಾರಾಧ್ಯರ ಸಮಿತಿಯ ವರದಿಗಳು ಇವೆ. ತಾವು ಕೂಡ ಈ ಒಂದು ಅಧಿವೇಶನದಲ್ಲಿ ಕಾಂಪ್ರಹೆನ್‌ಸೀವ್ ಎಜುಕೇಷನ್ ಬಿಲ್ಲನ್ನು ಮಂಡಿಸುತ್ತೇವೆಂದು ಹೇಳಿದ್ದೀರಿ. ಈ ಸಂದರ್ಭದಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ವಿನಂತಿಸಿಕೊಳ್ಳುತ್ತಿದ್ದೇನೆ. ನಾಯಿ ಕೊಡೆಯಂತೆ ಹುಟ್ಟಿಕೊಳ್ಳುವ ಶಿಕ್ಷಣ ಸಂಸ್ಥೆಗಳನ್ನು ಮುಟ್ಟುಗೋಲು ಹಾಕುವ ಸಲುವಾಗಿ ಎಲ್ಲ ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ತಾವು ಸ್ಪಷ್ಟವಾಗಿ ಉತ್ತರ ಕೊಡಬೇಕಾಗುತ್ತದೆ. ಈಗ ನನಗೆ ದಿನಕರ ದೇಸಾಯಿಯವರ ಒಂದು ಚುಟುಕ ನೆನಪಾಗುತ್ತಿದೆ. ಅದು ಈ ರೀತಿ ಇದೆ —

"ಓ ಮಗನೇ ಬಿದ್ದರೂ ನನಗಿಲ್ಲ ಸೋಲು ಈ ಚುನಾವಣೆಯಲ್ಲಿ ಸೋತರೂ ನಾನು
ಶಾಲೆಗಳ ಕಟ್ಟುವೆನು ಇನ್ನೂ ಹದಿನೈದು"

ಇದರ ಅರ್ಥ ಏನೆಂದರೆ, ಅಲ್ಲಿ ಸಲ್ಲದೆ ಇದ್ದವರು ಇಲ್ಲಿ ಸಲ್ಲುತ್ತಾರೆ ಎಂದು. ಯಾವ ಕಡೆ ಸಲ್ಲದೆ ಇದ್ದವರೂ ಕೂಡ ಶಿಕ್ಷಣ ಸಂಸ್ಥೆಗಳಲ್ಲಿ ಸಲ್ಲುತ್ತಾರೆ. ಒಬ್ಬ ಡಿಸ್‌ಮಿಸ್ ಆದ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಕೂಡ ಇವತ್ತಿನ ದಿವಸ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಇದರಿಂದ, ಎಲ್ಲಿಯೂ ಸಲ್ಲದೆ ಇರುವವರು ಕೂಡ ಇಲ್ಲಿ ಸಲ್ಲುತ್ತಾರೆಂದು ಅರ್ಥವಾಗುತ್ತದೆ.

"ಓ ಮಗನೇ ಬಿದ್ದರೂ ನನಗಿಲ್ಲ ಸೋಲು, ನೆಲದಲ್ಲಿ ಬಿದ್ದಿದೆ ನನ್ನ ಕಾಲು, ಈ ವೃತ್ತಿ
ಯಲ್ಲಿ ಸೋತರೂ ನಾನು ಶಾಲೆ ಕಟ್ಟುವೆನು ಇನ್ನೂ ಹದಿನೈದು"

ಭ್ರಷ್ಟಾಚಾರಿಗಳಿಗೆ ಕೊಳ್ಳೆ ಹೊಡೆಯುವಂತಹ ಒಂದು ಅವಕಾಶ ಇಲ್ಲಿ ದೊರೆತಿದೆ. ಇನ್ನು ತಾವು ೭೫ ಜೂನಿಯರ್ ಕಾಲೇಜುಗಳಲ್ಲಿ ಈ ವರ್ಷದಿಂದ ವೃತ್ತಿ ಶಿಕ್ಷಣವನ್ನು ಆರಂಭಿಸುತ್ತೇವೆಂದೂ ಮತ್ತು ೧೩೦ ಜೂನಿಯರ್ ಕಾಲೇಜುಗಳಲ್ಲಿ ವೃತ್ತಿ ಶಿಕ್ಷಣವನ್ನು ಪ್ರಾರಂಭಿಸತಕ್ಕ ಉದ್ದೇಶವನ್ನು ಇಟ್ಟುಕೊಂಡಿದ್ದೇವೆಂದು ಹೇಳಿದ್ದೀರಿ. ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ, ಕೇವಲ ಜೂನಿಯರ್ ಕಾಲೇಜುಗಳಲ್ಲಿ ಇದನ್ನು ಪ್ರಾರಂಭಿಸುವುದು ಅಲ್ಲ, ಹೈಸ್ಕೂಲ್ ಮಟ್ಟದಲ್ಲಿಯೂ ಪ್ರಾರಂಭಿಸಿ ಎಂದು ಹೇಳುತ್ತೇನೆ. ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಪದವಿ ಪ್ರಧಾನ ಎಂಬ ಆಂದೋಳನ ಇದೆ. ಇದು ಎಷ್ಟರ ಮಟ್ಟಿಗೆ ಸಾಗುತ್ತಿದೆ ಎಂದರೆ, ಉತ್ತರ ಕನ್ನಡ ಜಿಲ್ಲೆಯವರಿಗೆ ಕೊಲ್ಹಾಪುರದ ವಿಶ್ವವಿದ್ಯಾನಿಲಯದ ಪದವಿ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಅವಕಾಶ ಇದೆ, ಬೇರೆಯವರಿಗೆ ಇಲ್ಲ. ಆ ಒಂದು ಪರೀಕ್ಷೆಗೆ ಕುಳಿತುಕೊಳ್ಳುವ ಸಲುವಾಗಿ ಕೆಲವು ಪ್ರಾಥಮಿಕ ಶಾಲಾ ಶಿಕ್ಷಕರು ಸರೆಂಡರ್ ಲೀವ್ ಪಡೆದು ಕೇವಲ ೧೫ ದಿವಸಗಳಲ್ಲಿ ಗೈಡ್ ತೆಗೆದುಕೊಂಡು ದ್ವಿತೀಯ ದರ್ಜೆಯಲ್ಲಿ ಎಂ. ಎ. ಪದವಿಯನ್ನು ಪಡೆಯುತ್ತಾರೆ. ಎಷ್ಟರ ಮಟ್ಟಿಗೆ ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಪದವಿಧಾನವನ್ನು ಧಾರಾಳವಾಗಿ ಮಾಡುತ್ತಿದ್ದಾರೆಂಬುದನ್ನು ನಾವು ಇದರಿಂದ ಕಾಣಬಹುದಾಗಿದೆ. ಇಂಥ ಶಿಕ್ಷಣ ನಮಗೆ ಬೇಡ, ಇಂಥ ಪದವಿ ನಮಗೆ ಬೇಡ. ತಾವು ೮ನೇ ತರಗತಿಯಿಂದ ಟೈಪರೈಟಿಂಗ್ ಮತ್ತು ಷಾರ್ಟ್‌ಹ್ಯಾಂಡನ್ನು ಪ್ರಾರಂಭ ಮಾಡಿಸಿ, ಅಲ್ಲಿಂದಲೇ ಈ ವೃತ್ತಿ ಶಿಕ್ಷಣವನ್ನು ಪ್ರಾರಂಭಿಸಿದರೆ ಕಾಗುಣಿತಗಳನ್ನಾದರೂ (ಸ್ಪೆಲ್ಲಿಂಗ್) ಕಲಿತುಕೊಳ್ಳುತ್ತಾರೆ. ಉತ್ತರಲೇಖನ ಕೊಟ್ಟದ್ದನ್ನಾದರೂ ಬರೆಯುವುದಕ್ಕೆ ತಿಳಿದುಕೊಳ್ಳುತ್ತಾರೆ. ಆಗ ಅವರಿಗೆ ಪದವಿ ಬಗ್ಗೆ ಅಷ್ಟು ಆಕರ್ಷಣೆ ಇರುವುದಿಲ್ಲ. ಇವತ್ತಿನ ದಿವಸ ಕೊಡುತ್ತಿರುವ ಶಿಕ್ಷಣದಿಂದ ಏನೇನೂ ಪ್ರಯೋಜನವಾಗುತ್ತಿಲ್ಲ, ಅದು ಕೇವಲ ಗುಮಾಸ್ತರನ್ನು ತಯಾರಿಸುವ ಶಿಕ್ಷಣವಾಗಿದೆ ಎಂದರೆ ತಪ್ಪಾಗಲಾರದು. ಇಂಥ ಶಿಕ್ಷಣವನ್ನು ನಿರರ್ಥಕ ಶಿಕ್ಷಣ, ಸತ್ವಹೀನ ಶಿಕ್ಷಣವೆಂದು ಕರೆಯಬಹುದು. ಇನ್ನೂ ಮುಂದುವರಿದು ಹೇಳುವುದಾದರೆ ಸತ್ತ ಶಿಕ್ಷಣವೆಂದು ಹೇಳಬಹುದು. ಈ ದೃಷ್ಟಿಯಿಂದ ತಾವು ತಮ್ಮ ನಿಲುವು ಏನಿದೆ ಎಂಬುದನ್ನು ಹೇಳಬೇಕು. ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಬೇಕಾಗಿದೆ. ಇಲ್ಲದಿದ್ದರೆ, ಈ ಒಂದು ರಂಗದಲ್ಲಿ ಇರತಕ್ಕ ರೋಗವನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಇವತ್ತಿನ ದಿವಸ ಇರತಕ್ಕ ನೀತಿಯ ಆಧಾರದ ಮೇಲೆ ರಾಷ್ಟ್ರೀಯ ಶಿಕ್ಷಣವನ್ನು ರೂಪಿಸಲು ಸ್ಪಷ್ಟವಾದ ಬುನಾದಿಯನ್ನು ಹಾಕುವುದಕ್ಕೆ ಸಾಧ್ಯವಿಲ್ಲವಾಗಿದೆ. ಈ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಎಷ್ಟೋ ಸಭೆ-ಸಮ್ಮೇಳನಗಳು ನಡೆಯುವುದನ್ನು ನೋಡುತ್ತಿದ್ದೇವೆ. ಆದರೂ ಕೂಡ ಏನೊಂದು ನಿರ್ಧಾರವನ್ನು ಕೈಗೊಳ್ಳದೆ ಇರುವ ಪರಿಸ್ಥಿತಿಯಲ್ಲಿದ್ದೇವೆ. ಶಿಕ್ಷಣಕ್ಕೆ ಒಂದು ಸ್ವಚ್ಛವಾದ ರೂಪವನ್ನು ಸರ್ಕಾರ ರೂಪಿಸಬೇಕು ಮತ್ತು ಎಲ್ಲ ಖಾಸಗೀ ಶಾಲೆಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಮತ್ತೊಮ್ಮೆ ಪ್ರಾರ್ಥಿಸಿಕೊಳ್ಳುತ್ತೇನೆ.

(ಉಪ ಸಭಾಧ್ಯಕ್ಷಿಣಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

೪-೩೦ ಪಿ. ಎಂ.

ಶಿಕ್ಷಣ ಕ್ಷೇತ್ರದ ಬಗ್ಗೆ ಹೇಳುವುದಾದರೆ ಇದು ಒಂದು ಪವಿತ್ರವಾದ ಕ್ಷೇತ್ರ. ಭಾವಿ ಜನಾಂಗವನ್ನು ಸೃಷ್ಟಿ ಮಾಡತಕ್ಕ ಕೇಂದ್ರ ಬಿಂದು ಶಿಕ್ಷಣ ಖಾತೆ ಬೇಡಿಕೆ ಒಂದು ಮಹತ್ವದ ಬೇಡಿಕೆ. ಈ ದೃಷ್ಟಿಯಿಂದ ವಿಚಾರ ಮಾಡುವಾಗ ಇವತ್ತು ನಮ್ಮ ಶಾಲಾ ಕಾಲೇಜುಗಳಲ್ಲಿ ಶಿಕ್ಷಕರ ಪಾತ್ರ ಯಾವರೀತಿ ಸಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಶೀಲ ಮತ್ತು ಚಾರಿತ್ರ್ಯವನ್ನು ಕಾಪಾಡಿಕೊಂಡು ಹೋಗಬೇಕಾದ ಕ್ಷೇತ್ರ ಎಂದರೆ ತಪ್ಪಾಗಲಾರದು. ಶಿಕ್ಷಣ ಕ್ಷೇತ್ರದಲ್ಲಿ ಆಡಳಿತಾತ್ಮಕವಾದ ದೃಷ್ಟಿಯಿಂದ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಶಿಕ್ಷಣ ಇಲಾಖೆಯಲ್ಲಿ ಆಡಳಿತಾಧಿಕಾರಿಗಳು ಯಾವರೀತಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಮುಖ್ಯವಾಗಿ ತಿಳಿದುಕೊಳ್ಳಬೇಕಾದುದು ಅವಶ್ಯಕವಾಗಿದೆ. ನಮ್ಮ ಸಿದ್ದಾಪುರ ತಾಲ್ಲೂಕಿನಲ್ಲಿ ಒಬ್ಬ ಎ. ಇ. ಒ. ಇದ್ದರು. ಅವರ ಶೀಲ, ಚಾರಿತ್ರ್ಯ ಯಾವರೀತಿ ಇತ್ತು ಎಂಬುದನ್ನು ಹೇಳುತ್ತಿದ್ದೇನೆ. ಯಾರೋ ಒಬ್ಬ ಶಿಕ್ಷಕ ಆ ಎ. ಇ. ಒ. ಅವರನ್ನು ರಾತ್ರಿ ಮನೆಗೆ ಊಟಕ್ಕೆ ಕರೆದ. ಶಿಕ್ಷಕನ ಆಹ್ವಾನದಂತೆ ಎ. ಇ. ಒ. ಅವನ ಮನೆಗೆ ಹೋದ. ಊಟವೆಲ್ಲಾ ಆದಮೇಲೆ ಶಿಕ್ಷಕನನ್ನು ಎ. ಇ. ಒ ಬಾಳೆಹಣ್ಣು ತರುವುದಕ್ಕೆ ಕಳುಹಿಸಿದ. ಶಿಕ್ಷಕ ಬಾಳೇಹಣ್ಣು ತರುವುದಕ್ಕೆ ಹೋದ ಸಮಯದಲ್ಲಿ ಆತನ ಪತ್ನಿಯ ಮೇಲೆ ಅತ್ಯಾಚಾರಕ್ಕೆ ಬಲಾತ್ಕಾರಮಾಡಿದ. ಆಕೆಯೂ ಶಿಕ್ಷಕಿ. ಆಕೆಗೆ ಧರ್ಮ ಸಂಕಟ. ಈ ಸಂದರ್ಭದಲ್ಲಿ ಏನು ಮಾಡಬೇಕು ಎಂಬುದನ್ನು ತಿಳಿಯಲಿಲ್ಲ. ಒಂದು ದೃಷ್ಟಿಯಿಂದ ಅವರು ಸಾಹೇಬರು, ಏನಾದರೂ ತಿರಸ್ಕಾರ ಮಾಡಿದರೆ ತೊಂದರೆ ಮಾಡಬಹುದು ಎಂಬ ಭಯ. ಇನ್ನೊಂದು ದೃಷ್ಟಿಯಿಂದ ನೋಡಿದರೆ ಮಾನ ಹೋಗುತ್ತದೆ. ಅವಳು ಸಾಹೇಬರಿಗೆ 'ಕ್ಷಮಿಸಿ ಕೇಳಿಕೊಳ್ಳುತ್ತೇನೆ, ದಯವಿಟ್ಟು ನನ್ನನ್ನು ಬಿಟ್ಟು ಬಿಡಿ' ಎಂದು ಹೇಳಿದಳು. ಅವನು ಬಿಡಲಿಲ್ಲ. ಬೊಬ್ಬೆ ಹೊಡೆದಳು, ನಂತರ ಜನರೆಲ್ಲಾ ಕೂಡಿದರು. ಮಾರನೇ ದಿವಸ ಅವನಿಗೆ ಸಿಕ್ಕಿದ ಬಹುಮಾನ ಏನೆಂದರೆ ಆ ಊರಿನಿಂದ ೧೫ ಮೈಲಿ ದೂರಕ್ಕೆ ಆವನ ಗಂಡನ ವರ್ಗ. ಇದನ್ನು ನಾನು ಶಿಕ್ಷಣ ಮಂತ್ರಿಗಳ ಗಮನಕ್ಕೆ ತಂದೆ. ಅವರು ರಾಯಚೂರಿಗೆ ವರ್ಗ ಮಾಡಿದರು. ಆತನ್ನು ಸರ್ಕಾರಕ್ಕೆ ಒಂದು ಅರ್ಜಿ ಕೊಟ್ಟ. ಸಿದ್ದಾಪುರ ಅಥವಾ ಸಿರ್ಸಿಗೆ ಬರುವುದಕ್ಕೆ ಅಲ್ಲಿಯವರೆಗೆ ಅವನು ೬ ತಿಂಗಳು ರಜೆ ತೆಗೆದುಕೊಂಡ. ಅವನನ್ನು ಸಿರ್ಸಿ ಹೈಸ್ಕೂಲಿಗೆ ವರ್ಗ ಮಾಡಿದರು. ಆ ಎ. ಇ. ಒ. ಉತ್ತರ ಕನ್ನಡ ಜಿಲ್ಲೆಯಲ್ಲೇ ಸಬ್ಜೆಕ್ಟ್ ಇನ್ಸ್‌ಪೆಕ್ಟರಾಗಿದ್ದಾನೆ. ಕಾರವಾರ ಬಿಟ್ಟು ಹೋಗಲಿಲ್ಲ. ಹೀಗೆ ಶಿಕ್ಷಣ ಇಲಾಖೆಯಲ್ಲಿ ಕೆಲವು ಅಧಿಕಾರಿಗಳು ಈ ರೀತಿ ನಡೆದುಕೊಳ್ಳುತ್ತಿದ್ದಾರೆ. ಈ ರೀತಿ ಆದರೆ ಶಿಕ್ಷಣ ಕ್ಷೇತ್ರ ಪವಿತ್ರವಾದಕ್ಷೇತ್ರವಾಗಿ ಉಳಿಯುವುದು ಹೇಗೆ ಸಾಧ್ಯ? ಹಿಂದೆ ಡಿ.ಪಿ.ಐ. ಎಂದು ಇದ್ದದ್ದನ್ನು ಈಗ ಬದಲಾಯಿಸಿ ಶಿಕ್ಷಣಇಲಾಖೆಗೆ ಕಮಿಷನರ್ ಎಂದು ಮಾಡಿದ್ದಾರೆ. ಇದರಿಂದ ಪ್ರಯೋಜನ ಏನೋ ತಿಳಿಯಲಿಲ್ಲ. ಅಲ್ಲಿ ಈಗ ಕಮಿಷನರ್ ಆಗಿರುವವರಿಗೆ ಕನ್ನಡ ಭಾಷೆಯ ಪರಿಜ್ಞಾನ ಇಲ್ಲ. ಅವರಿಗೆ ಕನ್ನಡವೇ ಬರುವುದಿಲ್ಲ. ಅವರ ಹತ್ತಿರ ಸಾಮಾನ್ಯ ಜನರು ಹೋಗಿ ಮಾತನಾಡುವುದಾದರೂ ಹೇಗೆ ? ಅವರು ಅಲ್ಲಿ ಯಾವರೀತಿ ಕೆಲಸ ಮಾಡುತ್ತಾರೋ ಯಾವ ರೀತಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೋ ನನಗೆ ಗೊತ್ತಾಗುವುದಿಲ್ಲ ಒಟ್ಟಿನಲ್ಲಿ ಅಲ್ಲಿ ಕನ್ನಡ ಬಲ್ಲ ಯೋಗ್ಯ ಅಧಿಕಾರಿಗಳನ್ನು ಹಾಕುವುದು ಒಳ್ಳೆಯದು ಎಂದು ಹೇಳುತ್ತೇನೆ. ಇನ್ನು ಹಲವಾರು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕಾಗಿದ್ದರೂ ಸಮಯದ ಅಭಾವದಿಂದ ಇಷ್ಟಕ್ಕೇ ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತಾ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ರಾಮಭಟ್ (ಪುತ್ತೂರು).—ಮಾನ್ಯ ಅಧ್ಯಕ್ಷರೇ ಈ ಶಿಕ್ಷಣ ಇಲಾಖೆ ಬೇಡಿಕೆಯ ಮೇಲೆ ಕೇವಲ ಎರಡು ವಿಚಾರಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ ಈಗ ಶಿಕ್ಷಣದ ಮೂಲ ಉದ್ದೇಶ ಏನು ಎಂಬುದರ ಬಗ್ಗೆ ಚರ್ಚೆ ಇಲ್ಲ. ಒಬ್ಬ ವಿದ್ಯಾರ್ಥಿಯಲ್ಲಿ ಸುಪ್ತವಾಗಿರುವಂಥ ಪ್ರತಿಭೆ ವಿಕಾಸವಾಗುವುದಕ್ಕೆ ಅವಕಾಶ ಮಾಡಿಕೊಡುವುದೇ ವಿದ್ಯಾಭ್ಯಾಸದ ಉದ್ದೇಶ. ಆದರೆ ಇವತ್ತು ನಾವು ಕೊಡುತ್ತಿರುವ ಶಿಕ್ಷಣ ಯಾವರೀತಿಯಲ್ಲಿದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಅವನು ಉದ್ಯೋಗಕ್ಕೆ ಸೇರುವುದಕ್ಕೆ ಅನುಕೂಲವಾಗುವಂಥ ಶಿಕ್ಷಣವನ್ನು ಒದಗಿಸಬೇಕಾದುದು ಮುಖ್ಯ ಎಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. ನಾವು ಯಾವ ರೀತಿಯ ಶಿಕ್ಷಣವನ್ನು ಕೊಡುತ್ತಿದ್ದೇವೆ ಎಂಬುದರ ಬಗ್ಗೆ ಸಾಕಷ್ಟು ವಿಶ್ಲೇಷಣೆ ನಡೆದಿದೆ. ಮಾನ್ಯ ಸದಸ್ಯರಾದ ಶ್ರೀ ಮಾಳಪ್ಪನವರು ಇದರ ಬಗ್ಗೆ ಮಾತನಾಡುತ್ತಾ ನಮ್ಮ ಶಿಕ್ಷಣದಲ್ಲಿ ನೈತಿಕತೆ ಮತ್ತು ಆದರ್ಶಗಳು ಇಲ್ಲ ಎಂದು ಹೇಳಿದ್ದಾರೆ. ನಾವು ಎಲ್ಲಾ ಸೌಕರ್ಯ

ಗಳನ್ನು ವಿದ್ಯಾರ್ಥಿಗಳಿಗೆ ಕೊಡುತ್ತಿದ್ದೇವೆ. [illegible] ಅಗತ್ಯವಾಗಿರುವಂಥ ಶಿಕ್ಷಣದ ಲೋಪ ಇರುವಂಥಾದ್ದು ಕಾಣುತ್ತಿದೆ. ವಿದ್ಯಾರ್ಥಿ [illegible] ದೇಶಕ್ಕೆ ಅವರು ಒಂದು ಸ್ವತ್ತಾಗಬೇಕು ಎಂಬ ವಿಚಾರವನ್ನು [illegible] ಯುವಜನಾಂಗ ತಯಾರಾಗಬೇಕಾದರೆ ಯಾವರೀತಿಯ ಶಿಕ್ಷಣ [illegible] ಯಾರೂ ಹೇಳುವುದಕ್ಕೆ ತಯಾರಿಲ್ಲ. ಈ [illegible] ಕಾಲದಲ್ಲಿ ಅನೇಕರು ದೇಶಕ್ಕಾಗಿ [illegible] ಮಾಡಿದರೆ? ಆದರ್ಶದ ಹಿಂದೆ ಹೋಗಿ [illegible] ಅಂಥ ಶಿಕ್ಷಣವನ್ನು ನೀವು ಕೊಡುತ್ತಿದ್ದೀರಾ? [illegible] ಆಗಿರುವ ಶಿಕ್ಷಣ ಪದ್ಧತಿಯಲ್ಲೇ ರತ್ನಗಳನ್ನು [illegible] ಶಿಕ್ಷಣವನ್ನು ಕೊಟ್ಟರೆ ಶ್ರೇಷ್ಠ ವ್ಯಕ್ತಿಗಳನ್ನು [illegible] ಮಾಡುವುದಕ್ಕೆ [illegible]. ನಾವು ಎಂಥ ಆದರ್ಶವನ್ನು ಹಾಕುತ್ತಿದ್ದೇವೆ ಎಂಬುದನ್ನು [illegible] ಕ್ಕೆ ಹೋಗಬೇಕು? ನಾವು ರಾಜಕೀಯ ಪ್ರಧಾನವಾದ ಸಮಾಜವನ್ನು [illegible] ರಾಜಕಾರಣಿಯನ್ನು ಬೆನ್ನು ಹತ್ತುವಂಥ [illegible] ಪ್ರಾರ್ಥಿಸಿಕೊಳ್ಳುವಂಥ ರಾಜಕೀಯ ಪ್ರಧಾನವಾದ ಸಮಾಜವನ್ನು [illegible] ವ್ಯಕ್ತಿಗೆ ರಾಜಕೀಯ ಪ್ರಧಾನವಲ್ಲ. ಇವರ ಜೀವನಕ್ಕಾಗಿ [illegible] ರಾಜಕೀಯ ಕೂಡ ಜೀವನದ ಒಂದು ಅಂಶ ಮಾತ್ರ. [illegible] ಎಲ್ಲದಕ್ಕೂ ರಾಜಕೀಯ ಬಣ್ಣವನ್ನು ಬಳಿದು [illegible]. [illegible] ಆಡುತ್ತಿದ್ದಾರೆ, ರಾಜಕಾರಣಿಗಳು ಯಾವರೀತಿ ಭ್ರಷ್ಟ [illegible]. ಇದನ್ನು ನೋಡಿ ಅವರೂ ಕೂಡ ಪರೀಕ್ಷೆಯಲ್ಲಿ ನಕಲು [illegible] ತ್ತಿದ್ದಾರೆ. ಈ ರೀತಿ ನಾವು ರಾಜ್ಯವನ್ನು ಕಟ್ಟುತ್ತಿದ್ದೇವೆ. ಇದನ್ನು [illegible] ಸರಿಯಲ್ಲ ಎಂದು ಅವರನ್ನು ದೂರುವುದು ಸರಿಯಲ್ಲ. [illegible] ಹೋದರೆ ನಮ್ಮ ಮಕ್ಕಳು ಏನು ಮಾಡುತ್ತಾರೆ? [illegible] ಸಂಪಾದನೆ ಮಾಡಬೇಕು ಎಂಬ ವಿಧಾನಕ್ಕೆ ಈಗ ಹೆಚ್ಚು ಬೆಲೆ ಬಂದಿದೆ. [illegible] ಮೇಧಾವಿಗಳೆಲ್ಲಾ ಬೇರೆ ದೇಶಕ್ಕೆ ಹೋಗುತ್ತಿದ್ದಾರೆ.

"ಇಲ್ಲಿ ಗಂಜಿ ತಿಂದಾದರೂ ಬದುಕುತ್ತೇವೆ [illegible] ಬೇಡ" ಎಂದು ನಾವು ಅವತ್ತು ಹೇಳುತ್ತಿದ್ದೆವು. ಇವತ್ತು "ಗಂಜಿ ತಿನ್ನುವುದಕ್ಕೆ [illegible] ಪರದೇಶಗಳಿಗೆ ಹೋಗಿ ಸುಖ ಭೋಗಗಳನ್ನನುಭವಿಸುತ್ತೇವೆ" ಎಂದು [illegible] ಹೇಳುತ್ತಿದ್ದಾರೆ. ನಾನೊಂದು ಪ್ರಶ್ನೆ ಕೇಳುತ್ತೇನೆ: ನಮ್ಮ ದೇಶದ ಪುಣ್ಯಪುರುಷರ ಆದರ್ಶ [illegible]? [illegible] ವಿದ್ಯಾರ್ಥಿಗಳಿಗೆ ನಮ್ಮ ದೇಶದ ಪುಣ್ಯ ಪುರುಷರ ಆದರ್ಶ ಪಥದಲ್ಲಿ ಹೋಗುವುದಕ್ಕೆ [illegible]? ಸತ್ಪುರುಷರ ಮತ್ತು ಮಹಾವ್ಯಕ್ತಿಗಳ ಜೀವನ ಚರಿತ್ರೆ [illegible] ಪರಿಣಾಮವನ್ನುಂಟು ಮಾಡುವ ದಿಸೆಯಲ್ಲಿ ಏನಾದರೂ [illegible] ನಮ್ಮ ಮಕ್ಕಳು ಮಾತ್ರ ಒಳ್ಳೆಯವರಾಗಬೇಕೆಂದು ಅಪೇಕ್ಷೆ, [illegible] ಹೇಳುವುದಾದರೆ, ಒಬ್ಬ ತಂದೆ ತನ್ನ ಮಗ ಕಾಫಿ ಕುಡಿಯುವುದನ್ನು [illegible] ಸ್ವಾಮಿಗಳ ಹತ್ತಿರ ಕರೆದುಕೊಂಡು ಹೋದನಂತೆ. ಆಗ ಸ್ವಾಮಿಗಳವರು, [illegible] ಬಿಟ್ಟು ಬರಲು ಹೇಳಿದರು ಆ ತಂದೆ ಅದರಂತೆ ಒಂದು ವಾರ ಬಿಟ್ಟು [illegible] ಇನ್ನೂ ಒಂದು ವಾರ ಬಿಟ್ಟು ಬರಲು ಹೇಳಿದರು. ಮತ್ತೆ [illegible] ಬಿಟ್ಟು ಹೋದ ಮೇಲೆ ಆ ತಂದೆಯ ಮಗನನ್ನು ಸ್ವಾಮಿಗಳು ಸೇರಿಸಿಕೊಂಡರಂತೆ. [illegible] ಸ್ವಾಮಿಯನ್ನು ಕುರಿತು, ನಾನು ಮೊದಲನೆ ಮತ್ತು ಎರಡನೇ [illegible] ಸೇರಿಸಿಕೊಳ್ಳಲಿಲ್ಲವೆಂದು ಕೇಳಿದ್ದಕ್ಕೆ, ಸ್ವಾಮಿಗಳು, [illegible] ಕಾಫಿ [illegible], ನಾನು ಕಾಫಿ ಕುಡಿಯುವಾಗ ಇನ್ನೊಬ್ಬರನ್ನು [illegible]? [illegible]. ನಾನು ಮೊದಲು ಕಾಫಿ ಕುಡಿಯುವುದನ್ನು ನಿಲ್ಲಿಸಲು [illegible] ಕಾಫಿ ಕುಡಿಯುವುದನ್ನು ಬಿಟ್ಟ ನಂತರ ನಿಮ್ಮ ಹುಡುಗನನ್ನು ಸೇರಿಸಿಕೊಂಡೆನು [illegible] ಆ ರೀತಿಯ ಸಿದ್ಧತೆ ಇಲ್ಲಿ ಆಗಬೇಕು.

ಶ್ರೀ ಎಂ. ಸಿ. ನಾಣಯ್ಯ: ಈಗಿನ ಉಪಾಧ್ಯಾಯರು ಪಾಠ ಹೇಳುವುದೊಂದನ್ನು ಬಿಟ್ಟು ಬಾಕಿ ಎಲ್ಲವನ್ನೂ ಕಲಿತಿದ್ದಾರೆ.

ಶ್ರೀ ಡಿ. ಟಿ. [illegible] ಕಾಲದಲ್ಲೂ ಹೀಗೇ ಇತ್ತೆ?

ಶ್ರೀ ಎಂ. [illegible] [illegible] ಶಕ್ತಿಗಳು ಅನುಸರಿಸಿದ ಸನ್ಮಾರ್ಗ ಗಳು ನಮ್ಮ ವಿದ್ಯಾರ್ಥಿಗಳಿಗೆ [illegible] ವ್ಯವಸ್ಥೆ ಇರಬೇಕು. ಈಗ ಏನಾಗಿದೆ ಎಂದರೆ ಗಣಪತಿಯನ್ನು ಮಾಡುವುದಕ್ಕೆ [illegible] ಇಟ್ಟು ಬರೀ ಕಪಿಗಳನ್ನು ಮಾಡಲಾಗುತ್ತಿದೆ. [illegible] ಆಲೋಚನೆ ಮಾಡಬೇಕಾಗಿದೆ. ಈ ದೇಶದಲ್ಲಿ ಬಹಳ ಮಂದಿ [illegible] ಇದ್ದಾರೆ. ಅವರ ಸಹಕಾರ ದೊಂದಿಗೆ ನಮ್ಮ ಭವಿಷ್ಯ [illegible] ಮಾಡಿದ್ದರೆ ಇಂದಿನ ವಿದ್ಯಾರ್ಥಿ ಗಳು ಮುಂದೆ [illegible]. ಆದುದರಿಂದ, ದೇಶಭಕ್ತಿ, ನಮ್ಮ ಸಂಸ್ಕೃತಿ, ನಮ್ಮ [illegible] ಇವುಗಳನ್ನು ಶಿಕ್ಷಣ ರೂಪದಲ್ಲಿ ಮಕ್ಕಳಿಗೆ [illegible].

ಈಗ ನಮ್ಮ ಶಿಕ್ಷಣ ವ್ಯವಸ್ಥೆ ಅಧಃಪತನಕ್ಕಿಳಿದಿದೆ ಎಂದರೆ, ತಪ್ಪಾಗಲಾರದು. ಮೊದಲು ಎಸ್.ಎಸ್.ಎಲ್.ಸಿ. [illegible] ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ [illegible] ಉಪಾಧ್ಯಾಯ[illegible] ಕೊಡುತ್ತಿದ್ದರು. ಮೊದಲು ಸರ್ಕಾರಕ್ಕೆ ಉಪಾಧ್ಯಾಯರ ಮೇಲೆ [illegible] ವಿದ್ಯಾರ್ಥಿಗಳಲ್ಲೂ ಮತ್ತು ಉಪಾಧ್ಯಾಯರಲ್ಲೂ ಪರಸ್ಪರ ವಿಶ್ವಾಸ [illegible] ಪತ್ರಿಕೆಗಳನ್ನು [illegible] ಕಡೆಗಳಲ್ಲಿ ಪೋಲೀಸ್ ಕಾವಲಿ ನಲ್ಲಿ ಮೌಲ್ಯಮಾಪನ [illegible] ಈಗ ಸರ್ಕಾರಕ್ಕೆ ಯಾರ ಮೇಲೂ ನಂಬಿಕೆ ಇಲ್ಲ. ಪರಸ್ಪರ [illegible] ಹೀಗೆ ನಾವು ಕೆಳಗಡೆ ಹೋಗು ತ್ತಿದ್ದೇವೆ [illegible] ಉಪಾಧ್ಯಾಯರುಗಳಿಗೆ ವಿದ್ಯಾರ್ಥಿಗಳ ಮೇಲೆ [illegible] ಉಪಾಧ್ಯಾಯರ ಮೇಲೆ ನಂಬಿಕೆ ಇಲ್ಲ, ಸರ್ಕಾರಕ್ಕೆ ಉಪಾಧ್ಯಾಯರ ಮೇಲೆ [illegible] ಇಲ್ಲ.

ಶ್ರೀ ಜಿ. ಬಿ. ಶಂಕರ[illegible] [illegible] ದೋಷ ಯಾರು?

ಶ್ರೀ ಕೆ. ರ[illegible] [illegible] ಇದ್ದರೆ, ಪೋಲೀಸ್ ಕಾವಲು ಏತಕ್ಕೆ ಇರಬೇಕು? [illegible] ಸೂತ್ರರೂಪವಾಗ ಅದನ್ನು ಬಾಯಲ್ಲಿ ಬೇರೆ ಹೇಳಬೇಕೆ? [illegible] ಪರಸ್ಪರ ಅಪನಂಬಿಕೆ. ಅಧ್ಯಾಪಕರಲ್ಲೂ ಮತ್ತು ವಿದ್ಯಾರ್ಥಿಗಳಲ್ಲೂ [illegible] ಕ್ಷೇತ್ರದಲ್ಲಿ ಪ್ರಪಾತಕ್ಕೆ ಇಳಿಯು ತ್ತಿದ್ದೇವೆ. ಈ[illegible] [illegible] ಖಂಡಿತ ಇದನ್ನು ನಿಲ್ಲಿಸು[illegible] ಇದನ್ನೆಲ್ಲ ತಡೆಗಟ್ಟಬಹುದು. ಇಂದಿನ ವಿದ್ಯಾರ್ಥಿ[illegible] ಮಾಡಲಿಕ್ಕೆ ಸಿದ್ಧವಾಗಿದ್ದಾರೆ. ಇಲ್ಲಿ ಅವಕಾಶ[illegible]? ಅ[illegible]. ಇ[illegible] ವಿದ್ಯಾರ್ಥಿಗಳಿಗೆ ದೇಶಪ್ರೇಮವನ್ನು ಪ್ರೇರೇಪಿಸುವ ಶಿಕ್ಷಣ [illegible] ದೇಶಕ್ಕಾಗಿ ಜೀವದ ಹಂಗು ತೊರೆದು ಹೋರಾಡು[illegible] ಆಕ್ರಮಣ ಸಂದರ್ಭದಲ್ಲಿ ನಮ್ಮ ದೇಶದ [illegible] ಕಣ್ಣಮುಂದೆ ಇಲ್ಲವೆ? ಆದರೆ, ಇತ್ತೀಚಿಗೆ ನಮ್ಮಲ್ಲಿ [illegible] ಯೋಜನೆ ಮಾಡುವದೇ ಜಾಸ್ತಿಯಾಗಿದೆ. [illegible] ನಾವು [illegible] ಮಾಡುತ್ತಿದ್ದೇವೆ. ಒಬ್ಬ [illegible] ವ್ಯಕ್ತಿ[illegible] ಪ್ರಭಾವದಿಂದಾಗಿ ವರ್ಗವಾಗುವ ಪರಿಸ್ಥಿತಿಯುಂಟಾಗ[illegible] [illegible]ಕೊಳ್ಳುತ್ತಿದೆ. ಇದು ತಮಗೂ ಗೊತ್ತುಂಟು.

ಶ್ರೀ ಜಿ. ಬಿ. ಶಂಕರರಾವ್: [illegible] ನೀವು ಮೊದಲು ಅರ್ಥ ಮಾಡಿಕೊಳ್ಳಿ.

ಶ್ರೀ ಕೆ. ರಾ[illegible]: [illegible] ಕೇವಲ ಯಾರನ್ನೋ ಸಮಾಧಾನ ಪಡಿಸುವ ಸಲುವಾಗಿ, ಸಿಕ್ಕಿದ ಊರುಗಳಿಗೆ ವರ್ಗ ಮಾಡಿದ್ದಾರೆ. ಇದು ತಮಗೆ ಗೊತ್ತುಂಟು ಎಂದು

ನಾನು ಹೇಳುವುದಿಲ್ಲ. ಆದರೆ, ಏಕೆ ಹೀಗೆ ಮಾಡಬೇಕು? ರಾಜಕೀಯ ಪಕ್ಷದಕ್ಕೆ ಬಲಿ ಬಿದ್ದು ವರ್ಗ ಮಾಡಿದರೆ ಉಪಾಧ್ಯಾಯರುಗಳ ಗತಿ ಏನು? [illegible], ಮಾನ್ಯ ಶಿಕ್ಷಣ ಸಚಿವರು ಅಥವಾ ಮಾನ್ಯ [illegible] ಅವರ ಹಿಂದೆ ಇವರು ಓಡಾಡುತ್ತಿರಬೇಕು. ಇದೊಂದು ಅಂಟುರೋಗ. ರಾಜಕೀಯ ಪಕ್ಷದವರಿಗಾಗಿ [illegible] ಅವರನ್ನು ವರ್ಗ ಮಾಡಿದರೆ ಅವರು ನಮ್ಮ ಹಿಂದೆ ಸುತ್ತುತ್ತಾ ಇರುತ್ತಾರೆ. [illegible]. ಶಿಕ್ಷಣದ ಎಲ್ಲ ಅಂಗಗಳಲ್ಲಿಯೂ ರಾಜಕೀಯವನ್ನು ತರಲಾಗುತ್ತಿದೆ. ಮದುವೆಗೆ [illegible] ಕೇಳುತ್ತಾರೆ. ಏಕೆ? [illegible] ಕಾಲೇಜಿಗೆ ಸೀಟಿಗಾಗಿ ಒಂದೂವರೆ ಲಕ್ಷ ರೂಪಾಯಿ [illegible] ಇಡಬೇಕಿಲ್ಲ. ಅದನ್ನು ಯಾವನಿಂದ ವಸೂಲು ಮಾಡಿಕೊಂಡು [illegible] ಇದನ್ನೆಲ್ಲ ನೋಡಿದರೆ ನಾವು ಮುಂದೆ ಎಲ್ಲಿಗೆ ಹೋಗುತ್ತೇವೆ ಎನ್ನುವುದು ಗೊತ್ತಾಗುತ್ತಿಲ್ಲ.

ಸುಮಾರು ೪,೦೦೦ ಉಪಾಧ್ಯಾಯರ ಹುದ್ದೆಗಳು ಖಾಲಿ ಇವೆ ಎಂದು ಹೇಳಲಾಗಿದೆ. ಈ ಉಪಾಧ್ಯಾಯರ [illegible] ಮಾಡಿದರು. ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಗಳಲ್ಲಿ ರಾಜಕೀಯ ವ್ಯಕ್ತಿಗಳನ್ನು [illegible]. [illegible] ರಾಜಕೀಯ ವ್ಯಕ್ತಿಗಳು ನೌಕರಿಗಾಗಿ ಯಾರ ಯಾರು ಇವರನ್ನು ಕೇಳುತ್ತಾರೆ ಅವರಿಂದ [illegible] ಸಾವಿರ ರೂಪಾಯಿಗಳವರೆಗೆ ವಸೂಲು ಮಾಡಿಕೊಂಡರು. [illegible] ಮಾಡಿದರು. [illegible] ಈ ಸಮಿತಿಗಳನ್ನು ರದ್ದು ಮಾಡಿದರು. ಪಾಪ! ಅರ್ಜಿ [illegible] ಕೊಟ್ಟರೆ...

ಶ್ರೀ ಜಿ. ಬಿ. ಶಂಕರರಾವ್.—[illegible].

ಶ್ರೀ ಕೆ. [illegible] ಉಪಾಧ್ಯಾಯರಿಗೆ ಮಾಡಿದರೆ ಹೇಗೆ? ಮೂರು ಸಾವಿರ ರೂಪಾಯಿ [illegible] ಉಪಾಧ್ಯಾಯನಾದರೆ ಅವನು ಏನು [illegible]? ಅವನು ಮಕ್ಕಳಿಗೆ [illegible] ರಾಜಕೀಯವನ್ನು ಕಲಿಸುವವರೆಗೆ ಮುಂದು [illegible] ಅವನ್ನು ಬಿಟ್ಟರೆ ನಮ್ಮ ದೇಶಕ್ಕೆ [illegible] ಶಾಲೆಗಳಲ್ಲಿ [illegible] ಈ ಸ್ಥಿತಿ ಏಕೆ ಬಂತು? ಪ್ರಾಥಮಿಕ [illegible] ಮಾಡುವುದಿಲ್ಲ? [illegible] ಬೇಕಾದ ಸಿದ್ಧತೆಯನ್ನು [illegible] ಶಾಲೆಗಳಲ್ಲಿ ಅಧ್ಯಾಪಕರ ಕೊರತೆ ಇಲ್ಲ. ಆದರೆ ಸರ್ಕಾರಿ ಶಾಲೆಗಳಲ್ಲಿ ಏಕೆ? [illegible] ಏನು? ಇದು [illegible] ಅದಕ್ಷತೆಯಿಂದ ನಡೆಯುತ್ತಿರುವುದಕ್ಕೆ [illegible]. [illegible] ಮಾಡಬೇಕಾದರೆ [illegible] ಸಲಕರಣೆಗಳನ್ನು [illegible] ಉತ್ತಮ ಶಿಕ್ಷಣ ನೀಡಲು ಬೇಕಾದ ಸೌಲಭ್ಯಗಳನ್ನು [illegible] ಗ್ರಾಮಗಳಲ್ಲಿ [illegible] ಶಿಕ್ಷಕರ ಕೊರತೆ ಇಲ್ಲದಂಥ ವ್ಯವಸ್ಥೆಯನ್ನು ಈಗ [illegible] ಆ ರೀತಿ ಮಾಡಿದರೆ [illegible] ನೇಮಿಸಿ ಉಪಾಧ್ಯಾಯರ [illegible] ಶಾಲೆಗಳಲ್ಲಿ ಅಧ್ಯಾಪಕರಿಲ್ಲ. ಅಧ್ಯಾಪಕರನ್ನು [illegible] ಹಿಂದೆ [illegible] ಮಾಡಲಿಲ್ಲ? [illegible] ಅವರನ್ನು ವಾಪಸ್ [illegible]? [illegible] ನನಗೆ [illegible] ಇದೆ. ಅವರಲ್ಲಿ ಒಂದು [illegible] ಇಟ್ಟಿದ್ದಾರೆ. [illegible] ಹೋಗುತ್ತಾರೆ. ಅಲ್ಲಿ ಮಂಜುನಾಥ ಸ್ವಾಮಿ [illegible] ಇದ್ದಾರೆ. ಆದರೂ ಅವರೆಲ್ಲ ಬಂದು ನಮಸ್ಕಾರ ಮಾಡಿ ಹೋಗುತ್ತಾರೆ. ಆ

ರೀತಿ ವಾತಾವರಣವನ್ನು ಸೃಷ್ಟಿ ಮಾಡದಿದ್ದರೆ, ಆ ರೀತಿ ನಮ್ಮ ದಿಕ್ಕನ್ನು ಬದಲಾಯಿಸದಿದ್ದರೆ ಖಂಡಿತ ನಾವು ಅದಃಪತನಕ್ಕೆ ಹೋಗುತ್ತೇವೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ತೀವ್ರವಾಗಿ ಗಮನ ಹರಿಸಬೇಕು ಎಂಬ ಮಾತನ್ನು ಹೇಳುತ್ತಾ ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ ಎನ್. ಕೆಂಗೇಗೌಡ (ಚಾಮರಾಜ).—ಮಾನ್ಯ ಅಧ್ಯಕ್ಷಿಣಿಯವರೇ, ಶಿಕ್ಷಣ ಖಾತೆಯ ಬೇಡಿಕೆ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮೊಟ್ಟಮೊದಲನೆಯದಾಗಿ ತಮಗೆ ವಂದಿಸಿ ಎರಡು ಮೂರು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಸಮಯ ಬಹಳ ಕಡಿಮೆ ಇರುವುದರಿಂದ ಹೆಚ್ಚು ಮಾತನಾಡದೆ ಕೇವಲ ಒಂದೆರಡು ವಿಷಯಗಳ ಬಗ್ಗೆ ಮಾತ್ರ ನಾನು ಮಾತನಾಡುತ್ತೇನೆ. ಮೊದಲನೆಯದಾಗಿ ವಯಸ್ಕರ ಶಿಕ್ಷಣದ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ವಯಸ್ಕರ ಶಿಕ್ಷಣ ಕೇಂದ್ರಗಳು ಆಕರ್ಷಣೀಯವಾಗಿಲ್ಲ ಮತ್ತು ಜನರಿಗೆ ಅಲ್ಲಿ ಹೋಗುವುದಕ್ಕೆ ಹೆಚ್ಚಿನ ಆಸಕ್ತಿ ಬರುವ ರೀತಿಯಲ್ಲಿ ಅವುಗಳು ಕೆಲಸ ಮಾಡುತ್ತಿಲ್ಲ. ಅದರಲ್ಲೂ ಹರಿಜನಗಿರಿಜನ ಹೆಣ್ಣುಮಕ್ಕಳಿಗೆ ಮನೆ ಕೆಲಸವೇ ಸಾಕಾಗಿರುವಾಗ, ಬಡತನದಲ್ಲಿ ತೊಳಲಾಡುತ್ತಿರುವಾಗ ಅಕ್ಷರಾಭ್ಯಾಸ ಮಾಡುವುದಕ್ಕೆ ಆಸಕ್ತಿ ಇರುವುದಿಲ್ಲ. ಆದ್ದರಿಂದ ಕೆಲವು ಇನ್‌ಸೆಂಟೀವ್ ಕೊಡುವ ವ್ಯವಸ್ಥೆ ಮಾಡುವುದು ಸೂಕ್ತ ಎಂದು ನನಗನ್ನಿಸುತ್ತದೆ. ಬಡತನದಲ್ಲಿರುವುದರಿಂದ ಅವರು ಅಕ್ಷರ ಕಲಿತು ನಮಗೇನಾಗಬೇಕು ಎಂಬ ತಾತ್ಸಾರ ಮನೋಭಾವನೆಯಲ್ಲಿರುತ್ತಾರೆ. ಆದುದರಿಂದ ಅವರಿಗೆ ತಿಂಗಳಿಗೆ ೩೦-೩೫ ರೂಪಾಯಿ ಇನ್‌ಸೆಂಟೀವ್ ಕೊಡುವ ವ್ಯವಸ್ಥೆ ಮಾಡಿದರೆ ಈ ಕಾರ್ಯ ಸಫಲತೆಯನ್ನು ಪಡೆಯುತ್ತದೆ ಎಂಬ ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಕಡ್ಡಾಯ ಶಿಕ್ಷಣಕ್ಕೆ ಆಯವ್ಯಯದಲ್ಲಿ ಸರ್ಕಾರದವರು ಹಣವನ್ನು ಒದಗಿಸಿದ್ದಾರೆ. ೧೦೦ಕ್ಕೆ ೧೦೦ ರಷ್ಟು ಮಕ್ಕಳು ಶಾಲೆಗೆ ಬರಬೇಕು ಎಂಬ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ. ಇದು ಒಳ್ಳೆಯ ಉದ್ದೇಶ. ಹರಿಜನಗಿರಿಜನ ವರ್ಗಕ್ಕೆ ಸೇರಿದ ಮಕ್ಕಳಿಗೆ ಯೂನಿಫಾರಂ, ಸ್ಕಾಲರ್‌ಷಿಪ್ ಮುಂತಾದ ಸೌಲಭ್ಯಗಳನ್ನು ಕೊಡಲು ಸರ್ಕಾರ ಉದ್ದೇಶ ಇಟ್ಟುಕೊಂಡಿದೆ ಎಂದು ತಿಳಿದುಕೊಂಡಿದ್ದೇನೆ. ಇದರ ಮೂಲ ಉದ್ದೇಶ ೬ ವರ್ಷವಾಗಿರುವ ಎಲ್ಲಾ ಮಕ್ಕಳೂ ಶಾಲೆಗೆ ಬರಬೇಕು ಎಂಬುದು. ಹರಿಜನ ಗಿರಿಜನ ಮಕ್ಕಳಿಗೆ ಕೊಡುವಂತೆಯೇ ಇತರ ಮಕ್ಕಳಿಗೂ ಸೌಲಭ್ಯ ಕೊಡಬೇಕು. ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೂ ಇನ್‌ಸೆಂಟೀವ್ ಕೊಡುವುದು ಸೂಕ್ತ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ಪ್ರಾಥಮಿಕ ಶಿಕ್ಷಣ ವ್ಯವಸ್ಥೆ ಬದಲಾವಣೆಯಾಗಿದೆ. ಪದಗಳ, ವಾಕ್ಯಗಳ ಪದ್ಧತಿ ಎಂದು ಹೊಸದಾಗಿ ಜಾರಿಗೆ ಬಂದಿದೆ. ಅಕ್ಷರಗಳನ್ನು ಹೇಳಿಕೊಡದೆ ಪದಗಳನ್ನು ಉಪಯೋಗಿಸಿಕೊಂಡು ವಾಕ್ಯಗಳನ್ನು ರಚಿಸತಕ್ಕ ವ್ಯವಸ್ಥೆ ಜಾರಿಯಲ್ಲಿದೆ. ಇದು ನಿಜವಾಗಿಯೂ ಕೂಡ ನಮ್ಮ ಭಾರತೀಯ ಸಂಸ್ಕೃತಿಗೆ ಸರಿಹೋಗುವುದಿಲ್ಲ. ಅಷ್ಟೇ ಅಲ್ಲದೆ ಅಲ್ಲಿರತಕ್ಕ ಉಪಾಧ್ಯಾಯರು ಈ ಒಂದು ಪದ್ಧತಿಯಲ್ಲಿ ಪರಿಣತರೂ ಕೂಡ ಆಗಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊದಲು ಅಕ್ಷರಗಳನ್ನು ಕಲಿಸಿ, ನಂತರ ಕಾಗುಣಿತ, ಒತ್ತಕ್ಷರಗಳನ್ನು ಕಲಿಸಿ ವಿದ್ಯಾಭ್ಯಾಸವನ್ನು ಮಾಡುವ ಪದ್ಧತಿಯನ್ನು ಜಾರಿಗೆ ತರುವುದು ಸೂಕ್ತವೆಂದು ಸರ್ಕಾರದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇನ್ನೊಂದು ವಿಷಯ ಏನೆಂದರೆ ಈಗ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುವಾಗಲೇ ಕಾಗದ, ಪೆನ್ಸಿಲ್, ಪೆನ್ ಕೊಡುತ್ತಿದ್ದೇವೆ. ಹ್ಯಾಂಡ್‌ರೈಟಿಂಗ್ ಚೆನ್ನಾಗಿ ಬರೆಯಬೇಕಾದರೆ ಸ್ಲೇಟು ಬಳಪವನ್ನು ಪ್ರೈಮರಿ ನಾಲ್ಕನೇ ತರಗತಿಯವರೆಗೆ ಕಡ್ಡಾಯವಾಗಿ ಉಪಯೋಗಿಸುವುದು ಸರಿ. ಆ ರೀತಿ ವ್ಯವಸ್ಥೆ ಮಾಡಬೇಕೆಂಬ ಸಲಹೆಯನ್ನು ಈ ಸಂದರ್ಭದಲ್ಲಿ ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಮಕ್ಕಳು ಪುಸ್ತಕ ತೆಗೆದುಕೊಂಡರೆ ಒಂದು ಹಾಳೆಯಲ್ಲಿ ಬರೆದರೆ ನಾಲ್ಕು ಹಾಳೆಯನ್ನು ಹರಿದು ಬಿಸಾಕುತ್ತಾರೆ. ಇದರಿಂದ ಬಹಳ ದಂಡವಾಗುತ್ತಿದೆ. ಅಕ್ಷರವನ್ನೂ ಚೆನ್ನಾಗಿ ಬರೆಯುವುದಕ್ಕೆ ಆಗುವುದಿಲ್ಲ. ಆ ದೃಷ್ಟಿಯಿಂದ ನಾಲ್ಕನೇ ತರಗತಿಯವರೆಗೆ ಸ್ಲೇಟು ಬಳಪವನ್ನು ಖಡ್ಡಾಯವಾಗಿ ಬಳಸುವ ಪದ್ಧತಿಯನ್ನು ಜಾರಿಗೆ ತರಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ವ್ಯಾಕರಣವನ್ನೇ ತೆಗೆದು ಬಿಟ್ಟಿದ್ದಾರೆ. ಕಾರಣವೇನೋ ಗೊತ್ತಾಗಲಿಲ್ಲ. ಬಹುಶಃ ಅದರ ಆವಶ್ಯಕತೆ ಇಲ್ಲ ಎಂದು ಹಾಗೆ ಮಾಡಿರಬಹುದು. ಆದರೆ ನನ್ನ ದೃಷ್ಟಿಯಲ್ಲಿ ವ್ಯಾಕರಣ ಕಲಿಸುವ ಪದ್ಧತಿಯನ್ನು ಮತ್ತೆ ಜಾರಿಗೆ ತರುವುದು ಸರಿ, ಅದರ ಅಭ್ಯಾಸ ಮಾಡಿಸುವುದು ಒಳ್ಳೆಯದು. ವ್ಯಾಕರಣ ಕಲಿಸುವುದರಿಂದ ನಮ್ಮ ಮಕ್ಕಳು ಭಾಷೆಯನ್ನು ಚೆನ್ನಾಗಿ ಕಲಿಯುತ್ತಾರೆ. ಆ ದೃಷ್ಟಿಯಿಂದ ವ್ಯಾಕರಣ ಕಲಿಸುವ ಪದ್ಧತಿಯನ್ನು ಜಾರಿಗೆ ತರಬೇಕೆಂಬ ಸಲಹೆಯನ್ನು ನೀಡುತ್ತಿದ್ದೇನೆ. ಮಾನವೀಯತೆಯ ಮೌಲ್ಯಗಳನ್ನು ಕಾಪಾಡಿಕೊಂಡು ಬರತಕ್ಕ ಶಿಕ್ಷಣ

ಶವಾಗಿ ಬೇಕು. ತಂದೆಯನ್ನು ಮಗ ಮರ್ಯಾದೆಯಿಂದ ಕಾಣಬೇಕು; ಹಿರಿಯರಲ್ಲಿ, ಗುರುಗಳಲ್ಲಿ ಕಿರಿಯರಿಗೆ ಗೌರವ ಇರಬೇಕು, ಮತ್ತು ಮನುಷ್ಯ ಮನುಷ್ಯರಲ್ಲಿ ಒಂದು ವಿಶ್ವಾಸತೆ ಬೆಳೆಯಬೇಕು. ಈ ರೀತಿಯ ಮಾನವೀಯ ಮೌಲ್ಯಗಳನ್ನು ಕಾಪಾಡಿಕೊಂಡು ಬರತಕ್ಕ ಶಿಕ್ಷಣವನ್ನು ಕಲಿಸಬೇಕು.

೫-00 ಪಿ. ಎಂ.

ಅಧ್ಯಕ್ಷರೆ, ಅವುಗಳನ್ನು ಕಾಪಾಡಿಕೊಂಡು ಬರತಕ್ಕ ಒಂದು ಶಿಕ್ಷಣ ಇದ್ದರೆ ನಿಜಕ್ಕೂ ಕೂಡ ಸಮಾಜ ಒಳ್ಳೆಯದಾಗುತ್ತದೆ. ಈಗ ನಾವು ಏನು ನೋಡುತ್ತಿದ್ದೇವೆ ಅದು ಸರಿಯಲ್ಲ ಹಿಂದೆ ನೀತಿ ಚಿಂತಾಮಣಿ ಅಂಥ ೧-೨ ಭಾಗದ ಪಠ್ಯ ಪುಸ್ತಕ ಇತ್ತು. ಅವುಗಳನ್ನು ಪುನಃ ಸೆಲೆಕ್ಟ್ ಮಾಡಿ ಜಾರಿಗೆ ಕೊಡುವುದಾದರೆ ಬಹಳ ಒಳ್ಳೆಯದು. ಮಕ್ಕಳಿಗೆ ಒಳ್ಳೆಯ ಪ್ರಭಾವವನ್ನು ನೀತಿಯ ಬಗ್ಗೆ ಅದು ಬೀರುತ್ತದೆ. ಒಂದು ಸಾರಿ ಅದರಿಂದ ಪ್ರಭಾವ ಬೀರಿದರೆ ಜೀವನಪರ್ಯಂತ ಆ ಮೌಲ್ಯಗಳನ್ನು ಉಳಿಸಿಕೊಂಡು ಬರಲಿಕ್ಕೆ ಅವರಿಗೆ ಅನುಕೂಲವಾಗುತ್ತದೆ. ಆದುದರಿಂದ, ಮಾನ ಮಂತ್ರಿಗಳು ಇದರ ಬಗ್ಗೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸ್ಕೂಲುಗಳನ್ನು ತಾವು ಹೊಸದಾಗಿ ಸ್ಯಾಂಕ್ಷನ್ ಮಾಡಿಕೊಡುವ ಬಗ್ಗೆ ನನ್ನ ಅಭ್ಯಂತರ ಇಲ್ಲ. ಖಡ್ಡಾಯವಾಗಿ ಎಲ್ಲಾ ಮಕ್ಕಳಿಗೂ ಆಟದ ಬಯಲು ಅತ್ಯವಶ್ಯಕ. ತಮ್ಮ ಶಿಕ್ಷಣ ಪದ್ಧತಿಯಲ್ಲಿ ಇದು ಆವಶ್ಯಕವಾಗಿ ಇರಬೇಕೆಂದು ಹೇಳಿದ್ದೀರಿ. ಆದರೂ ಕೂಡ ಅದನ್ನು ಜಾರಿಗೆ ತರಲಿಲ್ಲ. ನಾಲ್ಕು ಕೊಠಡಿಗಳಿಗಷ್ಟೆ ಸ್ಕೂಲು ಮಾಡುವುದಾದರೆ ಪ್ರಯೋಜನ ಇಲ್ಲ. ಶಿಕ್ಷಣ ಸಂಸ್ಥೆಗಳಿಗೆ ಪ್ಲೇ ಗ್ರೌಂಡ್ಸ್ ಇಲ್ಲದೇ ಇದ್ದರೆ ಪರ್ಮಿಷನ್ ಅನ್ನು ಕಡ್ಡಾಯವಾಗಿ ಕೊಡುವುದಿಲ್ಲ ಅಂತ ಮಾನ್ಯ ಮಂತ್ರಿಗಳು ತಿಳಿಸಬೇಕು ಅಂತ ನಾನು ಸೂಚನೆಯನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಮೊನ್ನೆ ದಿವಸ ಕರ್ನಾಟಕ ಸ್ಟೇಟ್ ಯೂನಿವರ್ಸಿಟೀಸ್ ಅಮೆಂಡ್‌ಮೆಂಟ್ ಬಿಲ್ಲಿನಲ್ಲಿ ಈ ಬಗ್ಗೆ ಒಂದು ತಿದ್ದುಪಡಿ ತಂದಿದ್ದೀರಿ. ಅದು ಬೇಡ ಅಂತ ನಾನು ವಾದ ಮಾಡಿದೆ. ಅದು ನಿಜಕ್ಕೂ ಕೂಡ ಬೇಡ ಎನ್ನುವುದಕ್ಕೆ ತಮ್ಮ ವರದಿ ಈವೊತ್ತು ನಮ್ಮ ಮುಂದೆ ಏನಿದೆ ಅದು ಸಹಕಾರಿಯಾಗಿದೆ. ಈ ವರದಿಯಲ್ಲಿರತಕ್ಕ ಕೆಲವು ಅಂಶಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅದು ಈ ರೀತಿ ಇದೆ.—

In your annual report for the year 1979-80 under Department of Collegiate Education on page 18 you have stated:

"II. The studentstrength is increasing year after year in both Pre-University and Degree Courses. The details regarding the strength of students are as follows.—

Year	Pre-University: In Government Colleges		Pre-University: In Private Colleges		Degree Course: In Government Colleges		Degree Course: In Private Colleges	
	Boys	Girls	Boys	Girls	Boys	Girls	Boys	Girls
1977-78	8,505	5,854	47,851	15,592	13,653	6,928	56,237	21,739
1978-79	9,559	5,605	56,838	19,613	14,803	7,199	62,380	27,388
1979-80	6,249	3,179	25,451	12,451	8,180	4,614	35,086	15,488

Information from few more Colleges not received. ಎಂದು ಇದೆ:

ಇನ್ನು ಈ ಶಿಕ್ಷಣ ಕ್ಷೇತ್ರದಲ್ಲಿ ಯೂನಿವರ್ಸಿಟಿ ಒಂದು ಸೆಕ್ಟರ್, ಗವರ್ನ್‌ಮೆಂಟ್ ಕಾಲೇಜಿನ ಒಂದು ಸೆಕ್ಟರ್, ಪ್ರೈವೇಟ್ ಕಾಲೇಜಿನ ಒಂದು ಸೆಕ್ಟರ್ ಇದೆ. ಇಲ್ಲಿ ತಾವು ಕೊಟ್ಟಿರತಕ್ಕ ಅಂಕಿಅಂಶಗಳು ಏನು ತೋರಿಸುತ್ತದೆ ಅಂದರೆ ಗವರ್ನಮೆಂಟ್ ಕಾಲೇಜುಗಳಿಗಿಂತ ಪ್ರೈವೇಟ್ ಸೆಕ್ಟರ್ ಒನ್ ಟು ಫೋರ್ ಟೈಮ್ಸ್ ಜಾಸ್ತಿ ಇದೆ ಅಂತ ತೋರಿಸುತ್ತದೆ. ಯೂನಿವರ್ಸಿಟಿಯಲ್ಲಿ ಎಕ್ಸ್‌ಪೆರಿಮೆಂಟಲ್ ಬೇಸಿಸ್‌ನಲ್ಲಿ ಅವರು ಕೆಲವು ಕಾಲೇಜುಗಳನ್ನು ಮೊದಲಿನಿಂದ ವಹಿಸಿಕೊಂಡು ಕೆಲಸ ಕಾರ್ಯಗಳನ್ನು ಚೆನ್ನಾಗಿ ಮಾಡಿಕೊಂಡು ಬರುತ್ತಿದ್ದಾರೆ. ಆ ರೀತಿಯಾಗಿ ಆದರ್ಶಪ್ರಾಯವಾಗಿ ಕಾಲೇಜುಗಳನ್ನು ನಡೆಸಿಕೊಂಡು ಬಂದರೆ ಬೇರೆಯವರಿಗೂ ಕೂಡ ಮೇಲ್ಪಂಕ್ತಿಯಾಗುವ ಅವಕಾಶವಾಗುತ್ತದೆ. ಇನ್ನು ೭-೮ ಕಾಲೇಜುಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳಬಹುದು ಅಂತ ಮಾಡಿದ್ದೀರಿ ಅದಕ್ಕನುಗುಣವಾಗಿ ತಾವು ಒಂದು ಕ್ಲಾಸ್ ಮಾಡಿದ್ದೀರಿ ಅದು ಈ ರೀತಿ ಇದೆ.

"Clause 16. Amendment of section 68, sub-clause (4) (a) reads thus.

The State Government may, at any time and after consulting the Syndicate, by order, transfer any University College, excluding post-graduate courses, and teachers and other employees connected therewith to the State Government and from the date of such transfer, the said college shall be a Government College." ಎಂದು ಇದೆ.

ನಾನು ಈ ಬಿಲ್ಲಿನ ಮೇಲೆ ಮಾತನಾಡುವುದನ್ನು ಕೈಬಿಡಬೇಕೆಂದು ಮಾಡಿದ್ದೆ, ಆದರೂ ಮಾತನಾಡ ಬೇಕಾದ ಅವಕಾಶ ಬಂತು ಈಗ ನಾನು ಹೇಳುವುದು ತಾವು ಕೊಟ್ಟಿರತಕ್ಕ ಅಂಕಿಅಂಶಗಳ ಆಧಾರದ ಮೇಲೆ ನಾನು ಮತ್ತೊಮ್ಮೆ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ಸೆಕ್ಷನ್‌ಗೆ ಅಮೆಂಡ್‌ಮೆಂಟ್ ತರುವುದು ಬೇಡ ಇದನ್ನು ಕೈಬಿಡಬೇಕು, ಎಂದು ಹೇಳುತ್ತೇನೆ ಯೂನಿವರ್ಸಿಟಿಯವರೇ ನಡೆಸಿಕೊಂಡು ಹೋಗುವುದು ಸೂಕ್ತ ಬಹಳ ವರ್ಷಗಳಿಂದ ಆ ಕಾಲೇಜುಗಳು ಚೆನ್ನಾಗಿ ನಡೆಯುತ್ತಿವೆ, ತಾವು ಈ ಬಗ್ಗೆ ಏನೂ ಕೈಹಾಕದೆ ಅವುಗಳು ಚೆನ್ನಾಗಿ ನಡೆಯಲಿಕ್ಕೆ ಅವಕಾಶ ಮಾಡಿ ಕೊಡಬೇಕು.

ಶ್ರೀ ಎಂ. ಸಿ. ನಾಣಯ್ಯ.—ಆ ಬಿಲ್ಲು ಪಾಸಾಗಿದೆಯಲ್ಲಾ.

ಶ್ರೀ ಬಿ. ಎನ್. ಕೆಂಗೇಗೌಡ.—ಈ ಬಿಲ್ಲು ಇನ್ನೂ ಪಾಸಾಗಿಲ್ಲ. ಅದಕ್ಕೋಸ್ಕರವೇ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ಸಿ. ನಾಣಯ್ಯ.—ಯೂನಿವರ್ಸಿಟಿಯಲ್ಲಿರುವ ಒಳ್ಳೆಯ ಕಾಲೇಜಸ್ ಉಳಿದುಕೊಳ್ಳಲಿ ಅಂತ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರ ಬಗ್ಗೆ ನಾನೂ ಕೂಡ ಧ್ವನಿಗೂಡಿಸುತ್ತೇನೆ.

ಶ್ರೀ ಬಿ. ಎನ್. ಕೆಂಗೇಗೌಡ.—ಒಳ್ಳೆಯ ದೃಷ್ಟಿಯಿಂದ ತಾವು ಈ ಬಗ್ಗೆ ತಂದಿರುವ ಅಮೆಂಡ್ ಮೆಂಟ್ ಕೈಬಿಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ತಮ್ಮ ಆ್ಯನ್ಯುಯಲ್ ರಿಪೋರ್ಟ್ ಪೇಜ್ ೭೫ರಲ್ಲಿ ೧೯೮೦-೮೧ನೇ ಸಾಲಿನ ಬಗ್ಗೆ ಪ್ರೋಗ್ರಾಂ ಏನು ಹಾಕಿ ಕೊಂಡಿದ್ದೀರಾ ಅದನ್ನು ನಾನು ಸ್ವಾಗತಿಸುತ್ತೇನೆ

ಶ್ರೀ ಎಂ. ಸಿ. ನಾಣಯ್ಯ.—ಅಧ್ಯಕ್ಷರೆ, ಏನೇನು ಪ್ರೋಗ್ರಾಂಗಳನ್ನು ಹಾಕಿಕೊಂಡಿದ್ದಾರೆ ಅಂತ ಹೇಳುವುದು ಒಳ್ಳೆಯದು.

ಶ್ರೀ ಬಿ. ಎನ್. ಕೆಂಗೇಗೌಡ.—ಈಗ ಮಾನ್ಯ ಅಧ್ಯಕ್ಷರು ನನಗೆ ೧೫ ನಿಮಿಷ ಕಾಲಾವಕಾಶ ಕೊಟ್ಟಿ ರುವುದರಿಂದ ನಾನು ಅದರ ಬಗ್ಗೆ ಡೀಟೈಲಾಗಿ ಹೇಳಲಿಕ್ಕೆ ಇಷ್ಟಪಡುವುದಿಲ್ಲ. ಮತ್ತು ಸರ್ಕಾರದ ನಿಲುವಿನ ಬಗ್ಗೆ ವಿವರವಾಗಿ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಅದರಲ್ಲೇನಿದೆ ಎಂದರೆ In the Annual Report of the Education and Youth Services Department for the year 1980-81, it is being stated thus :

"Competition were held on single-zone basis in Basket-ball, Tennis Ball, Badminton, Kho-Kho (men and women) Wrestling, Swimming and Athletics (men and women) ಅಂತ ಇದೆ. I failed to understand this.

ಕರ್ನಾಟಕ ಯೂನಿವರ್ಸಿಟಿಯಲ್ಲಿ ಯಾವ ರೀತಿ ವ್ಯವಹಾರ ನಡೆಯುತ್ತಿದೆ, ಎಂಬುದಾಗಿ ಈ ಪುಸ್ತಕದಲ್ಲಿ ಪ್ರಿಂಟ್ ಆಗಿದೆ. ಆ ಪುಸ್ತಕದಲ್ಲಿ ರೆಸಲಿಂಗ್ both for men and women ಎಂಬುದಾಗಿ ಪ್ರಿಂಟ್ ಆಗಿದೆ. ಆ ರೀತಿ ಇದರಲ್ಲಿ ನಡೆಯುತ್ತಿದೆ ಎಂಬುದು ಇದುವರೆಗೂ ನನ್ನ ಗಮನಕ್ಕೆ ಬಂದಿಲ್ಲ. ಅದು ಕರ್ನಾಟಕ ಯೂನಿವರ್ಸಿಟಿಯಲ್ಲಿ ನಡೆಯುತ್ತಿದೆ ಅಂತ ಈ ಪುಸ್ತಕದಲ್ಲಿ ಪ್ರಿಂಟ್ ಆಗಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಶಿವಮೊಗ್ಗದಲ್ಲಿ ಮೊನ್ನೆ ಒಂದು ಸಾರಿ ಹೆಂಗಸರೇ ರೆಸ್‌ಲಿಂಗ್ ಮಾಡಿದ್ದರು. ಅದು ಎಲ್ಲರಿಗೂ ಗೊತ್ತಿತ್ತು.

ಶ್ರೀಮತಿ ಎಸ್. ಪ್ರಮೀಳ.—ಹೆಂಗಸರು ರೆಸ್‌ಲಿಂಗ್ ಮಾಡುತ್ತಾರೆ ಮತ್ತು ಬಾಕ್ಸಿಂಗ್ ಕೂಡ ಮಾಡುತ್ತಾರೆ. Why are they afraid of ladies?

SRI M. C. NANAIAH.—We have no objection to ladies 'wrestling. But, do not try to wrestle with us.

ಶ್ರೀ ಬಿ. ಎನ್. ಕೆಂಗೇಗೌಡ.—ನಾನು ಅದನ್ನು ತಪ್ಪು ಅಂತ ಹೇಳಿಲ್ಲ. ಆದರೆ ಆ ರೀತಿ ನಡೆಯುತ್ತಿರುವುದು ಇದುವರೆಗೂ ನನ್ನ ಗಮನಕ್ಕೆ ಬಂದಿಲ್ಲ ಅಂತ ಹೇಳಿದೆ ಅಷ್ಟೆ. ಇಷ್ಟು ಸಮಯ ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಅನುಸೂಯ ಗಜಾನನ ಶರ್ಮ(ಅಂಕೋಲ).—ಮಾನ್ಯ ಅಧ್ಯಕ್ಷರೆ, ಶಿಕ್ಷಣದ ವಿಷಯದಲ್ಲಿ ಕೆಲವು ವಿಷಯಗಳನ್ನು ಈ ಸದನದಲ್ಲಿ ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ೪ನೇ ತರಗತಿಯಿಂದ ೭ನೇ ತರಗತಿಯವರೆಗೆ ಇರುವಂತಹ ಶಾಲೆಗಳಲ್ಲಿ ಒಬ್ಬರೇ ಒಬ್ಬರು ಶಿಕ್ಷಕರು ಅಷ್ಟನ್ನೂ ನೋಡಿಕೊಳ್ಳಬೇಕಾಗಿದೆ. ಈ ರೀತಿ ಒಬ್ಬರೇ ಉಪಾಧ್ಯಾಯರು ಎಲ್ಲ ಕ್ಲಾಸ್‌ಗಳನ್ನೂ ಏಕ ಕಾಲದಲ್ಲಿ ನೋಡಿಕೊಳ್ಳುವುದಕ್ಕೆ ಹೇಗೆ ಸಾಧ್ಯ? ಎಂಬುದನ್ನು ತಾವು ವಿಚಾರ ಮಾಡಬೇಕು. ಮತ್ತು ನಮ್ಮ ಜಿಲ್ಲೆಯಲ್ಲಿ ೨೫೦ ಕನ್ನಡ ಶಾಲಾ ಶಿಕ್ಷಕರ ಜಾಗ ಖಾಲಿ ಇದೆ. ಇದರಿಂದಾಗಿ ನಮ್ಮ ಜಿಲ್ಲೆಯಲ್ಲಿ ಶಿಕ್ಷಣ ಪರಿಸ್ಥಿತಿ ಯಾವ ರೀತಿ ಆಗಿರಬಹುದೆಂಬುದನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ಮತ್ತೆ ಒಂದೊಂದು ಶಾಲೆಗಳಲ್ಲಿ ಒಬ್ಬ ಶಿಕ್ಷಕರೂ ಕೂಡ ಇಲ್ಲದೇ ಇರತಕ್ಕಂತಹ ಶಾಲೆಗಳೂ ಇವೆ. ಆದ್ದರಿಂದ ಈ ದಿಸೆಯಲ್ಲಿ ಸರ್ಕಾರದವರು ಕೂಡಲೇ ಕ್ರಮ ತೆಗೆದುಕೊಂಡು ಖಾಲಿ ಬಿದ್ದಿರುವ ಜಾಗವನ್ನು ಕೂಡಲೇ ಭರ್ತಿ ಮಾಡಬೇಕು. ಇದರ ಬಗ್ಗೆ ನಾನು ಈಗಾಗಲೇ ಒಂದು ಪ್ರಶ್ನೆಯನ್ನೂ ಕೂಡ ಕಳುಹಿಸಿದ್ದೇನೆ. ಮತ್ತೆ ಇನ್ನೂ ಹೇಳಬೇಕೆಂದರೆ, ನಮ್ಮ ಶಿಕ್ಷಣದ ಮಟ್ಟದ ಬಗ್ಗೆ ನಿನ್ನೆ ದಿವಸ ಮಾನ್ಯ ಸದಸ್ಯರು ಅನೇಕರು ಹೇಳುತ್ತಿದ್ದರು. ಅದೇನೆಂದರೆ ಮೊದಲನೆ ವರ್ಷದ ಪಿ.ಯು.ಸಿ. ಪರೀಕ್ಷೆಯನ್ನು ರದ್ದು ಮಾಡಿದ್ದರ ಬಗ್ಗೆ ಹೇಳುತ್ತಿದ್ದರು. ಆ ರೀತಿ ತೀರ್ಮಾನ ಮಾಡಿರುವುದು ತಪ್ಪು ಎಂಬುದಾಗಿ ನನಗನ್ನಿಸುತ್ತದೆ. ಏತಕ್ಕೆಂದರೆ ನಮ್ಮ ಮಕ್ಕಳು ಯಾವ ರೀತಿ ವ್ಯಾಸಂಗ ಮಾಡಬೇಕೆಂಬುದನ್ನು ವಿಚಾರ ಮಾಡಬೇಕು. ಕನ್ನಡದಲ್ಲಿಯೇ ಶಿಕ್ಷಣ ನಡೆಯಬೇಕೆಂಬುದನ್ನು ನಾವುಗಳೆಲ್ಲರೂ ಒಪ್ಪತಕ್ಕದ್ದೇ. ಕನ್ನಡ ರಾಜ್ಯದಲ್ಲಿ ಕನ್ನಡ ಇರಬಾರದು ಎಂಬುದಾಗಿ ನಾನು ಹೇಳುತ್ತಿಲ್ಲ. ಕನ್ನಡಕ್ಕೆ ಪ್ರಥಮ ಸ್ಥಾನ ಕೊಡಬೇಕು. ಆದರೆ ಕನ್ನಡದಲ್ಲಿ ಕಲಿತಂತ ನಮ್ಮ ಮಕ್ಕಳು ಕರ್ನಾಟಕದಲ್ಲೇ ಇರುವುದಕ್ಕಾಗುವುದಿಲ್ಲ. ಹೊರ ದೇಶಗಳಿಗೂ ಹೋಗಬೇಕು. ಬೇರೆ ಬೇರೆ ರಾಜ್ಯಗಳಲ್ಲಿ ಹಾಗೂ ವಿದೇಶಗಳಿಗೆ ಹೋಗಿ ನೆಲೆಸಿ ಅವರು ತಮ್ಮ ವಿದ್ಯಾಭ್ಯಾಸವನ್ನು ಮಾಡಬೇಕಾಗುತ್ತದೆ. ಅಂತಹ ವೇಳೆಯಲ್ಲಿ ಅಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಪರೀಕ್ಷೆಯನ್ನು ಎದುರಿಸಬೇಕಾಗುತ್ತದೆ. ಅಂತಹ ಸಮಯದಲ್ಲಿ ಇಂಗ್ಲೀಷ್ ಭಾಷೆಯ ಪರಿಚಯ ಅವನಿಗೆ ಚೆನ್ನಾಗಿ ಇಲ್ಲದಿದ್ದರೆ ಆ ಪರೀಕ್ಷೆಯಲ್ಲಿ ಉತ್ತೀರ್ಣನಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ನಾನು ತಿಳಿದಹಾಗೆ ಇಂಗ್ಲೇಂಡಿನಲ್ಲಿ ನಮ್ಮ ಭಾರತದ ಮಕ್ಕಳು ಇದ್ದಾರೆ. ಜಗತ್ತಿನಲ್ಲಿ ಎಲ್ಲಿ

ಬೇಕಾದರೂ ಹೋಗಿ ವಿದ್ಯಾಭ್ಯಾಸ ಮಾಡುವಂತಹ ಅವಕಾಶ ಇರಬೇಕು. ಹಾಗೆ ಇರಬೇಕಾದರೆ ಇಂಗ್ಲೀಷ್‌ನ ಭಾಷೆ ಅತ್ಯಂತ ಅವಶ್ಯಕ ಎಂಬುದು ಎಲ್ಲರಿಗೂ ತಿಳಿವಂತಹ ವಿಚಾರವಾಗಿದೆ. ಇದೂ ಅಲ್ಲದೆ ನಮ್ಮ ಈಗಿನ ಒಂದು ಸಮಾಜದ ಪರಿಸ್ಥಿತಿಯನ್ನು ನೋಡುವುದಾದರೆ ನೈತಿಕವಾಗಿ ಏನೂ ಇಲ್ಲದ ಹಾಗೆ ಆಗಿದೆ. ಇದರ ಕಡೆ ಹೆಚ್ಚು ಗಮನವನ್ನು ಹರಿಸುವುದು ಸೂಕ್ತ. ಮಕ್ಕಳು ಶಾಲೆಗಳಿಗೆ ಬರುವುದು ಕಡಿಮೆಯಾಗಿದೆ. ಮತ್ತೆ ಶಾಲೆಗಳಲ್ಲಿ ಸರಿಯಾದ ಲೈಬ್ರರಿಗಳಿಲ್ಲ. ಮತ್ತೆ ಇದ್ದಂತಹ ಲೈಬ್ರರಿಗಳಲ್ಲೂ ಕೂಡ ಶಾಲಾ ಮಕ್ಕಳಿಗೆ ಬೇಕಾದಂತಹ ಪುಸ್ತಕಗಳು ಅಲ್ಲಿ ಇರುವುದಿಲ್ಲ. ಆ ಲೈಬ್ರರಿಗಳಲ್ಲಿರತಕ್ಕಂತಹ ಪುಸ್ತಕಗಳೆಲ್ಲಾ ಇಲ್ಲಸಲ್ಲದ ಕಾದಂಬರಿಗಳು ಮತ್ತು ಪತ್ತೇದಾರಿ ಕಾದಂಬರಿಗಳನ್ನು ಇಟ್ಟಿರುತ್ತಾರೆ. ಇಂತಹವುಗಳನ್ನು ನಮ್ಮ ಮಕ್ಕಳು ಓದುವುದಕ್ಕೆ ಅವಕಾಶ ಮಾಡಿಕೊಟ್ಟರೆ ನಮ್ಮ ಸಮಾಜ ಯಾವ ಕಡೆಗೆ ಹೋಗುತ್ತದೆ? ಯಾವ ರೀತಿಯಿಂದ ಸುಧಾರಿಸಬೇಕು? ನಮ್ಮ ಮಕ್ಕಳ ಭವಿಷ್ಯ ಏನಾಗಬೇಕೆಂಬುದನ್ನು ಸರ್ಕಾರ ವಿಚಾರ ಮಾಡಬೇಕು. ಹೊಸದಾಗಿ ಈಗ ವಿದ್ಯಾಮಂತ್ರಿಗಳು ಬಂದಿದ್ದಾರೆ. ನಾಲ್ಕಾರು ವರ್ಷಗಳಿಂದ ಸಾಕಷ್ಟು ವಿಷಯಗಳನ್ನು ಈ ಶಿಕ್ಷಣದ ಪೂರ್ಣವಾಗಿ ವಿಷಯಗಳನ್ನು ಅರಿತವರಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ದಿಸೆಯಲ್ಲಿ ಯೋಗ್ಯ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಂಡು ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಲ್. ಶಿವಪ್ಪ (ತಿಪಟೂರು).—ಸನ್ಮಾನ್ಯ ಅಧ್ಯಕ್ಷರೆ, ಈ ದಿನ ಲೇಖನಾ ಸಾಮಗ್ರಿ ಹಾಗೂ ಮುದ್ರಣಾಲಯ ಉನ್ನತ ಶಿಕ್ಷಣ, ಪ್ರಾಥಮಿಕ ಶಿಕ್ಷಣ ಹಾಗೂ ಮಾಧ್ಯಮಿಕ ಶಿಕ್ಷಣದ ಬಗ್ಗೆ ನಡೆಯುತ್ತಿರತಕ್ಕಂತಹ ಚರ್ಚೆಯಲ್ಲಿ ಭಾಗವಹಿಸಲು ನಾನು ಸಂತೋಷಪಡುತ್ತೇನೆ. ಸ್ವಾಭಾವಿಕವಾಗಿ ಈ ದಿನ ಅನೇಕ ಪ್ರಮುಖವಾದ ವಿಚಾರಗಳನ್ನು ಚರ್ಚೆಮಾಡುತ್ತಿದ್ದೇವೆ. ಎಲ್ಲಿ ಯೋಗ್ಯ ಜನರನ್ನು ಈ ಪ್ರಜಾಪ್ರಭುತ್ವಕ್ಕೆ ಸಿಕ್ಕಬೇಕೋ, ಸಮರ್ಥರಾದಂತಹ ವಿದ್ಯಾವಂತರನ್ನು ಎಲ್ಲಿ ತಯಾರು ಮಾಡಬೇಕೋ ಅಂತಹವರನ್ನು ತಯಾರು ಮಾಡುವಂತಹ ಜಾಗದಲ್ಲಿ ಬೇಕಾದಷ್ಟು ದೂರುಗಳು ಕೇಳಿಬರುತ್ತಿವೆ. ಸಾಮಾನ್ಯವಾಗಿ ಇದಕ್ಕೆ ಅಧಿಕಾರಿಗಳು ಕಾರಣ ಅಂತ ನಾನು ಹೇಳುವುದಿಲ್ಲ. ಇದಕ್ಕೆ ಪ್ರಮುಖವಾಗಿ ರಾಜಕಾರಿಣಿಗಳೇ ಕಾರಣ. ನಮ್ಮಂತಹ ರಾಜಕಾರಿಣಿಗಳಿಗೆ ಇದು ಒಂದು ಉದ್ಯೋಗ ಎಂಬುದಾಗಿ ತಿಳಿದುಕೊಂಡು ಇದ್ದಾರೆ. ನಾಳೆ ಎಂ. ಎಲ್. ಎ. ಆಗಬೇಕಾದರೆ ಅಂದರೆ ಇಂದು ವಿದ್ಯಾಭ್ಯಾಸ ಮಾಡುತ್ತಿರತಕ್ಕಂತಹ ವಿದ್ಯಾರ್ಥಿಗಳಿಗೆ ಸರಿಯಾದ ತರಬೇತಿಯನ್ನು ಕೊಡದಿದ್ದರೆ ನಾಳೆ ಅವರು ಎಂ. ಎಲ್. ಎ ಆಗಿಯೋ ಅಥವಾ ಮಂತ್ರಿಯಾಗಿಯೋ ಈ ರಾಜ್ಯದ ಸೇವೆಯನ್ನು ಮಾಡುವುದು ಹೇಗೆ? ಅವರು ಯಾವ ರೀತಿ ಮಾಡುತ್ತಾರೆಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಸಾಮಾನ್ಯವಾಗಿ ಈ ಬಗ್ಗೆ ಚರ್ಚೆ ಆಗಿರುವುದು ನಮಗೂ ಗೊತ್ತು ನಿಮಗೂ ಗೊತ್ತು. ಎಲ್ಲರೂ ಕೂಡ ಅಯೋಗ್ಯರು ಎಂದು ನಾನು ಹೇಳುವುದಿಲ್ಲ. ಯೋಗ್ಯರೂ ಎಷ್ಟೋ ಜನ ಇದ್ದಾರೆ ಒಳ್ಳೆಯ ಕಾರ್ಯಗಳನ್ನು ಮಾಡಿದ್ದಾರೆ. ಎಷ್ಟೋ ಸಂಸ್ಥೆಗಳನ್ನು ಕಟ್ಟಿಸಿದಂತಹ ಪುಣ್ಯಾತ್ಮರು ಇದ್ದಾರೆ. ನಮ್ಮಲ್ಲೂ ಒಂದು ಫಸ್ಟ್ ಗ್ರೇಡ್ ಕಾಲೇಜ್ ಇದೆ. ಇದರ ಸ್ಥಾಪಕರು ಎ. ಜಿ. ಪಲ್ಲಗಟ್ಟಪ್ಪ ಚೆನ್ನವೀರಪ್ಪ ಎನ್ನತಕ್ಕವರು ಅವರಿಗೆ ಮಕ್ಕಳು ಇರಲಿಲ್ಲ. ಅವರು ತಮ್ಮ ಸರ್ವಸ್ವವನ್ನೆಲ್ಲ ಅದಕ್ಕೆ ಧಾರೆ ಎರೆದರು. ಈ ಒಂದು ಸಂಸ್ಥೆ ನಮ್ಮ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ಬೇರೆ ಎಲ್ಲ ಸಂಸ್ಥೆಗಳಿಗಿಂತಲೂ ಬಹಳ ಚೆನ್ನಾಗಿ ನಡೆಯುತ್ತಾ ಇತ್ತು. ಆದರೆ ಈಗ ಏನು ಆಗಿದೆ ಗೊತ್ತೆ? ಪಾಪ ಅವರು ಸತ್ತರು, ಅವರು ಸತ್ತ ನಂತರ ಇನ್ನೊಬ್ಬ ಅಧ್ಯಕ್ಷರು ಬಂದರು. ಅವರೂ ಕೂಡ ಸತ್ತ ಮೇಲೆ ಈಗ ಒಬ್ಬ ರಾಜಕಾರಣಿ ಅಲ್ಲಿ ಅಧ್ಯಕ್ಷರಾದರು.

ಶ್ರೀ ಅಜೀಜ್ ಸೇಟ್.—ಯಾರು ?

ಶ್ರೀ ಬಿ. ಎಲ್. ಶಿವಪ್ಪ.—ನಮ್ಮ ಮಾನ್ಯ ವಿದ್ಯಾ ಮಂತ್ರಿಗಳಿಗೆ ಅವರು ಬಹಳ ಹತ್ತಿರದವರು ಅಷ್ಟೇ. ಅವರಿಗೆ ಪರಿಚಯ ಇರುವವರು. ಅವರು ಅಧ್ಯಕ್ಷರಾಗಿ ಬಂದ ಮೇಲೆ ನಾನ ಅಲ್ಲಿ ಎಕ್ಸಿಕ್ಯೂಟಿವ್ ಮೆಂಬರ್ ಆದರೂ ಕೂಡ ಅಲ್ಲಿಗೆ ಹೋಗುವುದನ್ನು ಬಿಟ್ಟು ಬಿಟ್ಟೆ.

ಶ್ರೀ ಜಿ. ಬಿ. ಶಂಕರ್‌ರಾವ್.—ನೀವೂ ಅವರೂ ರಾಜಕೀಯದಲ್ಲಿ ಸ್ಪರ್ಧಿಗಳು. ನನಗೆ ಅವರು ಯಾರು ಎಂಬುದು ಗೊತ್ತೇ ಇಲ್ಲ ಅವರು ನಿಮಗೆ ಸ್ನೇಹಿತರು.

ಶ್ರೀ ಅಜೀಜ್ ಸೇಟ್.—ಜಾತಿಗೆ ಜಾತಿ ವೈರಿ; ನೀರಿಗೆ ಪಾಚಿ ವೈರಿ.

ಶ್ರೀ ವಿ. ಎಲ್. ಶಿವಪ್ಪ.—ಅಲ್ಲಿ ಹಿಂದೆ ಇದ್ದವರನ್ನು ತೆಗೆದು ಹಾಕಿ ಈಗ ಇಂಟರ್‌ವ್ಯೂ ಮಾಡಿ ಅಪಾಯಿಂಟ್‌ಮೆಂಟ್ ಮಾಡಿಕೊಂಡಿದ್ದಾರೆ. ಕೆಲವು ವಿದ್ಯಾಸಂಸ್ಥೆಗಳಲ್ಲಿ ಯೋಗ್ಯರು ಇದ್ದು ಯೋಗ್ಯ ಕೆಲಸ ಮಾಡತಕ್ಕಂತಹ ವಿದ್ಯಾ ಸಂಸ್ಥೆಗಳೂ ಇವೆ. ಸ್ವಾಭಾವಿಕವಾಗಿ ತನಿಖೆ ಮಾಡುವ ಅಧಿಕಾರಿಗಳು ತನಿಖೆ ಮಾಡಿ ಅದರ ಒಂದು ವರದಿ ತಯಾರಿಸುವುದರೊಳಗೇ ಅವರ ಮೇಲೆ ನಾನಾ ರೀತಿಯ ಒತ್ತಡಗಳು ಬರುತ್ತವೆ. ಅವರು ಅಂತಹವರು, ಅವರು ಇಂತಹವರು ಅವರು ಅದಕ್ಕೆ ಬೇಕಾಗುತ್ತದೆ. ಇದಕ್ಕೆ ಬೇಕಾಗುತ್ತದೆ ಎಂದು ಹೇಳಿ ವರದಿ ಕೊಡುವುದರೊಳಗೆ ಅದನ್ನು ಸರಿಮಾಡಿಬಿಟ್ಟಿರುತ್ತಾರೆ. ಈ ರೀತಿಯ ಒಂದು ಪ್ರಸಂಗಗಳು ಬಂದು ಈ ಇಲಾಖೆ ಮಾನ್ಯ ಶಂಕರರಾಯರ ಕೈಗೆ ಹೋಗುವಷ್ಟರಲ್ಲಿ ಈ ಇಲಾಖೆಯ ಎಲ್ಲಾ ಭಾಗಗಳು ಕೊಳೆತು ಹೋಗಿವೆ. ಆ ಒಂದು ಕೊಳಕನ್ನು ಮಾನ್ಯ ವಿದ್ಯಾ ಮಂತ್ರಿಗಳು ಈಗ ಹೋರಬೇಕಾದ ಪರಿಸ್ಥಿತಿ ಬಂದಿದೆ. ಈ ದಿನ ವಿದ್ಯಾ ಇಲಾಖೆಯಲ್ಲಿ ಮಾಡಿದಂತಹ ನಾನಾ ಪಾಲಿಸಿಗಳು ಯಾವವೂ ಕೂಡ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂತಹ ಮಕ್ಕಳಿಗೆ ತಲುಪುತ್ತಾ ಇಲ್ಲ. ಇವತ್ತು ಯಾವ ಹರಿಜನ ಗಿರಿಜನರು ಹಳ್ಳಿಗಳಲ್ಲಿದ್ದಾರೆ ಅವರ ಮಕ್ಕಳಿಗೆ ವಿದ್ಯಾ ಸೌಕರ್ಯ ಸಿಗುತ್ತಾ ಇಲ್ಲ. ಎಲ್ಲಾ ಪಟ್ಟಣದಲ್ಲಿರತಕ್ಕಂತಹ ಹರಿಜನರ ಗಿರಿಜನರ ಮಕ್ಕಳಿಗೇ ಮೀಸಲಾಗಿವೆ. ಇವತ್ತು ಹಳ್ಳಿಯ ಹರಿಜನರ ಗಿರಿಜನರ ಮಕ್ಕಳು ಒಂದು ಎಸ್. ಎಸ್. ಎಲ್. ಸಿ ಪರೀಕ್ಷೆಯನ್ನು ಪಾಸು ಮಾಡಿಕೊಂಡು ಪಾಲಿಟೆಕ್ನಿಕ್ ಶಾಲೆಗಳಿಗೆ, ಐ. ಟಿ. ಐ. ತರಬೇತಿ ಶಾಲೆಗೆ ಹೋಗುವಂತಹ ಪರಿಸ್ಥಿತಿಯೇ ಇಲ್ಲದಿರುವಾಗ ಅವರು ಡಾಕ್ಟರ್‌ಗಳಾಗುವುದು, ಎಂಜಿನಿಯರ್‌ಗಳಾಗುವುದು ಎಲ್ಲಿಂದ ಬಂತು ? ನಮ್ಮ ಹಳ್ಳಿಗಾಡಿನ ಮಕ್ಕಳು ಶಾಲೆಯಲ್ಲಿ ಗರಿಷ್ಠ ೩೮–೩೯–೪೦–೪೨ ಅಂಕಗಳನ್ನು ಪಡೆಯುವುದೇ ಕಷ್ಟವಾಗಿರುವಾಗ ಶೇಕಡಾ ೬೫–೭೫ ಅಂಕಗಳನ್ನು ತೆಗೆದುಕೊಂಡು ಮುಂದೆ ಬರುವುದಕ್ಕೆ ಎಲ್ಲಿ ಆಗುತ್ತದೆ ? ಈ ಕೂಲಿ ಮಾಡತಕ್ಕ ಜನರ ಮಕ್ಕಳು ಎಲ್ಲಿ ಮುಂದೆ ಬರುತ್ತಾರೆ ಪಾಪ ಅವರಿಗೆ ಸರಿಯಾದ ಊಟ ಇಲ್ಲ, ಬಟ್ಟೆ ಇಲ್ಲ, ಚೆನ್ನಾಗಿ ಓದಿ ಎಂದು ಹೇಳಿದರೆ ಏನು ಓದುತ್ತಾರೆ ? ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿರುವುದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ನ್ಯಾಷನಲ್ ಎಜುಕೇಷನ್ ಪಾಲಿಸಿ ಬಗ್ಗೆ ಮಾತನಾಡುತ್ತಾ ಎಜುಕೇಷನಲಿಸ್ಟ್ ಒಬ್ಬರು ಮಿನಿಮಮ್ ನೀಡ್ಸ್ ಪ್ರೋಗ್ರಾಂ ಕೆಳಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನೂ ಸೇರಿಸಬೇಕೆಂದು ಹೇಳಿದ್ದಾರೆ. ಅದಕ್ಕೆ ಏನಾದರೂ ಯೋಚನೆಯನ್ನು ಸರ್ಕಾರ ಮಾಡಿದೆಯೋ ಎಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಶಿವಪ್ಪ.—ಸ್ವಾತಂತ್ರ್ಯ ಬಂದು ೩೩ ವರ್ಷಗಳಾದರೂ ರೈತರಿಗೆ ಒಂದು ಪ್ರಾತಿನಿಧ್ಯ ಸಿಕ್ಕಿಲ್ಲ. ಮೂರು ದಿವಸಗಳಿಂದಲೂ ರೈತ ಬಗ್ಗೆ ಸಂತಾಪವನ್ನು ಸಭೆಯಲ್ಲಿ ವ್ಯಕ್ತಪಡಿಸುತ್ತಾ ಬಂದಿದ್ದೇವೆ, ರಾಜ್ಯದಲ್ಲಿ ಶೇಕಡಾ ೮೦ ಭಾಗರ ಇರತಕ್ಕಂತಹ ರೈತರಿಗೆ ಅಗ್ರಿಕಲ್ಚರ್ ಕಾಲೇಜಿನ ಶೇಕಾಡ ೧೦ ಜಾಗಗಳನ್ನು ಕಾಯ್ದಿರಿಸಲಾಗಿದೆ. ಇನ್ನು ಉಳಿದ ಶೇಕಡಾ ೯೦ ಜಾಗಗಳು ಮೆರಿಟ್‌ನವರಿಗೆ, ಯಾವ ವ್ಯವಸಾಯಗಾರರ ಮಕ್ಕಳು ಮೆರಿಟ್‌ನಲ್ಲಿ ಬರುತ್ತಾರೆ ಹೇಳಿ ಸ್ವಾಮಿ ? ನನ್ನ ಸಂಸಾರದ ವಿಷಯವನ್ನೇ ತೆಗೆದುಕೊಳ್ಳಿ ಸ್ವಾಮಿ ನನ್ನ ನಾಲ್ಕು ಜನ ಮಕ್ಕಳಲ್ಲಿ ಇಬ್ಬರು ಎಸ್. ಎಸ್. ಎಲ್. ಸಿ. ವರೆಗೆ ಓದಿ ಬಿಟ್ಟುಬಿಟ್ಟರು. ಮತ್ತೊಬ್ಬ ಎರಡನೇ ವರ್ಷ ಬಿ. ಎ. ಗೆ ನಿಲ್ಲಿಸಿಬಿಟ್ಟ; ನಾಲ್ಕನೆಯವನು ಹಾಗೂ ಹೀಗೂ ಬಿ. ಎ. ಮುಗಿಸಿದ ಆತ ಸುಮಾರು ೩೯ ಪರ್ಸೆಂಟ್ ಅಂಕಗಳನ್ನು ತೆಗೆದು ಕೊಂಡಿದ್ದಾನೆ. ಲಾ ಓದಬೇಕು ಎಂದು ಹೋದರೆ ಅಲ್ಲಿ ಸೇರಿಸಿಕೊಳ್ಳುವುದಿಲ್ಲ ನೌಕರಿ ಇಲ್ಲ. ಈ ಒಂದು ಸ್ಥಿತಿ ನಮ್ಮ ಸಂಸಾರದಲ್ಲಿ ಆಗಿರುವಾಗ ಇನ್ನು ಬೇರೆ ರೈತರ ಗತಿ ಏನು ಸ್ವಾಮಿ ?

ಶ್ರೀ ಜೆ. ಎಚ್. ಪಟೇಲ್.—ತಮ್ಮ ವಿದ್ಯಾಭ್ಯಾಸ ಎಷ್ಟು ?

ಶ್ರೀ ವಿ. ಎಲ್. ಶಿವಪ್ಪ.—ನಮ್ಮದು ಎಷ್ಟಾದರೆ ಏನು ಸ್ವಾಮಿ. ನನಗೆ ಓದುವುದಕ್ಕೆ, ಬರೆಯುವುದಕ್ಕೆ ಬರುತ್ತದೆ. ಆದರೆ ನನಗೆ ಮೋಸ ಮಾಡುವುದಕ್ಕೆ ಬರುವುದಿಲ್ಲ ಸ್ವಾಮಿ. ನಾನು ಯಾರಿಗೂ ಮೋಸ ಮಾಡಿಲ್ಲ ಹಾಗೂ ಮಾಡುವುದಿಲ್ಲ ಆದ್ದರಿಂದ ಈ ವ್ಯವಸಾಯ ಕಾಲೇಜಿನಲ್ಲಿ ೧೦ ಪರ್ಸೆಂಟ್ ವ್ಯವಸಾಯಗಾರರಿಗೆ ಕೊಡಬೇಕು ಅಂತವನು ಇದೆ ಅದು ಪಟ್ಟಣದಲ್ಲಿರುವಂತಹ ಮಕ್ಕಳಿಗೆ ಸಿಗುತ್ತದೆ ಪಟ್ಟಣದಲ್ಲಿರುವಂತಹವರ ಮಕ್ಕಳು ಮೊದಲು ವೈದ್ಯಕೀಯಕ್ಕೆ ನಂತರ ಎಂಜಿನಿಯರಿಂಗ್‌ಗೆ ಪ್ರಯತ್ನ ಪಟ್ಟು ಅನಂತರ ವ್ಯವಸಾಯ ಕಾಲೇಜಿಗೆ ಸೇರುತ್ತಾರೆ. ಪಟ್ಟಣಗಳಲ್ಲಿ ಇರತಕ್ಕಂತಹ ಬಸವಲಿಂಗಪ್ಪನವರ ಮಕ್ಕಳು * * *

(ನಗು)

As directed by the Chair the words are expunged.

ಶ್ರೀ ಎಸ್. ಪ್ರಮಿಳಾ.—It is defamatory.

SRI B SUBBAIAH SHETTY.—It must be expunged.

MADAM DEPUTY SPEAKER.—I request the Hon'ble member to apologise, and I order for the expunction of the same.

ಶ್ರೀ ವಿ. ಎಲ್ ಶಿವಪ್ಪ.—ಪಟ್ಟಣದಲ್ಲಿ ಇರತಕ್ಕಂತಹ ಮಕ್ಕಳು ಎಂದು ಹೇಳುವಾಗ ತಮಾಷೆಯಾಗಿ ನಾನು * * * ನಾನು ಲಕ್ಷ್ಮೀಸಾಗರ್ ಅವರ ಹೆಸರನ್ನೂ ಹೇಳುವವನಿದ್ದೆ. ಅಷ್ಟರಲ್ಲಿಯೇ ಎಲ್ಲರೂ ಎದ್ದು ಬಿಟ್ಟರು. ನಾನು ಆ ಪದವನ್ನು ಉಪಯೋಗಿಸಿದ್ದಕ್ಕೆ ನಾನು ಕ್ಷಮಾಪಣೆಯನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ.—ಶ್ರೀಮತಿ ಪ್ರಮಿಳಾ ಅವರು ಬಹುಶಃ ಈ ಒಂದು ರಾಜ್ಯದ ಹೆಣ್ಣು ಮಕ್ಕಳ ಬಗ್ಗೆ ಬಹಳ ಆಸಕ್ತಿ ವಹಿಸುತ್ತಿರುವ ಒಬ್ಬ ಸಾಹಿತಿ, ಅವರು ಹೆಣ್ಣು ಮಕ್ಕಳನ್ನು ವಹಿಸಿಕೊಂಡಿದ್ದಾರೆನ್ನುವ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಈ ಮಾತನ್ನು ಹೇಳಿದ್ದಾರೆ ವಿನಹ ಮಾನ್ಯ ಪ್ರಮಿಳಾ ಅವರು ಏನು ತಿಳಿದುಕೊಂಡಿದ್ದಾರೆ ಆ ಅರ್ಥದಲ್ಲಿ ಅವರು ಹೇಳಿರಲಾರರು.

ಶ್ರೀ ವಿ ಎಲ್. ಶಿವಪ್ಪ. — ಇವತ್ತು ಪಟ್ಟಣದಲ್ಲಿರುವವರ ಮಕ್ಕಳಿಗೆ ಮೆಡಿಕಲ್, ಎಂಜಿನಿಯರಿಂಗ್ ಹಾಗೂ ವ್ಯವಸಾಯದ ಕಾಲೇಜುಗಳು ಇವೆಯೇ ಹೊರತು ಮತ್ತೆ ಇನ್ನು ಯಾವ ರೈತರ ಮಕ್ಕಳಿಗೂ ಇಲ್ಲಿ ಅವಕಾಶ ಇಲ್ಲ ಎಂದು ಹೇಳುತ್ತೇನೆ. ೩ ದಿವಸಗಳಿಂದ ಸಭೆಯಲ್ಲಿ ರೈತರ ಬಗ್ಗೆ ಶೋಕ ಸಪ್ತಾಹವನ್ನು ಆಚರಿಸುತ್ತಿದ್ದೇವೆ. ನಾನು ಒಂದು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಸಿಗಲಿಲ್ಲ. ಆದ್ದರಿಂದ ಇವತ್ತು ಹಣ ಸರಿಯಾದ ರೀತಿಯಲ್ಲಿ ಹಂಚಿಕೆಯಾಗತಕ್ಕ ಜವಾಬ್ದಾರಿ ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಸೇರಿದ್ದು. ಅವರು ಸುಮ್ಮನೆ ಹಣವನ್ನು ಹಂಚಿ ಕೂರತಕ್ಕದ್ದಲ್ಲ. ಅವರ ಕೈಯ್ಯಲ್ಲಿ ಪ್ಲಾನಿಂಗ್ ಇಲಾಖೆ ಕೂಡ ಇದೆ. ಅವರು ಸರಿಯಾದ ಪ್ಲಾನಿಂಗ್ ಮಾಡುವಾಗ ನಿಜವಾಗಿಯೂ ಒಂದು ರೈತರ ಕಷ್ಟವನ್ನು ಅರಿತವರಾದ್ದರಿಂದ ರೈತರ ಒಂದು ಕಷ್ಟ ನೋಡಿಕೊಂಡು ಪಾಲಿಸಿಗಳನ್ನು ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಇಲ್ಲದಿದ್ದರೆ ಬರೀ ಭಾಷಣ ಮಾಡಿ ಓಟನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿ ಆಗಬಾರದು. ಹೀಗಾಗುವುದರಿಂದ ಬಡತನ ಶಾಶ್ವತವಾಗಿ ರೈತರಲ್ಲಿ ಉಳಿದುಕೊಳ್ಳುತ್ತದೆ. ರೈತರನ್ನು ಬಡತನದಲ್ಲಿಯೇ ಇಟ್ಟು ಅವರಿಂದ ಓಟನ್ನು ಪಡೆದು ಅಧಿಕಾರದಲ್ಲಿ ಇರಬೇಕೆಂದು ಸರ್ಕಾರದ ಉದ್ದೇಶ ಇದ್ದರೆ ಅದು ತಪ್ಪಾಗುತ್ತದೆ. ಅವರು ಓಟು ಕೊಡಬೇಕಾದರೂ ಒಬ್ಬರಿಗೇ ಕೊಡುವುದಿಲ್ಲ. ಒಂದು ಬಾರಿ ಈ ಕಡೆಯವರಿಗೆ ಕೊಟ್ಟರೆ ಇನ್ನೊಂದು ಬಾರಿ ಆ ಕಡೆಯವರಿಗೆ ಓಟು ಕೊಡುತ್ತಾರೆ. ದೇಶದಲ್ಲಿ ಶೇಕಡಾ ೮೦ ಭಾಗ ಬಡಜನರೇ ಆಗಿರತಕ್ಕ ರೈತರ ಬಗ್ಗೆ ಮೂರು ದಿನಗಳಿಂದ ಶೋಕ ಸಪ್ತಾಹ ಆಯಿತು. ಒಂದು ಟ್ಯಾಕ್ಸ್ ವಿಷಯದಲ್ಲಿ ಇಷ್ಟೊಂದು ಗಲಾಟೆ ನಡೆದಿರಬೇಕಾದರೆ ಇದರ ಹಿನ್ನೆಲೆ ಏನಿದೆ ಎಂಬುದು ಗೊತ್ತಾಗುವುದಿಲ್ಲ

೫-೩೦ ಪಿ.ಎಂ.

ಈವತ್ತು ೧೦೦ಕ್ಕೆ ೮೪ ಜನ ರೈತರು ಇರತಕ್ಕಂಥ ಈ ದೇಶದಲ್ಲಿ ರೈತರ ಹೆಸರಿನಲ್ಲಿ ದುರುಪಯೋಗ ನಡೆಯುತ್ತಿರುವುದನ್ನು ಅವರು ಚೆನ್ನಾಗಿ ಅರಿತಿದ್ದಾರೆ. ಅವರು ಇಂದು ಜಾಗ್ರತರಾಗಿದ್ದಾರೆ. ನಾವು ಮೋಸ ಹೋಗುತ್ತಿದ್ದೇವೆ ಎಂಬುದನ್ನು ಅರಿತುಕೊಂಡಿರುತ್ತಾರೆ. ಆದ್ದರಿಂದ ರಾತ್ರಿ ಹಗಲು ಕಷ್ಟಪಟ್ಟು ದುಡಿಯುತಕ್ಕಂಥ ಈ ಜನರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡದೆ ಹೋದರೆ ಮುಂದೆ ಒಂದು ದೊಡ್ಡ ಅನಾಹುತವನ್ನೇ ದೇಶ ಎದುರಿಸಬೇಕಾಗುತ್ತದೆ. ಒಂದು ಸಂಸಾರಕ್ಕೆ ಒಬ್ಬರಿಗೆ ನೌಕರಿ ಕೊಡುತ್ತೇವೆಂದು ಘೋಷಿಸುವಂಥ ಕೆಲಸವನ್ನು ಯಾವ ಸರಕಾರವು ಅಧಿಕಾರಕ್ಕೆ ಬಂದಮೇಲೆ ಈ ಕೆಲಸವನ್ನು ಮಾಡಲಿಲ್ಲ. ಇಂಥ ಒಂದು ಕಾನೂನನ್ನು ಮಾಡಿ ಯಾರಿಗೆ ಉದ್ಯೋಗವನ್ನು ದೊರಕಿಸಿಕೊಟ್ಟಿದ್ದಾರೆಂದು ಈ ಸಂದರ್ಭದಲ್ಲಿ ನಾನು ಕೇಳುತ್ತೇನೆ. ಈ ಬಗ್ಗೆ ಭಾಷಣ ಮಾಡುವುದು ಆಗಿದೆಯೇ ಹೊರತು ಈ ದಿಶೆಯಲ್ಲಿ ಕಾರ್ಯತಃ ಯಾವ ಸರ್ಕಾರವು ಸಾಧನೆಯನ್ನು ಮಾಡಿಲ್ಲ. ಈವತ್ತಿನ ದಿವಸ ಪರಿಸ್ಥಿತಿ ಏನಾಗಿದೆ ಎಂದರೆ ಒಂದು ಅಟೆಂಡರ್ ಪೋಸ್ಟ್ ದೊರಕಿಸಿಕೊಳ್ಳಬೇಕೆಂದರೆ ಮೂರು ಸಾವಿರ ರೂಪಾಯಿಗಳನ್ನು ಕೊಡಬೇಕು. ಒಂದು ಟೀಚರ್ ಪೋಸ್ಟ್ ದೊರಕಿಸಿಕೊಳ್ಳಬೇಕಾದರೆ ಮೂರು ಸಾವಿರ ರೂಪಾಯಿಗಳನ್ನು ಕೊಡಬೇಕು. ಈ ರೀತಿಯಾಗಿ ಸರ್ಕಾರಿ ಹುದ್ದೆಗಳು ಮಾರಾಟವಾಗುತ್ತಿರುವುದರಿಂದ ಉನ್ನತ ಮಟ್ಟದಲ್ಲಿ

---

* As directed by the chair the words are expunged.

ತೇರ್ಗಡೆಯಾದವರಿಗೆ ಅವಕಾಶಗಳು ದೊರಕುತ್ತಿಲ್ಲ. ಕಡಿಮೆ ಅಂಕಗಳನ್ನು ತೆಗೆದುಕೊಂಡವರಿಗಂತೂ ಇಂಟರ್‌ವ್ಯೂ ಕೂಡ ಬರುವುದಿಲ್ಲ. ಈವತ್ತಿನ ದಿವಸ ಬಿ.ಎ., ಬಿ.ಎಸ್‌ಸಿ., ಪಾಸ್ ಮಾಡಿರತಕ್ಕಂಥ ಪದವೀಧರರಾಗಿರತಕ್ಕಂಥ ವಿದ್ಯಾರ್ಥಿಗಳು ೫-೬ ರೂಪಾಯಿಗಳಿಗೆ ದಿನಗೂಲಿ ಮಾಡಿಕೊಂಡು ಜೀವನ ಮಾಡತಕ್ಕಂಥ ಪರಿಸ್ಥಿತಿ ಬಂದಿರುತ್ತದೆ. ತಾವು ಕೊಟ್ಟ ಆಶ್ವಾಸನೆಗಳು ಏನಾಯಿತು. ಮೂವತ್ತು ವರ್ಷಗಳಿಂದ ಯಾರು ಯಾರೋ ಅಧಿಕಾರಕ್ಕೆ ಬಂದರು, ಹರಿಜನರ ಗಿರಿಜನರ ಸ್ಥಿತಿ ಏನು ಸುಧಾರಿಸಲಿಲ್ಲ. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಹರಿಜನ ಗಿರಿಜನರ ಪರಿಸ್ಥಿತಿ ಇಂದಿಗೂ ಹಾಗೆಯೇ ಇರುತ್ತದೆ. ಮಾತೆತ್ತಿದರೆ ಹರಿಜನ ಗಿರಿಜನರ ಉದ್ಧಾರ ಮಾಡುತ್ತೇವೆಂದು ಹೇಳುತ್ತಾರೆ. ಈವೊತ್ತಿಗೂ ಎಸ್‌ಎಸ್‌ಎಲ್‌ಸಿ. ಬಿ.ಎ. ಬಿಎಸ್‌ಸಿ ಮಾಡಿಕೊಂಡಿರತಕ್ಕಂಥ ಹರಿಜನ ಗಿರಿಜನರ ಮಕ್ಕಳು ಗ್ರಾಮಾಂತರ ಪ್ರದೇಶಗಳಲ್ಲಿ ಕೂಲಿಮಾಡಿಕೊಂಡು ಜೀವನ ಮಾಡುತ್ತಿರುತ್ತಾರೆ. ಇದರ ಬಗ್ಗೆ ಸರ್ಕಾರದವರು ವಿಚಾರ ಮಾಡಬೇಕು. ಪ್ರಜಾಪ್ರಭುತ್ವದಲ್ಲಿ ಏನು ಅನ್ಯಾಯ ನಡೆಯುತ್ತಿದೆ ಅದರ ಬಗ್ಗೆ ಚಿಂತನೆ ಮಾಡತಕ್ಕಂಥ ಸರ್ಕಾರ ಅಧಿಕಾರಕ್ಕೆ ಬರಬೇಕು. ಮಾನ್ಯ ಬಸವಲಿಂಗಪ್ಪನವರು ಅಧಿಕಾರದಲ್ಲಿದ್ದಾಗ ಅವರನ್ನು ಕೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ನನ್ನ ಕಡೆ ನೋಡಿ ನೋಡಿ ನನಗ್ಯಾಕೆ ಗಂಟು ಬೀಳುತ್ತಿದ್ದಾರೋ ಗೊತ್ತಿಲ್ಲ. ಅಧಿಕಾರದಲ್ಲಿರುವವರಿಗೆ ಗಂಟು ಬೀಳಿ ಎಂದು ಹೇಳುತ್ತೇನೆ.

ಶ್ರೀ ಎ.ಎಲ್. ಶಿವಪ್ಪ.—ನಿಮಗೆ ಅಧಿಕಾರ ಕೊಟ್ಟಿರಲಿಲ್ಲವೇ?

ಶ್ರೀ ಬಿ. ಬಸವಲಿಂಗಪ್ಪ.—ನನಗೆ ಅಧಿಕಾರ ಕೊಟ್ಟಿದ್ದಾಗ ನೀವು ಏನು ಹೇಳುತ್ತಿರುವಿರಿ ಸಾಧ್ಯವಾದ ಮಟ್ಟಿಗೆ ಅದೆಲ್ಲ ಮಾಡಿರುತ್ತೇನೆ. ಈಗ ಏನು ಮಾಡುವಂತಿಲ್ಲ.

ಶ್ರೀ ಎ ಎಲ್. ಶಿವಪ್ಪ.—ವಿದ್ಯಾ ಇಲಾಖೆಯಲ್ಲಿ ಡಿ.ಪಿ.ಐ. ಹುದ್ದೆಯನ್ನು ಕೊಡಬೇಕಾದರೆ ಸರಿಯಾದ ವ್ಯಕ್ತಿಗೆ ಕೊಡಬೇಕು. ಪ್ರಜಾಪ್ರಭುತ್ವವನ್ನು ಅರ್ಥಮಾಡಿಕೊಂಡಿರತಕ್ಕಂಥ ವ್ಯಕ್ತಿಗಳಿಗೆ ಕೊಡಬೇಕು. ವಿದ್ಯಾಭ್ಯಾಸದಲ್ಲಿ ಅರಿತು ನುರಿತವರಾಗಿರಬೇಕು. ಬರವಣಿಗೆ ಇರಬೇಕು, ಅಂಥ ವ್ಯಕ್ತಿಗಳಿಗೆ ಅವಕಾಶವನ್ನು ಕೊಡಬೇಕು. ಯಾವ ಕಾರಣಕ್ಕಾಗಿ ಈ ಇಲಾಖೆಗೆ ಐ.ಎ.ಎಸ್. ಅಧಿಕಾರಿಗಳನ್ನು ನೇಮಕ ಮಾಡುತ್ತಾರೋ ಅರ್ಥವಾಗುತ್ತಿಲ್ಲ. ಐ.ಎ.ಎಸ್. ಅಧಿಕಾರಿಗಳನ್ನು ಹಾಕುತ್ತೇವೆಂದರೆ ಆಸ್ಪತ್ರೆಗಳಿಗೂ, ಮತ್ತು ಇಂಜಿನೀಯರಿಂಗ್ ಡಿಪಾರ್ಟ್‌ಮೆಂಟ್‌ಗೂ ಏತಕ್ಕೆ ಹಾಕಬಾರದು ಅದನ್ನು ಏತಕ್ಕೆ ಬಾಕಿ ಬಿಟ್ಟಿರುತ್ತೀರಿ, ಅದಕ್ಕೂ ಐ.ಎ ಎಸ್. ಅಧಿಕಾರಿಗಳನ್ನು ಭರ್ತಿ ಮಾಡಿ. ಇಂಥ ಇಲಾಖೆಗಳಿಗೆ ಐ ಎ ಎಸ್. ಅಧಿಕಾರಿಗಳನ್ನು ಹಾಕಿದರೆ ಏನೂ ಪ್ರಯೋಜನವಾಗುವುದಿಲ್ಲ. ಬೇರೆ ಬೇರೆ ಪ್ರದೇಶಗಳಿಂದ ಬರತಕ್ಕಂಥ ಐ ಎ.ಎಸ್. ಅಧಿಕಾರಿಗಳನ್ನು ಈ ಇಲಾಖೆಗೆ 'ನೇಮಕ ಮಾಡಿದರೆ ಅವರಿಗೆ ಯಾವ ಎಕ್ಸ್‌ಪೀರಿಯನ್ಸ್' ಇದೆ. ಆದ್ದರಿಂದ ದಯವಿಟ್ಟು ಇಂಥ ಇಲಾಖೆಗೆ ಅಧಿಕಾರಿಗಳನ್ನು ನೇಮಕ ಮಾಡುವಾಗ ಈ ಕ್ಷೇತ್ರದಲ್ಲಿ ಅರಿತಂತ, ನುರಿತಂತ ವ್ಯಕ್ತಿಗಳನ್ನು ಹಾಕಬೇಕು. ಇಲಾಖೆಯನ್ನು ಸರಿಯಾಗಿ ಇಟ್ಟುಕೊಂಡು ಆಡಳಿತವನ್ನು ನಡೆಸತಕ್ಕಂಥ ಪ್ರಾಮಾಣಿಕ ವ್ಯಕ್ತಿಗಳನ್ನು ಹಾಕಬೇಕು. ಇಲ್ಲದಿದ್ದರೆ ೧೬೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಏನು ಪ್ರಯೋಜನವಾಗಲಾರದು. ಮಾನ್ಯ ಆನಂದ ರಾವ್‌ರವರು ಮಾನ್ಯ ವಿದ್ಯಾಸಚಿವರು ತಲೆಮೇಲೆ ಕೈಯನ್ನು ಇಟ್ಟುಕೊಂಡಿರುವುದನ್ನು ಗಮನಿಸಿ ಹೇಳಿದರು.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಸಚಿವರು ಇದೇನು ಗ್ರಹಚಾರ ಬಂತಪ್ಪಾ ಎಂದು ತಲೆ ಚಚ್ಚಿ ಕೊಳ್ಳುತ್ತಿದ್ದಾರೆ.

ಶ್ರೀ ಜಿ.ಬಿ. ಶಂಕರ್‌ರಾವ್.—ಹಾಗೇನು ಇಲ್ಲ. ಮಾನ್ಯ ಸದಸ್ಯರು ತಲೆ ಮುಟ್ಟಿ ನೋಡಿಕೊಂಡು ಭಾಷಣ ಮಾಡಲಿ ಎಂದು ತೋರಿಸಿದೆ.

ಶ್ರೀ ಎ.ಎಲ್. ಶಿವಪ್ಪ.—ನೀವು ತಯಾರು ಮಾಡತಕ್ಕಂಥ ಜನರು ಬುದ್ಧಿವಂತರಿರಬೇಕು. ದೇಶಕ್ಕೆ ಹೆಚ್ಚಿನ ಸೇವೆಯನ್ನು ಮಾಡತಕ್ಕಂಥ ಶಕ್ತಿ ಸಾಮರ್ಥ್ಯವನ್ನು ಹೊಂದಿರತಕ್ಕಂಥ ಜನರನ್ನು ಇಲಾಖೆ ಕೊಡಬೇಕು. ಅದಕ್ಕಾಗಿ ಇಲಾಖೆ ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡಬೇಕು. ಸಾರ್ವಜನಿಕರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇತರೆ ಇಲಾಖೆಗಳಲ್ಲಿ ಕೋಟಿ ಕೋಟಿ ಗಟ್ಟಲೆ ಹಣ ಪೋಲಾಗುತ್ತಿರುವಂತೆ ಈ ಇಲಾಖೆಯಲ್ಲೂ ಪೋಲಾದರೆ ಏನು ಗೌರವವಿರುತ್ತದೆಂದು ಹೇಳುತ್ತೇನೆ. ಇನ್ನು ನಮ್ಮ ಭಾಗಕ್ಕೆ ಒಂದು ಹೈಸ್ಕೂಲ್ ಬೇಕೆಂದು ಕೇಳೋಣವೆಂದಿದ್ದೆ. ಹೇಗೆ ಕೇಳುವುದು ಎಂದಾಗಿದೆ, ನಮ್ಮ ಭಾಗ

ದಲ್ಲಿ ೧೯೪೭ನೇ ಇಸವಿಯಿಂದ ಇಲ್ಲಿಯು ತನಕ ಒಂದು ಹೈಸ್ಕೂಲು ಸ್ಯಾಂಕ್ಷನ್ ಆಗಿಲ್ಲ. ಕಡಸೂರಿನಲ್ಲಿ ತಾಲ್ಲೂಕು ಬೋರ್ಡ್ ನಡೆಸುತ್ತಿರುವುದೊಂದು ಹೈಸ್ಕೂಲನ್ನು ಬಿಟ್ಟರೆ ಅಲ್ಲಿ ಒಂದು ಪ್ರೈವೈಟ್ ಸ್ಕೂಲ್ ಕೂಡ ಇಲ್ಲ. ಪ್ರತಿವರ್ಷ ಯಾರು ಯಾರೋ ಪ್ರಾರಂಭ ಮಾಡುತ್ತೇವೆಂದು ಹೇಳುತ್ತಾರೆಯಾದರೂ ಯಾರು ಬರಲಿಲ್ಲ. ಈವತ್ತಿನ ದಿವಸ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂಚಿತವಾಗಿ ತಮ್ಮ ಇಲಾಖೆಯವರಿಂದ ಇನ್‌ಸ್ಪೆಕ್ಷನ್ ನಡೆಯುತ್ತದೆ. ಇದು ಇಲಾಖೆಯವರು ಪ್ರಾಮಾಣಿಕತನದಿಂದ ತನಿಖೆ ಯಾಗಬೇಕು. ಇವರಲ್ಲೂ ಕೂಡ ಬಹಳ ಮಟ್ಟಿಗೆ ಅನ್ಯಾಯಗಳು ನಡೆಯುತ್ತಿವೆ. ಕೆಲವೊಂದು ಪ್ರೈವೈಟ್ ಸ್ಕೂಲ್‌ಗಳಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಕಡಿಮೆ ಅಂಕಗಳನ್ನು ತೆಗೆದರೆ ಅಂಥ ಹುಡುಗರಿಗೆ ಲಿವಿಂಗ್ ಸರ್ಟಿಫಿಕೇಟ್ ಕೊಟ್ಟು ಕಳುಹಿಸಿಬಿಡುತ್ತಾರೆ. ಅವರು ಬಂದು ಸರ್ಕಾರಿ ಶಾಲೆಗಳಲ್ಲಿ ಸೇರಿಕೊಳ್ಳಬೇಕಾದರೆ ಸ್ಥಳಾವಕಾಶ ಸಿಕ್ಕದೆ ಅವರು ಪಡತಕ್ಕಂಥ ವನವಾಸ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ತಾವು ಸರಿಪಡಿಸದಿದ್ದರೆ ಇದು ಒಂದು ಶಾಪವಾಗುತ್ತದೆಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶ ಗಳಿಂದ ಬರತಕ್ಕಂಥ ವಿದ್ಯಾರ್ಥಿಗಳಿಗೆ ಕಡಿಮೆ ಅಂಕಗಳು ಬಂದಿರುತ್ತವೆಂದು ಅವರಿಗೆ ಪಾಲಿಟೆಕ್ನಿಕ್‌ಗಳಲ್ಲಿ ಮತ್ತು ಬಿ.ಎಸ್.ಸಿ. ಅಗ್ರಿಕಲ್ಚರ್ ಇವುಗಳಲ್ಲಿ ಸೀಟ್ ಸಿಗುತ್ತಿಲ್ಲ ಗ್ರಾಮಾಂತರ ಪ್ರದೇಶಗಳಿಂದ ಬರ ತಕ್ಕಂಥವರಿಗೆ ೧೦ ಪರ್ಸೆಂಟ್ ಬಿಎಸ್‌ಸಿ ಯಲ್ಲಿ ಯಾವರೀತಿ ಕೊಟ್ಟಿರುತ್ತೀರಿ, ಅದೇರೀತಿ ಪಿಯುಸಿ ಅಗ್ರಿಕಲ್ಚರ್ ಸೈನ್ಸ್‌ನಲ್ಲಿ ಒಂದು ಭಾಗವನ್ನು ಅವರಿಗೆ ಕೊಡಬೇಕು. ಜೂನಿಯರ್ ಕಾಲೇಜುಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ತೆಗೆದರೆ ಅಲ್ಲಿಯ ರೈತರ ಮಕ್ಕಳಿಗೆ ಹೆಚ್ಚಿಗೆ ಅವಕಾಶ ಸಿಕ್ಕುವಂತಾಗು ತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ತೀರ ಬಡತನದಿಂದ ಇರತಕ್ಕಂಥವರು ೬೦-೭೦ ಭಾಗ ಜನರು ಇರುತ್ತಾರೆ ಅವರ ಬಗ್ಗೆ ಸೂಕ್ಷ್ಮವಾಗಿ ವಿವೇಚನೆಯಿಂದ ಪರಿಶೀಲಿಸಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

SRI N. B. SIRDESAI.— Mr. Speaker Sir, a few years back the Education Department was considered to be above corruption and nepotism. Now, we are finding that unchecked corruption is going on in full swing. Nepotism has made a considerable headway in the Department and the gross negligence in the discharge of official duties is experienced daily. Misutilisation of the Government funds is going on, on an extensive scale. Therefore, I wish to oppose Demand Nos. 9, 10 and 13 tabled by the Education Department.

At the outset, I wish to take up The Department of Development of Kannada and Culture. I congratulate the Government for making provision of huge amount for the development of beutiful Kannada. Sir, we have no enemity against Kannada language and Kannadigas. We have got high respect for their language. But I regrat very much to note that Government have failed to make any budget provision for the development of other minority languages such as Marati, Urdu, Tulu etc., In a democratic set up there must be equal treatment and scope for the development of minority languages also. Otherwise the people will think that no democracy is prevailing in the State. I think the Government have failed to follow simple rule of administration which was followed by the rulers and administrators. In the historical period. Also the rulers used to learn the languages of the Local People over whom they ruled as far as possible to understand the feelings of all the people. In this age also the rulers must learn the languages, of the Local People over whom they want to rule. They should not impose their own language.

SRI G. B. SHANKER RAO.— Who are the rulers?

SRI N. B. SIRDESAI.—Government is the rular. You must try to learn all t'e languages otherwise you cannot understand the feelings of the people. Then, Sir, the rulers were not imposing their language on the people. The British people who ruled our India for more than 150 years had learnt languages of the local people at First. Then they taught their language to the people. Likewise Tippu Sultan, Tiger of Mysore who ruled over Mysore never tried to impose his mother tongue-Urdu over the Kannadigas here. In fact he used to write letters in local languages. He also wrote letters in Marati to one of my ancestors. Even Shahaja Maharaja, father of a Chatrapathi Shivaji who ruled over Bangalore and some parts of Karnataka never tried to impose Marathi language on the Kannadigas and in fact he learnt Kannada language. Then why this Government should impose Kannada in Schools and Government offices in border areas.

Sir, secondly I take up department of Primary Education, Printing, Stationary & Publication. In page 31 of the Annual Report it is said that Government Orders. Rules and Acts are published in English & Kannada. I would like to know how people who do not know Kannada can understand rules and Government Orders If Government Orders; Rules *etc* are published in Kannada only. Rules and Government orders are meant for the people. Here I would like to quote an instance of the departmental negligence in printing a text book. There is one text book prescribed for 8th standard. It is known as "ಸಾಧನೆಯ ಹಾದಿಯಲ್ಲಿ" In this text book false information is given and the same is thought to the students. The result is the student will have grudge againest the people. against the Maharastra and Marathi People. At page 31 para 2 of the book information is printed about the life of Dr. Ambedkar! Sir, we have got high respect for Dr. Ambedkar and his community. In that book it is mentioned since then Mahars were the origtnal residents of Maharastra the State is named as Maharastra. It is not correct. Maha means big and rastra means nation.Since it is a big nation they have called it as Maharastra. And also it is the State of Marathi People so it is called so. In this way the students have been misguided and the another side are bringing bad name to the Marathi people by teaching false informations. It s same in the case of border dispute also.

G. B. SHANKER RAO.— Sir, I am really happy Mr. Sirdesai has made a thorugh study of Kannada text book. I think he is fit to be appointed as Director for Kannada & Culture.

SRI N. B. SIRDESAI.— Sir, at page 35 they have mentioned somethig about department of Pre-Univirsity. At present there are 281 Composite Junior Colleges *i.e.*, They are Upgraded High Schools. Here I would like to bring to the notice of the Government that at Khanpur there is a Composite Junior College run by Maratha Mandal situated in Belaum area, This Junior college has been running Commerce and Accounts Class since 1973. But so far salary grants have not been released by the Goverument is it whether on the pretext that it is situated in disputed border area. Is it not an injustice done to the Marathi people?

Then, I would like to say something about the Department of Public Instruction. In this department lot of corruption and nepotism are being carried on by the officers working there.

Sir I would like to quote one instance of political injustice and nepotism. More than 75% of the population of Khanapur Taluk comprises of Marathi speaking people and 215 primary schools are marathi primary schools. Only 49 are Kannade schools and 17 are Urdu schools. The people of Khanapur taluk, where 80% of the people are marathi speaking people, have repeatedly requested the Hon'ble Minister for Education through their MLA to post one marathi trained AEO. I am very sorry that the Hon'ble Education Minister has posted his own caste man. Is it not nepotism and communalism? This type of nepotism and communalism must be discouraged and decried in a democratic set-up.

SRI G. B. SHANKARA RAO.—I do not know which of our AEO knows Marathi and Kannada. We appoint not on caste basis. May be some people belong to my caste or his caste or any other caste. I am not concerned with postings. The power of transfer is delegated to certain officers. The hon.member is unncessarily making wild allegations against me.

SRI N. B. SIRDESAI.--How can I accept the arguments of the Hon.Minister? You send people who do not know marathi. If the Government cannot understand the genuine needs of the people, students, educationists, professors, lecturers and teachers, then the Government shall have to reconsider the question of reshuffling the portfolios of the concerned Ministers.

Regarding Primary Schools, especially in Khanapur Taluk I may say that there are 256 villages. But the Government has failed to sanction primary schools in all the villages of Khanapur taluk and they have not provided proper building to the primary schools. Sufficient number of teachers are not being appointed in Marathi and Urdu schools. The student and teacher ratio of 10 : 1 must be adopted

by this Government to spread education in villages of Malnad and Forest covered Talukas.

Sir, libraries also are not provided by this Government to the full-fledged primary schools in my taluka and also mass primary schools of our Taluka medical examination of students is never conducted. The Medical examination has been conducted, as mentioned in the annual report, only in Tumkur and Kolar Districts. I have no grudge against other districts. Why you have not conducted in Belgaum district, especially in my taluka.

SRI G.B. SHANKARA RAO.—This is a rural health project taken up in the State. They have completed one district. They have now taken it in Tumkur district. Don't think that we are partial to your district or taluk. There are other taluks in Belgaum district other than Khanapur taluk.

SRI N. B. SIRDESAI.—I wish to bring to the notice of the Government that in Marathi and Urdu schools Kannada maps and charts are being supplied. Students cannot read and write Kannada. What is the use of supplying these maps to them ? I am very sorry again to bring to the notice of the Hon'ble Education Minister that, since a long time the death-*cum*-gratuity arrears are not being paid to the retired teachers of the ex-aided schools especially in Khanapur taluk. They approached the Assembly through petitions. I have presented petitions to the assembly and it came up before the petitions Committee. The Committee referred them back to the Government with some instructions and it has replied that the matter has been referred to the Governor under Article 392 for orders. I want to know how long will it take to finalise this matter ? What is the use of sanctioning this after their death.

Under Rule 32 of KCSR the officers of the lower grade in the Education Department are permitted to hold the charge of higher grade posts. But they are not paid salaries of higher grade. Though they are discharging the duties of higher grade, at least this should be discouraged or they should be paid higher salaries.

There is another departmental negligence at Nandgad town in Khanapur taluk. One Education Society, *viz.* Nandgad Rural Education Society is functioning. That society has never maintained the accounts since its inception I have brought it to the notice of the Government several times through L. A. questions But vague answers have been given, and accounts are not audited by the Goverment up till now such a things are going on in the Department and it is connived by the department,

I would like to stress that Government should open more certificate courses, and more technical institutions in rural areas of Malnad and also short-term trade courses should be started because the rural boys are not getting seats in Industrial Training Institute and Polytechnic. The Government should at least increase the intake of ITI in Malnad areas. In Belgaum only one principal is holding the charge of both ITI and the Polytechnic. It is not advisable to appoint one man for both the institutions.

Coming to the Department of Archeology, I would like to draw the attention of the Government to the fact that there is an old temple in Khanapur taluk at Halshi which was built during the period of Kadamba and there is an inscription in Davanagari Script But that has not been explored by your department, because it is situated in the disputed border area. Only two tombs you have explored. But you have not explored the tomb of Shahaji Maharaj. I do not know why the Government is not looking after that tomb. I appeal to Government to take the tomb under Government management.

Then coming to the Youth Services Department, this Department has published a book called 'Youth Karnataka' in Kannada only. What is the use of it in Khanapur taluk where the people do not know Kannada ? Why don't you publish it in all the local languages ?

This Government has not given assistance to the educational institutions in Malnad areas, and especially in Khanapur taluk. You are not releasing any amount for constructing School buildings, playgrounds, *etc*. You are doing injustice in this respect. You have declared in your broad policy to construct stadia in each taluk. What about Khanapur taluk in Belgaum district. I thank the Chair for giving me so much time to speak on this demand.

೬-೦೦ ಪಿ.ಎಂ.

ಶ್ರೀ ಎಸ್.ಎಸ್. ಆರಕೇರಿ.— ಸ್ವಾಮಿ ನಾನು ಬೆಳಗ್ಗೆಯಿಂದ ಇಲ್ಲೇ ಕುಳಿತುಕೊಂಡಿದ್ದೇನೆ. ನನ್ನ ಹೆಸರನ್ನು ಕರೆಯಲಿಲ್ಲ. ನನ್ನ ಹೆಸರು ಯಾವಾಗ ಬರುತ್ತದೋ ಗೊತ್ತಿಲ್ಲ. ಕೆಲವು ಸದಸ್ಯರು ೧ ಗಂಟೆ, ಅರ್ಧ ಗಂಟೆ, ಹೀಗೆಲ್ಲಾ ಮಾತನಾಡಿದ್ದಾರೆ. ಆದ್ದರಿಂದ ನನಗೂ ಸ್ವಲ್ಪ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.— ನಾನು ನಿಮ್ಮ ಹೆಸರನ್ನು ಕರೆದೆ. ನೀವು ನಿಮ್ಮ ಸೀಟಿನಲ್ಲಿರಲಿಲ್ಲ.

ಶ್ರೀ ಮೈಕೇಲ್ ಫರ್ನಾಂಡೀಸ್.—ಜನತಾ ಪಕ್ಷದ ಸದಸ್ಯರಿಗೆ ಅವಕಾಶ ಕೊಟ್ಟಿಲ್ಲ, ತಾವು ಇದನ್ನು ಸ್ವಲ್ಪ ಗಮನಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.— ಇವತ್ತು ೭ ಗಂಟೆಯವರೆಗೂ ಕುಳಿತು ಕೊಂಡು ಮಾನ್ಯ ಸದಸ್ಯರು ಯಾರ್ಯಾರು ಮಾತನಾಡುವವರು ಇದ್ದಾರೆ ಅವರೆಲ್ಲರೂ ಮಾತನಾಡಲಿ. ನಾಳೆ ಮಾನ್ಯ ಮಂತ್ರಿಗಳು ಉತ್ತರ ಕೊಡಬಹುದು.

ಅಧ್ಯಕ್ಷರು.— ಇವತ್ತು ೭ ಗಂಟೆಯವರೆಗೂ ಕುಳಿತುಕೊಳ್ಳೋಣ. ಪ್ರತಿಯೊಬ್ಬ ಸದಸ್ಯರು ಐದೈದು ನಿಮಿಷ ಮಾತನಾಡಿ, ಇವತ್ತು ಈ ಚರ್ಚೆಯನ್ನು ಕಂಪ್ಲೀಟ್ ಆಗಬೇಕು. ನಾಳೆ ಮಂತ್ರಿಗಳ ಉತ್ತರ ಆಗಬೇಕು.

ಶ್ರೀ ಎಸ್.ಎಸ್. ಅರಕೇರಿ (ಬಳ್ಳೊಳ್ಳಿ).— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರು ಈ ಸಭೆಯಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ಒಂದೆರಡು ವಿಚಾರ ಗಳನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯರಾದ ಮಳ್ಳೂರ್ ಆನಂದರಾವ್ ಅವರು ಬಹಳ ಆಳವಾದ ವಿಚಾರಗಳನ್ನು ಹೇಳಿದ್ದಾರೆ. ಅವರು ಹೇಳಿದಂತಹ ವಿಚಾರಗಳನ್ನು ನಾನು ನಿಜವಾಗಿಯೂ ೧೦೦ ಕ್ಕೆ ೯೦ ವಿಚಾರಗಳನ್ನು ಒಪ್ಪುತ್ತೇನೆ. ಶಿಕ್ಷಣ ಕ್ಷೇತ್ರದಲ್ಲಿ ಯಾವ ರೀತಿಯಿಂದ ಒಂದು ಸಮಗ್ರವಾದ ಬದಲಾವಣೆಯಾಗಬೇಕು ಮತ್ತು ಅದರಿಂದ ಸಾಮಾಜಿಕ ಕ್ರಾಂತಿಯನ್ನು ತರಬೇಕು ಎನ್ನುವ ವಿಚಾರಗಳ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಈ ರಾಜ್ಯದಲ್ಲಿ ಶಿಕ್ಷಣದ ಬಗ್ಗೆ ಸರ್ಕಾರದವರು ಏನು ಗಮನ ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ. ನಮಗೆ ಸ್ವಾತಂತ್ರ್ಯ ಬಂದು ೩೦ ವರ್ಷಗಳು ಕಳೆದರೂ ಕೂಡ ಪ್ರಾಥಮಿಕ ಶಿಕ್ಷಣವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಖಡ್ಡಾಯವಾಗಿ ಜಾರಿಗೆ ತಂದಿಲ್ಲ. ೩೦ ವರ್ಷಗಳಿಂದಲೂ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಜಾರಿಗೆ ತರಬೇಕು ಎಂದು ಹೇಳುತ್ತಾರೆ. ಆದರೆ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿಲ್ಲ. ಇದನ್ನು ಜಾರಿಗೆ ತರುವುದಕ್ಕೆ ಏನು ತೊಂದರೆ ಇದೆ? ರಾಜ್ಯಾಂಗ ನಿರ್ದೇಶನ ಇದೆ. ಇದರ ಪ್ರಕಾರ ಈ ೩೦ ವರ್ಷಗಳಲ್ಲಿ ಶಿಕ್ಷಣ ಇಲಾಖೆಯಾಗಲೀ, ಶಿಕ್ಷಣ ಖಾತೆಯಾಗಲೀ ಇದರ ಬಗ್ಗೆ ಏನು ಪ್ರಯತ್ನ ನಡೆಸಿದೆ ಅದು ಸಫಲವಾಗಿಲ್ಲ. ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇವೊತ್ತು ಗ್ರಾಮಾಂತರ ಪ್ರದೇಶ ಗಳಲ್ಲಿ ಇನ್ನೂ ೧೦೦ ಕ್ಕೆ ೮೦ ಮಕ್ಕಳು ಶಾಲೆಗೆ ಹೋಗುತ್ತಿಲ್ಲ. ೭ ವರ್ಷದಿಂದ ೧೩ ವರ್ಷಗಳ ವಯಸ್ಸಿನಲ್ಲಿರುವ ಮಕ್ಕಳೂ ಇವೊತ್ತು ಶಾಲೆಗೆ ಹೋಗುತ್ತಿಲ್ಲ. ಅದಕ್ಕಾಗಿ ನಾನು ಈ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಸರ್ಕಾರದವರು ಇದರ ಬಗ್ಗೆ ಯಾವ ಯಾವ ವಿಶೇಷವಾದ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ? ಮಕ್ಕಳಿಗೆ ಪುಸ್ತಕಗಳನ್ನು ಹಂಚುತ್ತಿದ್ದಾರೆ, ಸ್ಲೇಟು ಗಳನ್ನು ಹಂಚುತ್ತಿದ್ದಾರೆ ಬಟ್ಟೆಗಳನ್ನು ಹಂಚುತ್ತಿದ್ದಾರೆ. ಯಾವರೀತಿ ಮಾಡಿದರೂ ಕೂಡ ಇದು ಪರಿಣಾಮಕಾರಿಯಾಗಿ ಕೆಲಸ ಆಗಿಲ್ಲ. ಚಿಕ್ಕ ಮಕ್ಕಳ ತಂದೆತಾಯಿಗಳಿಗೆ ಪಾಲಕರಿಗೆ ಸರಿಯಾದಂತಹ ಒಂದು ತಿಳುವಳಿಕೆ ಬಂದಿಲ್ಲ. ಆದ್ದರಿಂದ ಇವರ ತಿಳುವಳಿಕೆಯ ಸಲುವಾಗಿ ಕಡ್ಡಾಯ ಶಿಕ್ಷಣವನ್ನು ಕೊಡುವ ಸಲುವಾಗಿ ಒಂದು ವಿಶೇಷವಾದ ಪ್ರೋಗ್ರಾಮನ್ನು ಸರ್ಕಾರದವರು ಹಾಕಿಕೊಳ್ಳಬೇಕು. ಈಗ ಸರ್ಕಾರದವರು ಈ ಕಡ್ಡಾಯ ಶಿಕ್ಷಣದ ಬಗ್ಗೆ ಏನೊಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಅದು ಗ್ರಾಮಾಂತರ ಪ್ರದೇಶಗಳಿಗೆ ಮುಟ್ಟುತ್ತಾ ಇಲ್ಲ. ಜನಗಳಿಗೆ ಮನದಟ್ಟು ಆಗುತ್ತಿಲ್ಲ. ಆದ್ದರಿಂದ ಖಡ್ಡಾಯ ಶಿಕ್ಷಣದ ಬಗ್ಗೆ ಗ್ರಾಮಾಂತರ ಪ್ರದೇಶದ ಜನಗಳಿಗೆ ತಿಳುವಳಿಕೆ ಬರುವಂತೆ ಮಾಡಬೇಕು.

ಶ್ರೀ ಜಿ.ಬಿ. ಶಂಕರರಾವ್.—ಶಿಕ್ಷಣವನ್ನು ತಂದೆ ತಾಯಿಗಳಿಗೆ ಕೊಡಬೇಕೋ ಅಥವಾ ಮಕ್ಕಳಿಗೆ ಕೊಡಬೇಕೋ?

ಶ್ರೀ ಎಸ್.ಎಸ್. ಅರಕೇರಿ.— ಮಕ್ಕಳನ್ನು ಅವರು ಸರಿಯಾಗಿ ಶಾಲೆಗೆ ಖಡ್ಡಾಯವಾಗಿ ಕಳುಹಿ ಸುವಂತೆ ಮಾಡಬೇಕು. ಈ ನಿಯಮವನ್ನು ತಂದೆ ತಾಯಿಗಳು, ಪಾಲಕರು ಅನುಸರಿಸುವಂತೆ ಮಾಡಬೇಕು. ಮತ್ತು ತಿಳವಳಿಕೆಯನ್ನು ಕೊಡಬೇಕು. ಈ ಪ್ರಯತ್ನದಲ್ಲಿ ವಿದ್ಯಾ ಇಲಾಖೆ ವಿಫಲವಾಗಿದೆ ಎಂದು ಹೇಳಬಹುದು.

ಈವೊತ್ತಿನ ದಿವಸ ಉದಾಹರಣೆಗೆ ಹೇಳುವುದಾದರೆ ಹಳ್ಳಿಗಳಲ್ಲಿ ಸುಮಾರು ೭೫-೮೦ ಪರ್ಸೆಂಟ್ ಅಷ್ಟು ಮಕ್ಕಳುಗಳು ಸ್ಕೂಲುಗಳಿಗೇ ಹೋಗುತ್ತಾ ಇಲ್ಲ. ಆದುದರಿಂದ ನಾನು ಹೇಳುವುದೇನೆಂದರೆ ಈ ಬಗ್ಗೆ ತಂದೆತಾಯಿಗಳಿಗೆ ಸರಿಯಾದಂಥಾ ತಿಳುವಳಿಕೆ ಕೊಟ್ಟು ಆ ಮಕ್ಕಳನ್ನು ಶಾಲೆಗಳಿಗೆ ಕಳುಹಿಸು ವಂತೆ ಒಂದು ವ್ಯವಸ್ಥೆ ಮಾಡಬೇಕು ಹಾಗೂ ಒತ್ತಾಯಪಡಿಸಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಈ ಬಗ್ಗೆ ಸರಿಯಾಗಿ ಪ್ರಚಾರ ಮಾಡಿ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕು ಎಂದು ಸಲಹೆ ಮಾಡುತ್ತೇನೆ. ಈ ಸಂಬಂಧದಲ್ಲಿ ಹೇಳಬೇಕಾದರೆ ಬುದ್ಧಿ ಕಲಿಸುವುದು ಮತ್ತು ವಿದ್ಯೆಯನ್ನು ಹೇಳಿ ಕೊಡುವುದೂ ಸರ್ಕಾರದ ಒಂದು ಜವಾಬ್ದಾರಿಯಾಗಿದೆ ಅದರಲ್ಲೂ ಶಿಕ್ಷಣ ಖಾತೆಯು ಸಂಪೂರ್ಣವಾದ ಜವಾಬ್ದಾರಿಯನ್ನು ಹೊತ್ತಿದೆ ಎನ್ನುವ ಮಾತನ್ನು ಹೇಳುತ್ತೇನೆ. ೧೯೭೧ ನೇ ಇಸವಿ ಜನಗಣತಿ ಪ್ರಕಾರ

ಲಿಟ್ರಸಿ ಅಂಕೀ ಸಂಖ್ಯೆಗಳನ್ನು ತೆಗೆದುಕೊಂಡರೆ ಕೇವಲ ೩೧ ಪರ್ಸೆಂಟ್ ಮಾತ್ರ ಇದೆ. ಹೀಗಾದರೆ ಸಾಕ್ಷರತೆ ಹೆಚ್ಚಿಲ್ಲ ಇನ್ನೂ ಬಹಳ ಕಾಲ ಬೇಕಾಗುತ್ತದೆ. ಇನ್ನು ಹರಿಜನರಗತಿ ಕೇಳಬೇಕಾಗಿಲ್ಲ. ೧೦೦ಕ್ಕೆ ೯೫ ರಷ್ಟು ಹರಿಜನ ಮಕ್ಕಳು ಶಾಲೆಗಳಿಗೆ ಹೋಗುತ್ತಾ ಇಲ್ಲ. ಅವರ ಬಗ್ಗೆ ವಿಶೇಷವಾದ ಒಂದು ಯೋಜನೆ ಹಾಕಿಕೊಂಡಿಲ್ಲಾ ಎಂದು ಹೇಳಬೇಕಾಗುತ್ತದೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟಮೆಂಟಿನ ವರಾಗಲಿ ಅಥವಾ ಶಿಕ್ಷಣ ಖಾತೆಯಲ್ಲಿರತಕ್ಕಂಥಾ ಎ ಇ ಒ ಅಥವಾ ಇನ್‌ಸ್ಪೆಕ್ಟರಾಗಲಿ ಅವರು ಸಾಕಷ್ಟು ಕೆಲಸ ಮಾಡುತ್ತಿದ್ದಾರೆಯೆ? ಇಲ್ಲಿ ಗ್ರಾಮಾಂತರ ಪ್ರದೇಶದಲ್ಲಿರುವ ಹರಿಜನ ಗಿರಿಜನರಾಗಲಿ ಅಥವಾ ಲಂಬಾಣಿಗಳಾಗಲಿ ಅವರ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದಾರೆಯೋ ಮತ್ತು ಅವರಿಗೆ ಏನೇನು ಸೌಲಭ್ಯಗಳು ಸರ್ಕಾರದವರು ಕೊಟ್ಟಿದ್ದಾರೆ ಅದು ಅವರಿಗೆ ಸರಿಯಾಗಿ ಮುಟ್ಟಿದೆಯೋ ಈ ಬಗ್ಗೆ ಏನಾದರೂ ಸರಿಯಾದ ಕ್ರಮ ತೆಗೆದುಕೊಂಡಿದ್ದಾರೆಯೋ ಅನ್ನುವುದನ್ನು ನೋಡಿದರೆ ನನಗೆ ತಿಳಿದ ಹಾಗೆ ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೂ ಮತ್ತು ಎಜುಕೇಷನ್ ಡಿಪಾರ್ಟ್‌ಮೆಂಟಿಗೂ ಒಂದಕ್ಕೊಂದು ಸರಿಯಾಗಿ ಕೋಆರ್ಡಿನೇಷನ್ನಿನಿಂದ ಕೆಲಸ ಮಾಡುತ್ತಾ ಇಲ್ಲ ಅಂತ ಕಾಣುತ್ತಾ ಇದೆ. ಮತ್ತು ಬಡಜನರ ಮಕ್ಕಳಿಗೆ ಶಿಕ್ಷಣ ಸೌಲಭ್ಯಗಳು ಮುಟ್ಟುತ್ತಿಲ್ಲ ಇವೆರಡೂ ಇಲಾಖೆಗಳು ಒಂದಕ್ಕೊಂದು ಹೊಂದಾಣಿಕೆಯಿಂದ ಕೆಲಸ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಕಡ್ಡಾಯ ಪ್ರಾಥಮಿಕ ಶಿಕ್ಷಣದ ವಿಚಾರ ತೆಗೆದುಕೊಂಡರೆ ರಾಜ್ಯಾಂಗದ ಪ್ರಕಾರ (Directive Principles of State Policy) ನಿರ್ದೇಶನ ಇದ್ದರೂ ಕೂಡ ಸರ್ಕಾರ ಉದಾಸೀನ ಮಾಡುತ್ತಾ ಇದೆ ಎಂದು ಹೇಳಬೇಕಾಗಿದೆ Is it not a fraud against the Children of harijans and the Government has committed a fraud on the constintution of this country ಎನ್ನುವುದು ಬರುತ್ತದೆ. Government has failed to Implement Compulsary Education. ಈಗ ಡೈರೆಕ್ಟೀವ್ ಪ್ರಿನ್ಸಿಪಲ್ ಆಫ್ ದಿ ಸ್ಟೇಟ್ ಪಾಲಿಸಿ ಪ್ರಕಾರ ಇದರ ಒಂದು ಸಂಪೂರ್ಣ ಜವಾಬ್ದಾರಿ ರಾಜ್ಯ ಸರ್ಕಾರದ ಮೇಲೆ ಬಿದ್ದಿದೆ. ಇದರ ಬಗೆ ಸರಿಯಾದ ಯೋಜನೆಗಳನ್ನು ಹಾಕಿಕೊಂಡು ಸರಿಯಾಗಿ ಕೆಲಸ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಜಿ.ಬಿ. ಶಂಕರರಾವ್.—ಮಾನ್ಯ ಸದಸ್ಯರಿಗೆ ಈ ಬಗ್ಗೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ಸರ್ಕಾರಕ್ಕೂ ಇದೆ, ಶಿಕ್ಷಣ ಹಂತದಲ್ಲಿ ಖಡ್ಡಾಯವಾಗಿ ಮಕ್ಕಳು ಶಾಲೆಗೆ ಬರಲೇ ಬೇಕು ಹಾಗೆ ಬರದೇ ಹೋದರೆ ಏನು ಮಾಡಬೇಕು ಅನ್ನುವುದಕ್ಕೆ ಕಾನೂನು ಇದೆ. ಆದರೆ ಆ ಕಾನೂನು ತಂದರೆ ಅದರ ಮುಂದಿನ ಪರಿಣಾಮ ಏನಾಗುತ್ತದೆ ಅನ್ನುವುದನ್ನು ಯೋಚನೆ ಮಾಡಬೇಕು. ಹಾಗೆ ಮಕ್ಕಳನ್ನು ಶಾಲೆಗೆ ಕಳುಹಿಸದೇ ಹೋದರೆ ತಂದೆತಾಯಿಗಳು ಜೈಲಿಗೆ ಹೋಗಬೇಕಾಗುತ್ತದೆ, ಈ ಕಾನೂನನ್ನು ಜಾರಿಗೆ ತಂದರೆ ಅದರ ಪರಿಣಾಮಕ್ಕೆ ನೀವು ಸ್ಟೆಅಡ್ಡಿ ಬರುವುದಿಲ್ಲ ಎಂದರೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎಸ್. ಅರಕೇರಿ.—ಮಾನ್ಯ ಶಿಕ್ಷಣ ಸಚಿವರು ಹೇಳಿದುದದಕ್ಕೆ ಸಂತೋಷ ಪಡುತ್ತೇನೆ. ಆದರೆ ತಂದೆತಾಯಿಗಳು ಜೈಲಿಗೆ ಹೋಗಬೇಕಾಗುತ್ತದೆ ಎಂದು ಏನು ಹೇಳಿದ್ದಾರೆ ಈ ಬಗ್ಗೆ ಹೇಳಬೇಕಾದರೆ ಆ ತಂದೆತಾಯಿಗಳಿಗೆ ಈ ವಿಚಾರದಲ್ಲಿ ಒಂದು ರೇಡಿಯೋ ಮುಖಾಂತರವಾಗಲಿ ಯಾವುದಾದರೂ ಸಾಧನದ (Medium) ಮುಖಾಂತರವಾಗಲಿ ಪರಿಚಯ ಮಾಡಿಕೊಟ್ಟು ಸರಿಯಾದ ತಿಳುವಳಿಕೆ ಕೊಟ್ಟರೆ ಅವರು ಅರಿತುಕೊಳ್ಳುವುದಿಲ್ಲವೇ ? ಹಳ್ಳಿ ಹಳ್ಳಿಗಳಲ್ಲಿ ಇದರ ಬಗ್ಗೆ ಸರಿಯಾಗಿ ಪ್ರಚಾರವಾಗಬೇಕು. ತಮಗೆ ಒಂದು ಉದಾಹರಣೆ ಹೇಳಬೇಕಾದರೆ ಈವೊತ್ತು ಫ್ಯಾಮಿಲಿ ಪ್ಲಾನಿಂಗ್ ಏನು ಇದೆ ಅದು ಹಳ್ಳಿ ಹಳ್ಳಿಯಲ್ಲಿ ಪ್ರಚಾರವಾಗಿಲ್ಲವೇ ? ಆರೀತಿ ನಿಮ್ಮ ಇಲಾಖೆಯವರೂ ಕೂಡ ಮಾಡಬೇಕು. ಹಾಗೆ ಮಾಡಿದರೆ ಮಕ್ಕಳ ತಂದೆತಾಯಿಗಳು ತಪ್ಪು ಏತಕ್ಕೆ ತಿಳಿದುಕೊಳ್ಳುತ್ತಾರೆ. ಈ ಬಗ್ಗೆ ನಿಮ್ಮಲ್ಲಿ ಸರಿಯಾದ ಕಾರ್ಯಕ್ರಮ ಇಲ್ಲ ಎಂದು ನನಗೆ ಅನಿಸುತ್ತದೆ.

ಇನ್ನು ಎಜುಕೇಷನ್ ಇಲಾಖೆಯ ಬಗ್ಗೆ ಹೇಳುವುದಾದರೆ ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಮತ್ತು ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಸರ್ಕಾರೀ ಹೈಸ್ಕೂಲ್‌ಗಳನ್ನು ಜಾಸ್ತಿ ತೆರೆದಿಲ್ಲಾ ಎಂದು ಹೇಳುತ್ತೇನೆ. ಅಲ್ಲಿ ಹೆಚ್ಚಿಗೆ ಇರುವುದೆಲ್ಲಾ ಏಡೆಡ್ ಇನ್ಸ್ಟಿಟ್ಯೂಷನ್ಸ್. ಈ ಬಗ್ಗೆ ನಾನು ವಿಷಾದ ಪಡುತ್ತೇನೆ. ನಮ್ಮ ಭಾಗದಲ್ಲಿ ಪ್ರೈಮರಿ ಸ್ಕೂಲ್ಸ್‌ಗಳು, ಕಾಲೇಜುಗಳು ಏನು ಇವೆ ಅವೆಲ್ಲಾ ಖಾಸಗಿಯವರೇ ಹೆಚ್ಚು ನಡೆಸುತ್ತಿದ್ದಾರೆ, ಸರ್ಕಾರೀ ಶಾಲೆಗಳು ಮತ್ತು ಕಾಲೇಜುಗಳು ಹೆಚ್ಚಾಗಿ ಇಲ್ಲಾ.

ಮಾನ್ಯ ಮಳ್ಳೂರು ಆನಂದರಾಯರು ಹೇಳಿದ ಹಾಗೆ ಲಂಚ ಹೆಚ್ಚಾಗಿರುವುದರಿಂದಲೇನೋ, ಡಿಪಾರ್ಟ್‌ಮೆಂಟ್‌ನವರನ್ನು ಅನುಸರಿಸಿಕೊಂಡು ಅದಕ್ಕನುಗುಣವಾಗಿ ಅವರುಗಳು ನಡೆಸಿಕೊಂಡು ಹೋಗುತ್ತಿದ್ದಾರೆ. ಅಲ್ಲಿ ಪ್ರತಿಯೊಂದು ಇನ್ಸ್ಟಿಟ್ಯೂಷನ್‌ನಲ್ಲೂ ಕೂಡ ಸಾವಿರಾರು ಶಿಕ್ಷಕರು ಕೆಲಸಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ತಮಗೆ ಒಂದು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಅದೇನೆಂದರೆ ನಮ್ಮ ಒಂದು ಸರ್ಕಾರೀ ಶಾಲೆಗಳ ಬಗ್ಗೆ ಹೇಳುವುದಾದರೆ ನಮ್ಮ ಸರ್ಕಾರೀ ಶಾಲೆಯಲ್ಲಿ $1\frac{1}{2}$ ಲಕ್ಷ ಉಪಾಧ್ಯಾಯರು ಇದ್ದಾರೆ, ೩೬ ಸಾವಿರ ಪ್ರೈಮರಿ ಶಾಲೆಗಳು ಇವೆ, ಇದರಲ್ಲಿ ೮೦ ಪರ್ಸೆಂಟ್ ಅಷ್ಟು ಶಿಕ್ಷಕರು ಟ್ರೈನಿಂಗ್ ಆಗಿದ್ದಾರೆ, ಇನ್ನು ೨೦ ಪರ್ಸೆಂಟ್ ಅಷ್ಟು ಶಿಕ್ಷಕರು ಟ್ರೈನಿಂಗ್ ಆಗದೇ ಇರುವವರು ಇದ್ದಾರೆ. ಇನ್ನು ಕಾಲೇಜುಗಳ ಒಂದು ಅಂಕಿಸಂಖ್ಯೆಗಳನ್ನು ತೆಗೆದುಕೊಂಡರೆ ೨-೩-೪ ಲಕ್ಷಕ್ಕೆ ಹೋಗುತ್ತದೆ. ಒಂದು ಪ್ರೈಮರಿ ಶಾಲೆಯಲ್ಲಾಗಲಿ ಅಥವಾ ಕಾಲೇಜಿನ ಮಟ್ಟದಲ್ಲಾಗಲಿ ರೂಲ್ಸ್‌ನಂತೆ ಸಂವಿಧಾನದ ಪ್ರಕಾರ ನಮಗೆ ೧೮ ಪರ್ಸೆಂಟ್ ಅಷ್ಟು ಅಪಾಯಿಂಟ್‌ಮೆಂಟಾಗಿದೆಯೋ ಅನ್ನುವ ಲೆಕ್ಕಾಚಾರ ತೆಗೆದುಕೊಂಡರೆ ೩೦ ವರ್ಷದ ಲೆಕ್ಕಾಚಾರ ತೆಗೆದುಕೊಂಡರೂ ಕೂಡ ನಮಗೆ ಏನೂ ಸಿಕ್ಕಿಲ್ಲಾ. ಈ ನೌಕರಿ ಬಗ್ಗೆ ಅನ್ಯಾಯ ಮತ್ತು ಅತ್ಯಾಚಾರ ನಡೆದಿದೆ ಎನ್ನುವುದನ್ನು ಮತ್ತು ನಮಗೆ ಬರಬೇಕಾದ್ದನ್ನು ಶೇಕಡವಾರು ೧೮ ಕೊಟ್ಟಿಲ್ಲ ಎನ್ನುವುದರ ಬಗ್ಗೆ ನಾನು ನೇರವಾಗಿ ಆಪಾದನೆ ಮಾಡಬೇಕಾಗಿದೆ. ಈ ಬಗ್ಗೆ ತಮಗೆ ಒಂದು ಉದಾಹರಣೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಡೈರಕ್ಟರ್ ಆಫ್ ಕೊಲಿಜಿಯೇಟ್‌ನಲ್ಲಿ ನಡೆದಿರುವ ಕೆಲವು ಅಂಕಿಅಂಶ ಮಾತ್ರ ಕೊಡುತ್ತೇನೆ. ಈಗ ಈ ಒಂದು ಸಂಸ್ಥೆಗೆ ಸಂಬಂಧಪಟ್ಟಂತೆ ಉದಾಹರಣೆ ತೆಗೆದುಕೊಳ್ಳುತ್ತೇನೆ. ಡೈರಕ್ಟರ್ ಆಫ್ ಕೊಲಿಜಿಯೇಟ್‌ನಲ್ಲಿ ಟೋಟಲ್ ನಂಬರ್ ಆಫ್ ಪೋಸ್ಟ್ಸ್ ಪ್ರೊಫೆಸರ್ಸ್ ಇದರಲ್ಲಿ ೭೮ ಜನರಲ್, ಒಂದೇ ಒಂದು ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಕೊಟ್ಟಿದ್ದಾರೆ. ರೀಡರ್ಸ್‌ನಲ್ಲಿ ತೆಗೆದುಕೊಂಡರೆ ಟೋಟಲ್ ನಂಬರ್ ಆಫ್ ಪೋಸ್ಟ್ಸ್ ೩೫೭ರಲ್ಲಿ ಜನರಲ್ ೬೯ ಇದರಲ್ಲಿ ೧೨ ಜನಕ್ಕೆ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಕೊಟ್ಟಿದ್ದಾರೆ. ಲೆಕ್ಚರರ್ಸ್‌ನಲ್ಲಿ ತೆಗೆದುಕೊಂಡರೆ ಟೋಟಲ್ ನಂಬರ್ ಆಫ್ ಪೋಸ್ಟ್ಸ್ ೧೨೧೧ರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಕೇವಲ ೬೯ ಮಾತ್ರ. ನ್ಯಾಯವಾಗಿ ಇರಬೇಕಾದುದು ೨೧೪. ಇದರಲ್ಲಿ ಪರ್ಸೆಂಟೇಜ್ ಲೆಕ್ಕಾಚಾರ ತೆಗೆದುಕೊಂಡರೆ ಪ್ರೊಫೆಸರ್ಸ್ ೧.೨೬ ಆಗುತ್ತದೆ, ರೀಡರ್ಸ್ ೩.೫೬ ಆಗುತ್ತದೆ ಲೆಕ್ಚರರ್ಸ್ ಕೇವಲ ೫ ಪರ್ಸೆಂಟ್ ಆಗುತ್ತದೆ. ಇದರಲ್ಲಿ ಆವರೇಜ್ ತೆಗೆದುಕೊಂಡರೆ ಡೈರಕ್ಟರ್ ಆಫ್ ಕೊಲಿಜಿಯೇಟ್‌ನಲ್ಲಿ ಕೇವಲ ೨ ಪರ್ಸೆಂಟ್ ಮಾತ್ರ ಹರಿಜನಗಿರಿಜನರಿಗೆ ಕೊಟ್ಟಿದ್ದಾರೆ ೧೮ ಪರ್ಸೆಂಟ್ ಪ್ರಕಾರ ತುಂಬ ಬೇಕಾದರೆ ಯಾವಾಗ ತುಂಬುತ್ತಾರೆ ಆದುದರಿಂದ ನಾನು ಶಿಕ್ಷಣ ಸಚಿವರ ಗಮನಕ್ಕೆ ತರುವುದೇನೆಂದರೆ ಈ ಬ್ಯಾಕ್‌ಲಾಗ್ (Backl g) ಸಲುವಾಗಿ ಒಂದು ಸ್ಪೆಷಲ್ ರೆಕ್ರೂಟ್‌ಮೆಂಟ್ ಕಮಿಟಿಯನ್ನಾದರೂ ಮಾಡಬೇಕು ಎಂದು ಹೇಳುತ್ತೇನೆ. ಅಲ್ಲದೆ ಈ ಬಗ್ಗೆ ಒಂದು ತಿದ್ದುಪಡಿಯನ್ನಾದರೂ ತರಲೇಬೇಕು ಎಂದು ನನಗೆ ಅನಿಸುತ್ತದೆ. ಹಾಗೆ ಮಾಡದೇ ಹೋದರೆ ಶತಮಾನಕಾಲವಾದರೂ ಕೂಡ ಈ ೧೮ ಪರ್ಸೆಂಟನ್ನು ಈ ಶಿಕ್ಷಣ ಖಾತೆಯಲ್ಲಿ ತುಂಬುವುದಕ್ಕೆ ಸಾಧ್ಯವಿಲ್ಲಾ. ಇದರ ಬಗ್ಗೆ ಇನ್ನೂ ಎರಡು ನಿದರ್ಶನಗಳನ್ನಾದರೂ ಬೇಕಾದರೆ ಹೇಳುತ್ತೇನೆ. ಈ ಬ್ಯಾಕ್ ಲಾಗ್ ಅನ್ನು ಯಾವ ರೀತಿಯಾಗಿ ತುಂಬ ಬೇಕಾಗುತ್ತದೆ ಅನ್ನುವುದರ ಬಗ್ಗೆ ೧೮ ಪರ್ಸೆಂಟ್ ಅನ್ನು ತುಂಬ ಬೇಕಾದರೆ I would like to tell the remedies also.

SRI M.C. NANAIAH.—Speaker Sir, It is already 6.15 p.m. Let Sri S.S. Arakeri speak tomorrow. We have no objection. From the last three days we have been sitting continuously from the morning 7-00 A.M. to 8-00 P.M. or so, and we are tired too much. The patience of everyone including officers and legislators is lost. If Sri Arakeri speaks we should be in a position to hear him patiently. Please adjourn the House for today and let us meet tomorrow at

9-00 A.M.

ಅಧ್ಯಕ್ಷರು.—ಮಾನ್ಯ ಅರಕೇರಿಯವರೊಬ್ಬರು ಭಾಷಣ ಮುಗಿಸಲಿ.

SRI S.S. ARAKERI.—I suggest the Government a t he Ca dand Recruitment Rules may be amend to exclusively recruit the Scheduled

Castes and Scheduled Tribes in vacancies or shortfall in each cadre of various Departments including Collegiate Education Department and also to promote to the higher cadres from the so recruited candidates or by promoting from the existing Candidates in service. As a remedy, I would like to suggest :

1. To amend the C & R Rules of all the Departments exclusively to recruit only from the Scheduled Castes/Scheduled Tribes till their percentage is achieved in the various posts of all Departments.
2. To amend the C & R Rules to promote to the higher cadres wherever shortfall is there considering a minimum service of **ONE YEAR** in each cadre.
3. The C & R Rules may be amended to recruit exclusively from the Scheduled Castes and Scheduled Tribes in vacancies or shortfall in each cadre of various Departments and also to promote to the higher cadres from the inservice Candidates or from direct recruitment.
4. Goverament may appoint a separate Recruitment Committee in the Department of Education and absorb as many Scheduled Caste/Scheduled Tribe candidates to fill up 18% of the existing vacancies in the various categories of posts in the Scheduled Caste/Scheduled Tribe group. since their situation had not been improved from last 33 years of independence.

ಇಲ್ಲಿ ನಾನು ಇದನ್ನೆಲ್ಲಾ ಹೇಳತಕ್ಕಂಥ ಉದ್ದೇಶ ಏನು ಎಂದರೆ. ಕಳೆದ ೩೩ ವರ್ಷಗಳಿಂದ ಇಲ್ಲಿಯುವರೆಗೆ ೧೮ ಪರ್ಸೆಂಟ್‌ಗಳ ಪೈಕಿ ೨ ಪರ್ಸೆಂಟ್ ಸಹ ಈ ಇಲಾಖೆಯಲ್ಲಿ ಭರ್ತಿ ಮಾಡಿಲ್ಲ ಲೆಕ್ಚರರ್ಸ್, ರೀಡರ್ಸ್, ಹಾಗೂ ಪ್ರೊಫೆಸರ್ಸ್ ಹುದ್ದೆಗಳು ಈ ಸಾಲಿನಲ್ಲಿ ಏನು ಖಾಲಿ ಬೀಳುತ್ತವೆ. ಅವುಗಳನ್ನು ಈಗಿನ ಪದ್ಧತಿ ಪ್ರಕಾರ ತುಂಬಿದರೆ ೧೮ ಪರ್ಸೆಂಟ್ ಭರ್ತಿ ಮಾಡುವುದು ಇನ್ನು ಹತ್ತು ವರ್ಷಗಳಾದರೂ ಸಹ ಸಾಧ್ಯವಾಗುವುದಿಲ್ಲ, ಆದಕಾರಣ ೫೦ ಪರ್ಸೆಂಟ್‌ವರೆಗೆ ಡೈರಕ್ಟ್ ರೆಕ್ರೂಟ್‌ಮೆಂಟ್ ಮೂಲಕ ಭರ್ತಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಖಾಸಗೀ ಸಂಸ್ಥೆಯವರು ಶೇಕಡಾ ನೂರರಷ್ಟು ಗ್ರಾಂಟನ್ನು ಸರ್ಕಾರದಿಂದ ಪಡೆದುಕೊಳ್ಳುತ್ತಾರೆ. ಆದರೆ ಅಲ್ಲಿ ಹರಿಜನ ಮತ್ತು ಗಿರಿಜನರಿಗೆ ೧೮ ಪರ್ಸೆಂಟ್‌ವರೆಗೆ ಪ್ರಾತಿನಿಧ್ಯ ಕೊಡದೆ ತಮ್ಮ ಜಾತಿಯುವರನ್ನೇ ತಮ್ಮ ಬಳಗದವರನ್ನೇ ತುಂಬುತ್ತಾರೆ. ಇಂತಹ ಸಂದರ್ಭದಲ್ಲಿ ಅವರಿಗೆ ಗ್ರಾಂಟ್ ಕಟ್ (cut) ಮಾಡುತ್ತೀರಾ ಅಥವಾ ಅವರನ್ನು ೩ ವರ್ಷ ಇಲ್ಲವೇ ೬ ವರ್ಷಗಳ ಕಾಲ ಜೈಲಿಗೆ ಕಳುಹಿಸುತ್ತೀರಾ ಎಂಬುದನ್ನು ತಿಳಿಸಬೇಕು. ಈಗ ಸುಮಾರು ೨ ಲಕ್ಷ ಮಂದಿ ಎಸ್ ಎಸ್. ಎಲ್. ಸಿ. ಪಾಸ್ ಮಾಡಿದ ಹರಿಜನ ಮತ್ತು ಗಿರಿಜನರಿದ್ದಾರೆ, ೫೦–೬೦ ಸಾವಿರ ಮಂದಿ ಪದವೀಧರರು ಇದ್ದಾರೆ. ಇವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಖಾಸಗೀ ವಿದ್ಯಾ ಸಂಸ್ಥೆಗಳಿಗೆ ಏನಾದರು ಆದೇಶ ಕೊಟ್ಟಿದ್ದೀರಾ ಹೇಗೆ ?

ಶ್ರೀ ಜಿ.ಬಿ. ಶಂಕರರಾವ್.—ಕೊಟ್ಟಿದ್ದೇವೆ

ಶ್ರೀ ಎಸ್.ಎಸ್. ಆರಕೇರಿ.—ತಾವು ಆದೇಶ ಕೊಟ್ಟಿದ್ದರೂ ಸಹ ಅವರು ಅದನ್ನು ಜಾರಿಗೆ ಕೊಡುತ್ತಿಲ್ಲ.

ಶ್ರೀ ಜಿ.ಬಿ. ಶಂಕರರಾವ್.—ಅದಕ್ಕಾಗಿಯೇ ಒಂದು ಸಮಗ್ರವಾದಂಥ ಕಾನೂನನ್ನು ತರುತ್ತಿದ್ದೇವೆ.

SRI S.S ARAKERI.—The present Hon. Minister is not responsible for the faults which have been committed during the last 30 years in the name of Education and in the name of Democracy ಆದ್ದರಿಂದ ನಾವೂ ಸಹ ಅದೇ ತಪ್ಪನ್ನು ಮಾಡುವುದು ಬೇಡ ಎಂದು ಹೇಳುತ್ತಿದ್ದೇನೆ.

ಇನ್ನು ನಮ್ಮ ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳನ್ನು ತೆಗೆದುಕೊಂಡರೆ, ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಹರಿಜನ ಗಿರಿಜನ ನೌಕರರು ಒಂದು ಪರ್ಸೆಂಟ್ ಕೂಡ ಇಲ್ಲ, 'ಕೇವಲ ಜೀರೋ' ಆಗಿದೆ ಅದೇರೀತಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಂದೇ ಜಾತಿಯವರು ಇದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಶೇಕಡಾ ೮೦ರಷ್ಟು ಬ್ರಾಹ್ಮಣರಿದ್ದರೆ, ನಮ್ಮವರು ಒಂದೆರಡು ಪರ್ಸೆಂಟ್ ಮಾತ್ರ ಇದ್ದಾರೆ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಶೇಕಡಾ ೬೦ ರಿಂದ ೬೫ ಪರ್ಸೆಂಟ್‌ವರೆಗೆ ಒಂದೇ ಲಿಂಗಾಯಿತ ಜಾತಿಯವರು ಇದ್ದಾರೆ. ಅಲ್ಲಿ ಉಪಕುಲಪತಿಗಳಾಗಿದ್ದ ಶ್ರೀ ಪಾವಟೆ ಅವರು ಹಾಗೂ ಈಗಿನ ಶ್ರೀ ಒಡೆಯರ್ ಅವರು ಲಿಂಗಾಯಿತರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬರೀ ಒಕ್ಕಲಿಗರೇ ಇದ್ದಾರೆ. ಇದ್ದರೆ ಒಂದು ಹತ್ತು ಪರ್ಸೆಂಟ್‌ವರೆಗೆ ಬ್ರಾಹ್ಮಣರು ಹಾಗೂ ಇತರೇ ಜಾತಿಯವರು ಇರಬಹುದು. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಹರಿಜನ ಮತ್ತು ಗಿರಿಜನರಿಗೆ ನೌಕರಿಗಳಲ್ಲಿ ಸರಿಯಾದ ಪ್ರಾತಿನಿಧ್ಯ ಇಲ್ಲದಿರುವ ಕಾರಣ ನಮಗೇ ಒಂದು ಪ್ರತ್ಯೇಕವಿಶ್ವವಿದ್ಯಾನಿಲಯವನ್ನು ಮಂಜೂರು ಮಾಡಿಕೊಡಿ ಈಗ ಹೊಸದಾಗಿ ಮಂಗಳೂರು ಮತ್ತು ಗುಲ್ಬರ್ಗದಲ್ಲಿ ಒಂದೊಂದು ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುತ್ತಿದ್ದೀರಿ. ಅಲ್ಲಿಯಾದರೂ ಸಹ ಈ ೧೮ ಪರ್ಸೆಂಟ್‌ನ್ನು ಕೂಡಲೇ ತುಂಬುವಂತೆ ತಾವು ಆದೇಶ ಕೊಡಬೇಕು.ಮತ್ತು ಹರಿಜನರನ್ನೇ ಉಪಕುಲಪತಿಗಳನ್ನಾಗಿ ನೇಮಕ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್. —ಈಗ ಹರಿಜನ ಮತ್ತು ಗಿರಿಜನರ ಪೈಕಿಯೇ ಯಾರನ್ನಾದರೂ ಉಪಕುಲಪತಿಗಳನ್ನಾಗಿ ನೇಮಕ ಮಾಡಲು ಸರಿಯಾದವರು ಸಿಗುವುದು ಕಷ್ಟ ಆದಕಾರಣ ಮಾನ್ಯ ಅರಕೇರಿ ಅವರನ್ನೇ ಉಪಕುಲಪತಿಯನ್ನಾಗಿ ನೇಮಕ ಮಾಡಿದರೆ ಈ ಸಮಸ್ಯೆ ಪರಿಹಾರವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಅದಕ್ಕೂ ಮೊದಲು ತಾವು ನಡೆಸುತ್ತಿರುವ ಸಂಸ್ಥೆಗಳಲ್ಲಿ ಹರಿಜನ ಮತ್ತು ಗಿರಿಜನರಿಗೆ ಸೂಕ್ತ ಪ್ರಾತಿನಿಧ್ಯ ಕೊಡಿ.

ಶ್ರೀ ಎಸ್.ಎಸ್. ಅರಕೇರಿ.—ನಾನು ಉಪಕುಲಪತಿಯಾಗಿ ಹೋಗಲು ತಯಾರಿಲ್ಲ. I would be more forceful in politics only.

ಶ್ರೀ ಜಿ.ಬಿ. ಶಂಕರರಾವ್.—ಮಾನ್ಯ ಆನಂದರಾವ್ ಅವರು ಶ್ರೀ ಅರಕೇರಿಯವರನ್ನು ಉಪಕುಲಪತಿಗಳನ್ನಾಗಿ ನೇಮಕ ಮಾಡಿ ಎಂದು ಹೇಳಿದರು. ಅದಕ್ಕೆ ನನ್ನ ವಿರೋಧ ಏನೂ ಇಲ್ಲ. ಆದರೆ ಅವರನ್ನು ಉಪಕುಲಪತಿಗಳನ್ನಾಗಿ ನೇಮಕ ಮಾಡಿದ ಮೇಲೆ, ಅಲ್ಲಿ ಶೇಕಡಾ ನೂರರಷ್ಟು ಹರಿಜನ ಮತ್ತು ಗಿರಿಜನರೇ ಇದ್ದಾರೆಂದು ಯಾರಾದರು ನನ್ನ ಮೇಲೆ ಆಪಾದನೆ ಮಾಡಿದರೆ, ತಾವುಗಳು ನನಗೆ ರಕ್ಷಣೆ ಕೊಡುತ್ತೀರಾ ?

ಶ್ರೀ ಮಳ್ಳೂರು ಆನಂದರಾವ್.–ಅವರು ಶೇಕಡಾ ನೂರರಷ್ಟು ಹರಿಜನರನ್ನೇ ತುಂಬುತ್ತಾರೆಂದು ತಾವೇಕೆ ಕಲ್ಪನೆ ಮಾಡಿಕೊಳ್ಳುತ್ತೀರಿ ?

ಶ್ರೀ ಎಸ್.ಎಸ್. ಅರಕೇರಿ.—ನಾನು ಆ ರೀತಿ ಶೇಕಡಾ ನೂರರಷ್ಟು ನಮ್ಮವರನ್ನೇ ತುಂಬುವುದಿಲ್ಲ. ರಾಜ್ಯಾಂಗದ ವಿಧಿಯ ಪ್ರಕಾರವೇ ನೇಮಕ ಮಾಡುತ್ತೇನೆ. ಬೇರೆಯವರಂತೆ ನಾನು ಜಾತಿವಾದಿ ಆಗುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ಹಾಗಿದ್ದರೆ, ತಾವು ಆ ಹುದ್ದೆಯನ್ನು ವಹಿಸಿಕೊಳ್ಳಲು ತಯಾರಿದ್ದೀರಾ ?

ಶ್ರೀ ಎಸ್.ಎಸ್. ಅರಕೇರಿ.—ನಾನು ಮೊದಲೇ ಹೇಳಿದಂತೆ ಆ ಹುದ್ದೆಯನ್ನು ವಹಿಸಿಕೊಳ್ಳಲು ತಯಾರಿಲ್ಲ. ಈ ಮೊದಲು ನಾನು ಹೈಕೋರ್ಟಿನ ಜಡ್ಜ್ ಆಗತಕ್ಕಂಥ ಅವಕಾಶ ಸಿಕ್ಕಿತ್ತು. ಆದರೆ ನಾನು ಹೋಗಲಿಲ್ಲ. I would like to remain as a politician and serve the cause of downtrodden of this country.

೬-೩೦ ಪಿ. ಎಂ.

ಶ್ರೀ ಟಿ. ಚೌಡಯ್ಯ.—ಹೈಕೋರ್ಟ್ ಜಡ್ಜಾಗಿ ನಾವು ಹೋಗಲಿಲ್ಲ ಎಂದು ಹೇಳಿದರು, ಮಂತ್ರಿ ಗಿಲಸಕೊಟ್ಟರೆ ಹೋಗುತ್ತೀರಾ?

SRI S. S. ARAKERI.—Thank you very much.
ಅಧ್ಯಕ್ಷರು.—ಅರ್ಜಿ ಹಾಕಿಕೊಂಡಿರಬೇಕು ಅವರು.

SRI S.S. ARAKERI.—I am a disciple of Dr. Ambedkar, therefore I am sincerely putting my efforts to uplift the downtrodden even in Agriculture Universityಯಲ್ಲೂ ಕೂಡ ನ್ಯಾಯವಾದಂಥ ಷೆಡ್ಯೂಲ್ಡ್ ಕ್ಯಾಸ್ಟ್ ಪರ್ಸೆಂಟೇಜ್ ಇಲ್ಲ. ಈ ಶಿಕ್ಷಣ ಖಾತೆ, ಈ ವಿದ್ಯಾಮಂತ್ರಿಗಳ ಖಾತೆ ಏನಿದೆ ಇದು ಬಹಳ ಪವಿತ್ರವಾದ ಖಾತೆ. ಆದರೆ ಇಲ್ಲಿ ಹರಿಜನ-ಗಿರಿಜನರಿಗೆ ಆದಂಥ ಅನ್ಯಾಯ ಬೇರೆ ಎಲ್ಲೂ ಆಗಿಲ್ಲ. ಇದರಲ್ಲಿ ಶಿಕ್ಷಣ ಸಚಿವರ ಜವಾಬ್ದಾರಿ ಬಹಳ ಇದೆ. ಪ್ರೈಮರಿ ಎಜುಕೇಷನ್, ಸೆಕೆಂಡರಿ ಎಜುಕೇಷನ್ ಕಾಲೇಜುಮಟ್ಟದಲ್ಲೂ ಎಲ್ಲೆಲ್ಲೂ ಕೂಡ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಎಂಪ್ಲಾಯ್‌ಮೆಂಟ್‌ನಲ್ಲಿ, ಅಡ್ಮಿಷನ್‌ನಲ್ಲಿ ಸೀಟುಗಳನ್ನು ಹಂಚುವುದರಲ್ಲಿ ಮೆಡಿಕಲ್ ಕಾಲೇಜಿನಲ್ಲಿ, ಇಂಜನಿಯರಿಂಗ್ ಕಾಲೇಜಿನಲ್ಲಿ ಸರಿಯಾಗಿ ಸೀಟುಗಳ ವಿತರಣೆಯಾಗುತ್ತಾ ಇಲ್ಲ. ಆದ್ದರಿಂದ ಮೆಡಿಕಲ್ ಕಾಲೇಜಿನಲ್ಲಿ, ಇಂಜನಿಯರಿಂಗ್ ಕಾಲೇಜಿನಲ್ಲಿ, ಟೆಕ್ನಿಕಲ್ ಎಜುಕೇಷನ್‌ನಲ್ಲಿ ಎಸ್. ಸಿ.ಯವರಿಗೆ ಸರಿಯಾಗಿ ಸೀಟುಗಳನ್ನು ವಿತರಣೆಮಾಡಬೇಕು ಎಂದು ಮಾನ್ಯ ಶಿಕ್ಷಣ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ವರುಷ ೫ (this year 1980) ಇಂಜನಿಯರಿಂಗ್ ಕಾಲೇಜುಗಳನ್ನು ೫, ೩ ಬಿಎಡ್ ಕಾಲೇಜುಗಳನ್ನು ಬೇರೆ ಜಾತಿಯವರಿಗೆ ಕೊಟ್ಟಿದ್ದಾರೆ ಹರಿಜನ. ಶಿಕ್ಷಣ ಸಂಸ್ಥೆಗೆ ಈ ವರುಷ ಒಂದು ಕೊಟ್ಟಿಲ್ಲ. ಇನ್ನು ಮುಂದಾದರೂ ಕೂಡ ಕೊಡುವಾಗ ಎಸ್.ಸಿಯವರ ಬೇಡಿಕೆ ಬಂದರೆ ದಯಮಾಡಿ ಕೊಡುತ್ತಾ ಇರಿ ಎಂದು ಹೇಳಬಯಸುತ್ತೇನೆ. ಇವತ್ತು ಸ್ಪಷ್ಟವಾದಂಥ ಒಂದು ಮಾತನ್ನು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಶಿಕ್ಷಣ ಇಲಾಖೆಯಲ್ಲಿ ಏಡೆಡ್ ಇನ್‌ಸ್ಟಿಟ್ಯೂಷನ್ಸ್ ಏನಿದೆ ಅಲ್ಲೂ ಹೇಳತೀರದ ಅನ್ಯಾಯವಾಗಿದೆ. ಕಾಲೇಜು ಮಟ್ಟದಿಂದ ನರ್ಸರಿ ಮಟ್ಟದವರೆಗೆ ಅನ್ಯಾಯವಾಗಿದೆ. ಮಾನ್ಯ ಮಳ್ಳೂರು ಆನಂದರಾಯರು ೧೬೦ ಕೋಟಿ ರೂಪಾಯಿಗಳನ್ನು ಶವಸಂಸ್ಕಾರಕ್ಕೆ ಹಾಕುತ್ತಿದ್ದೇವೆಂದು ಹೇಳಿದರು. ಅದನ್ನು ನಾನು ಒಪ್ಪುವುದಿಲ್ಲ. ಕರಪ್ಷನ್ ಹೋಗಬೇಕು, ಟೀಚರ್ಸ್‌ಗೆ ನ್ಯಾಯವಾದಂಥ ಸಂಬಳ ಸಿಗಬೇಕು. ಮಕ್ಕಳು ವಿದ್ಯಾವಂತರಾಗಬೇಕು. ಇದು ಆಗಬೇಕಾದರೆ ಸಂಪೂರ್ಣವಾಗಿ ಈ ಶಿಕ್ಷಣವನ್ನು ಪ್ರೈಮರಿ ಹಂತದಿಂದ ಹಿಡಿದು ಕಾಲೇಜು ಮಟ್ಟದವರೆಗೆ ರಾಷ್ಟ್ರೀಕರಣ ಮಾಡುವುದು ಒಂದೇ ಒಂದು ದಾರಿ. You must nationalise all the educational institutions. ನೂರಕ್ಕೆ ನೂರು ಗ್ರಾಂಟ್ ಕೊಡುವಾಗ ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್ ಕೈಯೊಳಗೆ ಏಕೆ ಕೊಡಬೇಕು ಎಂದು ಮಾನ್ಯ ಶಿಕ್ಷಣ ಸಚಿವರನ್ನು ಕೇಳುತ್ತೇನೆ. ನೂರಕ್ಕೆ ನೂರು ಗ್ರಾಂಟ್ ಕೊಟ್ಟಮೇಲೆ ಅವರ ಕಾರ್ಯ ಏನು? ತಮ್ಮ ಬಳಗದವರನ್ನು, ತಮ್ಮ ಬಂಧುಗಳನ್ನು ಜಾತಿಯವರನ್ನು ತುಂಬುವುದು ಅವರ ಕೆಲಸವೆ ಇದು ಅನ್ಯಾಯ ಆದ್ದರಿಂದ ಶಿಕ್ಷಣ ರಾಷ್ಟ್ರೀಕರಣವಾಗಬೇಕು ಎಂದು ಹೇಳುತ್ತಿದ್ದೇನೆ. ಕೇಂದ್ರ ಶಿಕ್ಷಣ ಸಚಿವರಾದ ಶ್ರೀ ಶಂಕರಾನಂದ ಅವರು ಎರಡು ತಿಂಗಳ ಹಿಂದೆ ಬೆಂಗಳೂರಿಗೆ ಬಂದಾಗ ನಮ್ಮ ಶಿಕ್ಷಣ ಸಚಿವರೂ ಇದ್ದರು. ಈ ಸಮಸ್ಯೆಗೆ ರಾಷ್ಟ್ರೀಕರಣ ಮಾಡುವುದು ಒಂದೇ ದಿವ್ಯೌಷಧ ಎಂದು ನಾನು ಹೇಳಿದ್ದೇನೆ. ಶಿಕ್ಷಣ ಸಂಸ್ಥೆಗಳು ಅನ್ಯಾಯಗಳ ತೌರುಮನೆಯಾಗಿವೆ, ಅಲ್ಲಿ ಅನ್ಯಾಯ ತುಂಬಿ ತುಳುಕಾಡುತ್ತಾ ಇದೆ, ಆದ್ದರಿಂದ ಇದನ್ನು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡುವುದಾದರೆ, ಹರಿಜನ ಗಿರಿಜನರಿಗೆ, ನ್ಯಾಯ ಸಿಗುತ್ತದೆ, ಮಕ್ಕಳಿಗೆ ನ್ಯಾಯ ಸಿಗುತ್ತದೆ, ಪಾಲಕರಿಗೂ ನ್ಯಾಯ ಸಿಗುತ್ತದೆ. ಶಿಕ್ಷಕರಿಗೆ ೪೦೦ ರೂಪಾಯಿ ಸಂಬಳ ಬಂದರೆ ಅಷ್ಟಕ್ಕೆ ಸಹಿ ಹಾಕುತ್ತಾರೆ, ಕಡಿಮೆ ತೆಗೆದುಕೊಳ್ಳುತ್ತಾರೆ ಆದ್ದರಿಂದ ಚೆಕ್ ಮೂಲಕ ಸಂಬಳ ಪಾವತಿ ಮಾಡುವ ಸಿಸ್ಟಂ ಜಾರಿಗೆ ತಂದಿರಿ, ಈಗ ಚೆಕ್ ಕಳಿಸಿದರೆ

೧೫೦ ರೂಪಾಯಿಗಳನ್ನು ಇನ್‌ಸ್ಟಿಟ್ಯೂಷನ್ಸ್‌ಗೆ ಕೊಡಬೇಕು ಎಂದು ಮುರಿದು ಕೊಳ್ಳುತ್ತಾರೆ. ಇದರಿಂದ ಹರಿಜನ-ಗಿರಿಜನರಿಗೆ ಮತ್ತು ಇತರೆಯವರಿಗೂ ಕೂಡ ಬಹಳ ಅನ್ಯಾಯವಾಗುತ್ತಿದೆ. ಇದನ್ನು ತಡೆಯಲಿಕ್ಕೆ ತಾವು ಶಿಕ್ಷಣವನ್ನು ರಾಷ್ಟ್ರೀಕರಣ ಮಾಡಲಿಕ್ಕೆ ತೊಂದರೆಗಳಿದ್ದರೂ ಕೂಡ ಆ ದಿಶೆಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

SRI M.C. NANAIAH.—He can continue his speech tomorrow Sir. It is already 6.30 now.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾಳೆ ದಿವಸ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು ಇವತ್ತು ಈ ಬಗ್ಗೆ ಡಿಸ್ಕಷನ್ ಕ್ಲೋಸ್ ಆಗಬೇಕು. ಇವತ್ತು ಎಷ್ಟು ಹೊತ್ತು ಮಾನ್ಯ ಸದಸ್ಯರು ಭಾಷಣ ಮಾಡುತ್ತಾರೋ ಮಾಡಲಿ. ಇವತ್ತು ಶಿಕ್ಷಣ ಖಾತೆ ಡಿಮ್ಯಾಂಡ್ ಮುಗಿಯಬೇಕಾಗಿತ್ತು. ಆದರೆ ಇನ್ನೂ ಅನೇಕ ಜನ ಭಾಷಣಕಾರರು ಇದ್ದಾರೆ. ಆದ್ದರಿಂದ ಡಿಸ್ಕಷನ್ ಇವತ್ತು ಮುಗಿಯಬೇಕು ಎಂಬ ಧೋರಣೆ ಇದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ಸಿ. ನಾಣಯ್ಯ.—ಮಾನ್ಯ ಸದಸ್ಯರಿಗೆ ೫-೧೦ ನಿಮಿಷ ಕೊಟ್ಟರೂ ಅವರು ೩೦-೪೦ ನಿಮಿಷ ತೆಗೆದುಕೊಳ್ಳುತ್ತಾರೆ. ಇವತ್ತು ಬೆಳಿಗ್ಗೆ ೯ ಗಂಟೆಯಿಂದ ಈಗ ೬-೩೦ ಗಂಟೆವರೆಗೆ ಕೂತಿದ್ದೇವೆ. ಪ್ರತಿ ದಿವಸ ಈ ರೀತಿ ಯಾದರೆ ಕಷ್ಟವಾಗುತ್ತದೆ.

ಶ್ರೀ ಎಸ್. ಎಸ್. ಅರಕೇರಿ.—ಅಡಲ್ಟ್ ಎಜುಕೇಷನ್ (ಪ್ರೌಢ ವಯಸ್ಕರ ಶಿಕ್ಷಣ) ಬಗ್ಗೆ ಹೇಳುವುದಾದರೆ, ೧೯೭೯-೮೦ ರಲ್ಲಿ ೨ ಲಕ್ಷ ಜನನಿಗೆ ಅಡಲ್ಟ್ ಎಜುಕೇಷನ್ ಕೊಡಬೇಕು ಎಂದು ಇತ್ತು. ಈ ಟಾರ್ಗೆಟ್ಟನ್ನು ಮುಟ್ಟಲಿಲ್ಲ. ಈಗ ೧೯೮೦-೮೧ ರಲ್ಲಿ ೩ ಲಕ್ಷ ಎಂದು ಇದೆ. ಇದಕ್ಕಾಗಿ ೨.೨೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಹಿಂದಿನ ಸಾರಿ ಟಾರ್ಗೆಟ್ ಮುಟ್ಟಲಿಲ್ಲ ಅಂದ ಮೇಲೆ ಮುಂದಿನ ಸಾರಿ ೩ ಲಕ್ಷ ಅಡಲ್ಟ್ ಎಜುಕೇಷನ್ ಪ್ರಸಾರ ಮಾಡಲಿಕ್ಕೆ ಹೇಗೆ ಸಾಧ್ಯ. ಹೆಡ್ ಆಫೀಸ್ ಇರುವುದು ಮೈಸೂರಿನಲ್ಲಿ, ಮುಖ್ಯವಾಗಿ ಇಲ್ಲಿ ಕ್ಯಾಪಿಟಲ್‌ನಲ್ಲಿ ಬರಬೇಕು ಎಂದು ತಿಳಿದುಕೊಂಡು ತಮಗೆ ಸಲಹೆ ಕೊಡುತ್ತಿದ್ದೇನೆ, ಅಡಲ್ಟ್ ಎಜುಕೇಷನ್‌ನಲ್ಲಿ ವರ್ಷಕ್ಕೆ ೩ ಲಕ್ಷ ಅಥವಾ ೪ ಲಕ್ಷದವರೆಗೆ ಎಜುಕೇಷನ್ ಕೊಡಬೇಕು ಎಂದು ಮಾಡುವುದಾದರೆ ೨೫ ವರ್ಷಗಳಾದರೂ ಮುಗಿಯುವುದು ಆಗುವುದಿಲ್ಲ. ೬೭-೭೦ ಲಕ್ಷ ನಿರಕ್ಷರಸ್ತರನ್ನು ಕವರಪ್ ಮಾಡಬೇಕಾದರೆ ೩-೪ ಡಿಕೇಡ್ಸ್ ಆಗುತ್ತದೆ, ಅಡಲ್ಟ್ ಎಜುಕೇಷನ್‌ನ ಸೌಲಭ್ಯಗಳು ಹರಿಜನ. ಗಿರಿಜನ ಕೇರಿಗಳಿಗೆ ಹೋಗುತ್ತಾ ಇಲ್ಲ. ಆದ್ದರಿಂದ Special efforts must be made by the Adult education board.

ಇನ್ನು ಡಿಪಾರ್ಟ್‌ಮೆಂಟ್ ಆಫ್ ಅಚೀವ್ಸ್ to spread the adult education and its benefits to the Harijans througout State ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಬಿಜಾಪುರ ಇಂಟರ್‌ನ್ಯಾಷನಲ್ ಪಟ್ಟಣ, ಅದು ಇತಿಹಾಸ ಪ್ರಸಿದ್ಧವಿದೆ, ಶತಮಾಗಳಿಂದ ಮಹತ್ವದ್ದು. ಈ ಡಿಪಾರ್ಟ್‌ಮೆಂಟ್ ಯಾವುದೇ ದೃಷ್ಟಿಯಿಂದ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಇದರ ಬಗ್ಗೆ ಸರ್ಕಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ಡಿಪಾರ್ಟ್‌ಮೆಂಟ್‌ನಲ್ಲಿ ಷೆಡ್ಯೂಲ್ಡ್ ಕಾಸ್ಟ್ ಷೆಡ್ಯೂಲ್ಡ್ ಟ್ರೈಬ್ ಆಫೀಸರ್ಸ್ ಇದ್ದಾರೆ. ಅವರಿಗೆ ಪ್ರಮೋಷನ್ಸ್ ಇಲ್ಲ, ಸರಿಯಾದ ಪರ್ಸೆಂಟೇಜ್ ಇಲ್ಲ. ಆದುದರಿಂದ ಈ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸಮಾಡುವಂಥ ಎಸ್.ಸಿ. ಎಸ್.ಟಿ. ಇವರಿಗೆ ಸರಿಯಾದಂಥ ನ್ಯಾಯವನ್ನು ದೊರಕಿಸಿಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಆನಂದರಾಯರು ಹಿಂದಿನ ಕಾಲದ ಗುರುಕುಲಗಳು ಬಹಳ ಶ್ರೇಷ್ಠವಾದುವು ಎಂದು ಹೇಳಿದರು ಋಗ್ವೇದ ಕಾಲದಿಂದ ಅಥರ್ವಣ ವೇದದ ಕಾಲದವರೆಗೆ ಏನು ಶಿಕ್ಷಣ ಪದ್ಧತಿ ಇತ್ತು, ಅದು ಒಂದು ಜನಾಂಗಕ್ಕೆ ಮಾತ್ರ ಮುಡುಪಾಗಿತ್ತು, ಬ್ರಾಹ್ಮಣರು ವಿದ್ಯೆ ಕಲಿಯಬೇಕು, ರಾಜರು ಯುದ್ಧವಿದ್ಯೆ ಕಲಿಯಬೇಕು, ವೈಶ್ಯರು ವ್ಯಾಪಾರ ಮಾಡಬೇಕು, ಶೂದ್ರರು ಕಸ ಬಳಿಯಬೇಕು ಎಂದು ಇತ್ತು, ಶೂದ್ರರಿಗೆ ವಿದ್ಯೆ ಇಲ್ಲ, ನಮಗೆ ಕಸ ಬಳಿಯುವ ಕೆಲಸ ಎಂದು ಇತ್ತು ಆದ್ದರಿಂದ ದಯಮಾಡಿ ವೇದಗಳ ಕಾಲಕ್ಕೆ ಹೋಗಬೇಡಿರಿ, ಆ ವಿಷಯ ತೆಗೆಯಬೇಡಿರಿ. Really we are grateful to the British rule here, who have introduced the modern education

otherwise we would not have the benifits of Education in this country and the untouchables would not be have learn the meaning of democracy. Parliamentary democracy ಎಲ್ಲಿ. ಇಲ್ಲಿ ರಾಜರ ಅರಸೊತ್ತಿಗೆ ಏನಾಯಿತು. We must owe to the British people for Radica Education given all the people.

ಶ್ರೀ ವಂಳ್ಳೂರು ಆನಂದರಾವ್.—ನಾನು ಹೇಳದೇ ಇರುವುದನ್ನು ಅವರು ಹೇಳುತ್ತಿದ್ದಾರೆ. ನಾನು ಆ ರೀತಿ ಹೇಳಲೇ ಇಲ್ಲ.

ಶ್ರೀ ಎಸ್. ಎಸ್, ಅರಕೇರಿ.—ಶೃಂಗೇರಿ ಮಠದಲ್ಲಿ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಬ್ರಾಹ್ಮಣರು ಇದ್ದಾರೆ. ಒಬ್ಬ ಹರಿಜನ ಹುಡುಗನೂ ಇಲ್ಲ.

ಶ್ರೀ ಎ.ಜಿ. ಕೊಡ್ಗಿ.—ಅರ್ಜಿ ಕೊಡಿ.

ಶ್ರೀ ಎಸ್. ಎಸ್. ಅರಕೇರಿ.—ಎಂ.ಎ, ಎಲ್.ಎಲ್.ಬಿ. ಮಾಡಿಕೊಂಡಿರುವವರಿಗೆ ಎಂ.ಬಿ.ಬಿ.ಎಸ್, ಮಾಡಿಕೊಂಡಿರುವವರಿಗೆ ನೌಕರಿ ಕೊಡಲಿಕ್ಕೇ ತಯಾರಿಲ್ಲ.

ಇನ್ನು ಸಂಸ್ಕೃತವನ್ನು ನಮ್ಮ ವಿದ್ಯಾರ್ಥಿಗಳು ಕಲಿತರೆ ಯಾವ ನೌಕರಿ ಕೊಡುತ್ತೀರಿ ಕೊನೆಯದಾಗಿ ಒಂದು ಮಾತನ್ನು ಹೇಳುವುದಾದರೆ ೧೯೭೭ ರಲ್ಲಿ ಸ್ಪೆಷಲ್ ರೆಕ್ರೂಟ್‌ಮೆಂಟ್‌ನ್ನು ಪ್ರೈಮರಿ, ಮತ್ತು ಸೆಕೆಂಡರಿ ಎಜುಕೇಷನ್‌ನವರಿಗೆ ಅನ್ವಯವಾಗುವ ಹಾಗೆ ಜಿ.ಓ. ಮಾಡಿದ್ದಾರೆ, ಅದರಿಂದ ಸ್ವಲ್ಪ ನ್ಯಾಯ ಸಿಕ್ಕಿದೆ ಅದನ್ನು ಏನಾದರೂ ಸರ್ಕಾರದವರು ವಿತ್ ಡ್ರಾ (with draw) ಮಾಡುವುದಾದರೆ, ಹರಿಜನ ಗಿರಿಜನರಿಗೆ ರಾಜ್ಯಾಂಗದ ಪ್ರಕಾರವಾಗಿ ಅನ್ಯಾಯ ಮಾಡಿದ ಹಾಗಾಗುತ್ತದೆ. ಮಾನ್ಯ ಶ್ರೀ ಶಂಕರ್‌ರಾವ್ ರವರ ಕಾಲದಲ್ಲಿ ಹರಿಜನರಿಗೆ ಅನ್ಯಾಯವಾಗಬಾರದು. ಆ ರೀತಿ ಮಾಡಿದರೆ ಹರಿಜನರ ಶಾಪ ತಟ್ಟೀತು ಆದುದರಿಂದ ಈಗ ಏನೋ ಸರ್ಕಾರಿ ಆದೇಶವನ್ನು with draw ಮಾಡುತ್ತಾರೆಂದು ತಿಳಿದು ಬಂದಿದೆ. ಆ ರೀತಿ ಮಾಡಬಾರದೆಂದು ಮಂತ್ರಿಮಣ್ಮ ಕೇಳಿಕೊಂಡು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈ ದಿನ ಬೆಳಿಗ್ಗೆ ಕಾನೂನು ಮತ್ತು ಪಶುಸಂಗೋಪನಾ ಮಂತ್ರಿಯವರ ಹೇಳಿಕೆಯಾದ ನಂತರ, ಮಾನ್ಯ ಶ್ರೀ ಎ. ಲಕ್ಷ್ಮೀಸಾಗರ್‌ರವರಿಗೂ ಮತ್ತು ಶ್ರೀ ಎಂ. ಮಳ್ಳೂರು ಆನಂದರಾವ್ ರವರಿಗೂ ಮಾತುಕತೆ ನಡೆಯುತ್ತಿತ್ತು. ಆಗ ಅಹಂಕಾರ ಮತ್ತು ದುರಹಂಕಾರ ಎನ್ನ ತಕ್ಕ ಪದಗಳನ್ನು ಉಪಯೋಗಿಸಿದ್ದಾರೆ. ದುರಂಹಕಾರ ಎನ್ನುವುದಕ್ಕೆ ಡಿಕ್ಷನರಿಯಲ್ಲಿ ಏನು ಅರ್ಥವಿದೆ ಎಂದರು.—

" ill found and offensive egotism'' ಎಂದು ಇದೆ ಅಹಂಕಾರಕ್ಕೆ ಏನು ಡಿಕ್ಷನರಿ ಮೀನಿಂಗ್ ಇದೆ ಎಂದರೆ.—

" the making of self sense of self egotism, pride, haughtiness; ಎಂದು ಇದೆ.

In the light of the dictionary meaning of the terms, I feel that hon. Members should avoid using such terms.

SRI B. BHASKAR NAIDU.—They should avoid using that word. But it is not unparliamentary. For decency's sake they may not use.

MR. SPEAKER.—The House now stands adjourned to meet tomorrow at 9.00 A.M.

(The House adjourned at Forty Five Minutes past Six of the Clock to meet at Nine of the Clock on Thursday, the 24th July, 1980.